ಶ್ರೀಕೃಷ್ಣದೇವರಾಯನ ದಿನಚರಿ



ಶ್ರೀ ಕೃಷ್ಣದೇವರಾಯನ ದಿನಚರಿ

ಪ್ರಧಾನ ಸಂಪಾದಕ :
ಪ್ರೊ|| ಎಂ. ವಿ. ಸೀತಾರಾಮಯ್ಯ

ಸಂಪಾದಕ :
ಡಾ|| ವಿ. ಎಸ್. ಎಸ್. ಆಚಾರ್ಯ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
೫೪, ಅರವಿಂದ, ೩ನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ,
ಬೆಂಗಳೂರು - ೧೯
೧೯೮೩

[ಬೆಲೆ : ರೂ. ೧೦-೦೦

SRI KRISHNADEVARAYANA DINACHARI (Diary of Sri Krishnadevaraya) - A Bakhair written on palm-leaves. Edited by Dr. V. S. S. Acharya, Mysore; Chief Editor : Prof. M. V. Seetha Ramiah, Director of Studies, B.M. Sri Smaraka Pratishthana and Published by the Pratishthana, No. 54, Aravinda, 3rd Cross Road, Gavipuram Extension, Bangalore - 560 019. Demy 1/8, xxiv+pp. 64, 1983.

Price : Rs. 10-00

This book has been published with the generous Financial Assistance of the Government of India, Department of Education and Culture.

Printed by :
SWATANTRA MUDRANALAYA
No. 3, B.C.C. Bank Buildings, Chamarajapet,
Bangalore - 560 018

ಮುನ್ನುಡಿ

ಶಿಲಾ ಶಾಸನಗಳು, ನಾಣ್ಯಗಳು, ಮಾಸ್ತಿಗಲ್ಲು-ವೀರಗಲ್ಲುಗಳು ಮತ್ತು ತಾಡ ವೋಲೆ, ಭೂರ್ಜಪತ್ರ ಮತ್ತು ಕಾಗದದ ಮೇಲೆ ಬರೆದ ಪ್ರಾಚೀನ ಹಸ್ತಪ್ರತಿಗಳು, ಬಖೈರುಗಳು, ಕಡತಗಳು, ಮುಂತಾದವು ದೇಶದ ಅಮೂಲ್ಯವಾದ ಸಾಂಸ್ಕೃತಿಕ ಆಸ್ತಿ. ದೇಶದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಇವುಗಳ ಪಾತ್ರ ಹಿರಿದು. ಇವುಗಳ ಸಂರಕ್ಷಣೆ ಸರ್ಕಾರದ ಮತ್ತು ಎಲ್ಲ ಜನರ ಪವಿತ್ರ ಕರ್ತವ್ಯ.

ಹಸ್ತಪ್ರತಿಗಳಲ್ಲಿ ಸಾಹಿತ್ಯ ಕೃತಿಗಳಲ್ಲದೆ ವೈದ್ಯ, ಜ್ಯೋತಿಷ, ಅಶ್ವಶಾಸ್ತ್ರ, ಗಜಶಾಸ್ತ್ರ, ಪಶುವೈದ್ಯ, ಮುಂತಾದ ಶಾಸ್ತ್ರ ವಿಚಾರಗಳೂ ಲಿಖಿತವಾಗಿರುತ್ತವೆ. ಈ ಶಾಸ್ತ್ರಗಳಲ್ಲಿ ನಿಪುಣರಾದವರು ಅನೇಕ ಸಂದರ್ಭಗಳಲ್ಲಿ ಅವುಗಳನ್ನು ಕಾವ್ಯರಚನೆಯ ಧಾಟಿಯಲ್ಲಿಯೇ ಬರೆದಿರುವುದು ಒಂದು ವೈಶಿಷ್ಟ್ಯ. ಆದ್ದರಿಂದ, ಸಾಹಿತ್ಯ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಎಲ್ಲ ಹಸ್ತಪ್ರತಿಗಳೂ ಸಂಗ್ರಹಣವಾಗಬೇಕಾದವು. 1911 ರಷ್ಟು ಹಿಂದೆಯೇ ದಿವಂಗತ ಬಿ ಎಂ. ಶ್ರೀ. ಯವರು ಧಾರವಾಡದಲ್ಲಿ 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂಬ ತಮ್ಮ ಹೊಸಗನ್ನಡ ಯುಗಪ್ರವರ್ತಕ ಭಾಷಣದಲ್ಲಿ "ದೇಶದಲ್ಲಿ ಹುಳು ತಿಂದುಹೋಗದೆ ಉಳಿದಿರುವ ಗ್ರಂಥಗಳನ್ನೆಲ್ಲಾ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚುಹಾಕುವುದು" ಎಂದು ಘೋಷಿಸಿದ್ದರು. ಅದಕ್ಕೂ ಮೊದಲೇ ಬಿ. ಎಲ್. ರೈಸ್ ಸಾಹೇಬರೂ ಆರ್. ನರಸಿಂಹಾಚಾರ್ಯರೂ ಹಸ್ತಪ್ರತಿ ಸಂಗ್ರಹಣ ಕಾರ್ಯವನ್ನು ಪ್ರಾಕ್ತನ ವಸ್ತ್ವನ್ವೇಷಣ ಕಾರ್ಯದ ಅಂಗವಾಗಿ ನಡಸಿಕೊಂಡುಬಂದರು. ಹಸ್ತಪ್ರತಿಗಳ ಸಂಗ್ರಹಣಕಾರ್ಯದಷ್ಟೇ ಮುಖ್ಯವಾದ ಕಾರ್ಯ ಅವುಗಳನ್ನು ಬೆಳಕಿಗೆ ತರುವುದು. ಈ ಕಾರ್ಯವನ್ನು ರೈಸ್ ಅವರು Bibliotheca Carnaticaದ (ಕರ್ಣಾಟಕ ಗ್ರಂಥಾವಳಿ) ಮೂಲಕ ಮಾಡಿ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಏಳಿಗೆಗೆ ಹೆದ್ದಾರಿಯನ್ನು ನಿರ್ಮಾಣ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರಿದಂತೆ ಆ ಕಾಲದಲ್ಲಿ ಜನ್ಮ ತಳೆಯಿತು ಮೈಸೂರಿನ ಓರಿಯಂಟಲ್ ಲೈಬ್ರರಿ ; ಅದರಲ್ಲಿ ಅಮೂಲ್ಯವಾದ ಕನ್ನಡ ಮತ್ತು ಸಂಸ್ಕೃತದ ಹಸ್ತಪ್ರತಿಗಳು ಶೇಖರವಾದುವು. ಮೈಸೂರು ವಿಶ್ವವಿದ್ಯಾನಿಲಯವು ಕನ್ನಡ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿದ ಮೇಲೆ ಕನ್ನಡ ಭಾಷೆಯ ಹಸ್ತಪ್ರತಿಗಳೆಲ್ಲವೂ ಅಲ್ಲಿಗೆ ಸ್ಥಳಾಂತರಗೊಂಡು ಅಲ್ಲಿ ಕನ್ನಡ ಹಸ್ತಪ್ರತಿಗಳ ಭಂಡಾರವೂ ಅವುಗಳ ಪ್ರಕಟನ ಕಾರ್ಯವೂ ನಿರಂತರವಾಗಿ ಸಾಗಿ ಬರುತ್ತಿರುವುದು ಸಂತೋಷದ, ಶ್ಲಾಘ್ಯವಾದ, ವಿಚಾರ. ಇತರ ವಿಶ್ವವಿದ್ಯಾಲಯಗಳು ಈ ಸಂಸ್ಕೃತಿ ಸಂಗೋಪನ ಕಾರ್ಯವನ್ನು ಕೈಗೊಂಡು

ನೆಡಸುತ್ತಿವೆ. ಈ ಮಹತ್ವದ ಕಾರ್ಯವನ್ನು ಬಿ. ಎಂ. ಶ್ರೀ. ಪ್ರತಿಷ್ಠಾನ ಸದ್ಯಕ್ಕೆ ತನ್ನ ಪ್ರಧಾನ ಕರ್ತವ್ಯ ಕಾರ್ಯವಾಗಿ ಕೈಗೆತ್ತಿಕೊಂಡಿದೆ.

ಈ ಮಹತ್ವದ ಕಾರ್ಯವು ಒಬ್ಬಿಬ್ಬರು ಅಥವಾ ಒಂದೆರಡು ಸಂಸ್ಥೆಗಳು ಮಾಡಿ ಮುಗಿಯುವಂಥದಲ್ಲ. ಆಗಬೇಕಾದ ಕಾರ್ಯ ಅಪಾರವಾಗಿದೆ. ಸಹಸ್ರ ಸಂಖ್ಯೆಯಲ್ಲಿ ಹಸ್ತಪ್ರತಿಗಳು ಇನ್ನೂ ನಾಡಿನ ಮೂಲೆ ಮೂಲೆಗಳಲ್ಲಿ ಮನೆತನದ ಆಸ್ತಿಯಾಗಿ ಕತ್ತಲಲ್ಲಿ ಕೊಳೆಯುತ್ತ ಹುಳುತುಹೋಗುವ ಸ್ಥಿತಿಯಲ್ಲಿ ಬಿದ್ದಿವೆ. ಇವುಗಳ ಸಂಗ್ರಹಣ ಕಾರ್ಯ ಅತ್ಯಗತ್ಯವಾಗಿ ತ್ವರಿತವಾಗಿ ಆಗಬೇಕಾಗಿದೆ. ಈ ಕಾರ್ಯದ ಮಹತ್ವವನ್ನು ಕಂಡುಕೊಂಡು ಕೇಂದ್ರ ಸರ್ಕಾರವು ಹಸ್ತಪ್ರತಿಗಳ ಸಂಗ್ರಹಣ ಮತ್ತು ಪ್ರಕಟನ ಕಾರ್ಯಗಳ ಯೋಜನೆಯನ್ನು ರೂಪಿಸಿ, ಅದರಂತೆ ಸ್ವಯಂನಿಯೋಜಿತ ಸಂಸ್ಥೆಗಳಿಗೆ ಧನಸಹಾಯ ಮಾಡಲು ಮುಂದೆ ಬಂದಿದೆ. ಕೇಂದ್ರ ಸರ್ಕಾರವು ನೀಡಿದ ಧನಸಹಾಯದಿಂದ ಈ ವರ್ಷ ಪ್ರತಿಷ್ಠಾನ ಮೂರು ನಾಲ್ಕು ಹಸ್ತಪ್ರತಿಗಳನ್ನು ಪ್ರಕಟಿಸಲು ಸಾಧ್ಯವಾಗಿದೆ. ಈ ಉದಾರ ಸಹಾಯಕ್ಕಾಗಿ ಪ್ರತಿಷ್ಠಾನ ಕೇಂದ್ರ ಸರ್ಕಾರಕ್ಕೆ ಕೃತಜ್ಞವಾಗಿದೆ.

ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯ ಅನ್ವಯ ಪ್ರಕಟವಾಗುತ್ತಿರುವ ಗ್ರಂಥಗಳಲ್ಲಿ ಈ "ಕೃಷ್ಣದೇವರಾಯನ ದಿನಚರಿ"ಯೂ ಸೇರಿದೆ. ದೀರ್ಘಕಾಲದ ಹಾಗೂ ಬಹು ಶ್ರಮಸಾಧ್ಯವಾದ ಗ್ರಂಥ ಸಂಪಾದನ ಕಾರ್ಯವನ್ನೂ, ಮುದ್ರಣ ಕಾರ್ಯವನ್ನೂ ಒಂದು ವರ್ಷದ ಕಾಲಮಿತಿಯಲ್ಲಿ ಮುಗಿಸಿಕೊಟ್ಟು ಕೃತಕೃತ್ಯರಾದ ಸಂಪಾದಕ ವರ್ಗಕ್ಕೆ ಪ್ರತಿಷ್ಠಾನದ ವಂದನೆಗಳು ಸಲ್ಲುತ್ತವೆ.

ನಿಟ್ಟೂರು ಶ್ರೀನಿವಾಸ ರಾವ್
ಅಧ್ಯಕ್ಷ

DIARY OF SRI KRISHNADEVARAYA

This is a palm-leaf manuscript containing the diary or daily routine of King Krishnadevaraya (1509-1529 A.D.) of Vijayanagar. It is said to have been recorded by Mukku Thimmayya and Madayyanavara Mallayya (i.e. Mallayya, son of Madayya), on the orders of the King. It is written on 63 palm-leaves on both sides except the last one, and each leaf is numbered. It is in Kannada Language and script, most probably of the 16th Century A.D.

The narration begins with salutation to Sri Ramanujacharya, the famous propounder of the Visishtadvaita school of philosophy. The King's daily schedule is recounted. Sage Vidyaranya studied the Sastras under his Guru Misra in Kashmira Khanda, learnt the Chintamani Mantra, returned to the Kishkindha region via Ujjaini and Kolhapur, offered prayers to Lakshmi, the goddes of wealth and founded the city of Vidyanagar on the banks of the Hampe Hole (Tungabhadra) in Salivahana Saka year 1125, predicting that it would last for 360 years. The installation of Krishnadevaraya on the throne is also mentioned.

Krishnadevaraya, spoken of as Karnataka Simhasanadhisvara, was the greatest ruler of Vijayanagar. His armies were victorious everywhere and the city was most prosperous. He repulsed the invading Bahamani forces, captured the citadel of Kovilkonda and returning to the capital, organised his army. According to chronicler Abbur Razzak, his army consisted of 2000 Mussalamans and 60,000 Hindu archers, 80,000 cavalry and 2 lakh foot-soldiers. The price of a horse was 100 *ghattiga-s* and that of an elephant 1000 *varahas.* He is said to have purchased 12,000 elephants. It was the practice to send spies to neighbouring places and kingdoms such as Amadanagara, Golakonda, Bedandu Kote, Rajamahendra, Ikkeri, Aagara, Chennapatna, Srirangapatna and Ummattur. He invaded Rachur (Raichur) Doab, marched on Gulbarga, captured Bidar and carried on

war against the rebelious Gangaraya of Ummattur, captured Penukonda and made Srirangapatna the capital of a new province. He also conquered Ikkeri, Aagara, Mudagal, Adavani, Addanki, and crossed the river Krishnaveni (River Krishna) and captured Udayagiri. The war against Gajapathi Pratapa Rudra, ruler of Orissa, ended in friendship, sealed by marriage of his daughter with Krishnadevaraya.

This record mentions 16 jewels which he sent to the Gajapathi Ruler. They are *Benneya Mudde Kanthamale, Navaratna Khachita Gini Tali, Vajrada Sarapani, Tumbiya Tali, Vaidhurya Tali, Vajrada Sarapani, Paccheya Kadaga, Kirumanjiya Muttina Paccheya Sara, Indraneeln Makuta, Vajrada Udidara, Kcmpugala Javadade, Muttina Kaalapendeya, Vajragala Bahupuri, Dodda Muttugala Addagatti, Navaratnada Harige, Navaratna Simhalalata, Muttugala Mogaramba.*

We also learn about Krishnadevaraya's visit to Tirupati, Kalahasti, Kanchi, Srirangam, Tiruvaiyar Tyagaraja, Alwar Tirunagari, Papavinasi, Setu, Srirangapattana and other places, where he worshipped the presiding deities and made costly gifts, before his return to the capital. He also had Tula Purusha at Jambukeshwara.

The names of different officials and officers such as the *Sthanapatis*, the nine *Sampratis (Karanikas)*, 72 *Vinayogis*, *Niyogis*, ministers Appaji, Kondamarasa, Ayyapparasu, Pradhani Timmapparasa, and the *Shodasa Patras* (Balabhadra Patra, Durga Patra, Bhima Patra, Mukunda Patra, Bhikara Patra, Murari Patra, Vajramushti Patra, Turangırevanta Patra, Gajamkusa Patra, Asahayaka Patra, Asani Patra, Mrigendra Patra), Poets Allasani Peddaraja and Mukka Thimmayya are also mentioned. The departments of Kandachara and Avasara are also mentioned. It is interesting to note that the name Karnataka is spelt as ಕರ್ನ್ನಾಟಕ and not as ಕರ್ನಾಟಕ.

This record mentions thet the Raya used to receive the sacred Theertha Prasadam from 108 Tirupatis and Sacred Sandal Prasadam from 72 Siva Sthanas, and he used to enquire whether

worship is being conducted properly in the eight Svayamvyakta places such as Srirangam, Srimushna, Venkatachala, Totadri and other places. It is also mentioned that he visited Tirupati, worshipped Venkataramanaswamy, and gave Sixteen *mahadanas*; he proceeded to Kalahasti, worshipped the God, gifted costly jewels and villages and going to Siva Kanchi and Vishnu Kanchi, worshipped Ekambranatha, Kamakshi, Vardarajaswamy, and Soodikudutta Nachchiyar (Godadevi) and gifted costly jewels and villages. This account is noteworthy.

This palm-leaf manuscript record gives us a graphic account of Krishnadevaraya's daily life and his method of working and conducting affairs of his kingdom.

I acknowledge my deep debt of gratitude to Dr. S. N. Sharma, Sharma Ayurvedic Pharmacy, Vanivilasa Road, Mysore-4, for having kindly given this manuscript. My sincere and grateful thanks are due to Prof. M. V. Seetha Ramaiah and my friend Sri Keladi Gunda Jois, M.A., for bringing this manuscript to light.

Mysore
4-10-82

Dr. V. S. S. Acharya

ಸಂಪಾದಕರ ನುಡಿ

ಕೃಷ್ಣರಾಯರ ದಿನಚರಿಯು ಕೃತ್ಯಗಳ ವಿಸ್ತಾರ

ಇದು ವಿಜಯನಗರ ಸಾಮ್ರಾಜ್ಯಾಧಿಪತಿಯಾಗಿದ್ದ ಕೃಷ್ಣದೇವರಾಯನ (ಕ್ರಿ. ಶ. 1509-1529) ದಿನಚರಿಯ ವಿವರಗಳನ್ನು ಒಳಗೊಂಡ ತಾಳೆಗರಿ ಹಸ್ತಪ್ರತಿ. ದೊರೆಯ ಅಪ್ಪಣೆಯಂತೆ ಇದನ್ನು ಮುಕ್ಕುತಿಮ್ಮಯ್ಯ ಮತ್ತು ಮಾದಯ್ಯನವರ ಮಲ್ಲಯ್ಯ ಎಂಬವರು ಬರೆದರು. ಇದು ಎರಡು ಕಡೆಗಳಲ್ಲೂ ಬರೆಯಲ್ಪಟ್ಟ 63 ತಾಳೆಗರಿಗಳನ್ನು ಒಳಗೊಂಡಿದೆ. ಪ್ರತಿಯೊಂದು ಗರಿಯಲ್ಲಿ ಪುಟದ ಸಂಖ್ಯೆಯನ್ನು ಬರೆಯಲಾಗಿದೆ. ಲಿಪಿ ಮತ್ತು ಭಾಷೆಯ ಆಧಾರದ ಮೇಲೆ ಇದು ಬಹುಶಃ ಕ್ರಿ. ಶ. 16 ನೆಯ ಶತಮಾನದ ಕನ್ನಡದಲ್ಲಿರುವ ತಾಳೆಯೋಲೆ ಗ್ರಂಥವೆನ್ನಬಹುದು.

ವಿಶಿಷ್ಟಾದ್ವೈತ ಸಿದ್ಧಾಂತ ದರ್ಶನದ ಸ್ಥಾಪಕರಾದ ಶ್ರೀರಾಮಾನುಜಾಚಾರ್ಯರ ವಂದನೆಯಿಂದ ಈ ಗ್ರಂಥವು ಆರಂಭವಾಗುತ್ತದೆ. ದೊರೆಯ ಪ್ರತಿದಿನದ ಕಾರ್ಯ ಗಳನ್ನು ವಿವರವಾಗಿ ನಮೂದಿಸಲಾಗಿದೆ. ವಿದ್ಯಾರಣ್ಯರು ಕಾಶ್ಮೀರ ಖಂಡದಲ್ಲಿ ತಮ್ಮ ಗುರು ಮಿಶ್ರ ಎಂಬವರಲ್ಲಿ ಶಾಸ್ತ್ರಾಧ್ಯಯನವನ್ನು ಮಾಡಿ, ಚಿಂತಾಮಣಿ ಮಂತ್ರೋಪದೇಶವನ್ನು ಪಡೆದು ಉಜ್ಜಯಿನಿ ಮತ್ತು ಕೊಲ್ಲಾಪುರದ ಮಾರ್ಗವಾಗಿ ಕಿಷ್ಕಿಂಧೆ ಪ್ರದೇಶಕ್ಕೆ ಹಿಂತಿರುಗಿದರು; ಐಶ್ವರ್ಯ ದೇವತೆಯಾದ ಲಕ್ಷ್ಮಿಯನ್ನು ಪ್ರಾರ್ಥಿಸಿದರು ಮತ್ತು ಶಾಲಿವಾಹನ ಶಕಾಬ್ದ 1125ರಲ್ಲಿ ಹಂಪೆ ಹೊಳೆಯ (ತುಂಗ ಭದ್ರಾ) ತೀರದಲ್ಲಿ ವಿದ್ಯಾನಗರವೆಂಬ ಪಟ್ಟಣವನ್ನು ಸ್ಥಾಪಿಸಿ, ಅದು 360 ವರ್ಷ ಗಳ ಕಾಲ ಇರುವುದೆಂದು ಭವಿಷ್ಯ ನುಡಿದರು. ಕೃಷ್ಣದೇವರಾಯನು ಸಿಂಹಾಸನಕ್ಕೆ ಬಂದ ವಿಷಯವನ್ನೂ ಈ ಗ್ರಂಥವು ತಿಳಿಸುತ್ತದೆ.

ಕರ್ನಾಟಕ ಸಿಂಹಾಸನಾಧೀಶ್ವರನೆಂದು ಹೇಳಲ್ಪಟ್ಟಿರುವ ಕೃಷ್ಣದೇವರಾಯನು ವಿಜಯನಗರವನ್ನು ಆಳಿದವರಲ್ಲಿ ಅತ್ಯಂತ ಶ್ರೇಷ್ಠನೂ ಪ್ರಸಿದ್ಧನೂ ಆಗಿದ್ದನು. ಇವನ ಸೈನ್ಯಗಳು ಎಲ್ಲೆಲ್ಲೂ ವಿಜಯವನ್ನು ಪಡೆದವು. ರಾಜಧಾನಿಯು ಬಹಳ ಸಂಪತ್ತಿ ನಿಂದ ಕೂಡಿತ್ತು. ದೊರೆಯು ಬಹಮನಿಯ ಆಕ್ರಮಣಕಾರಿ ಸೈನ್ಯಗಳನ್ನು ಹಿಮ್ಮೆ ಟ್ಟಿಸಿ, ಕೋವಿಲ್‌ಕೊಂಡ ಕೋಟೆಯನ್ನು ವಶಪಡಿಸಿಕೊಂಡು ರಾಜಧಾನಿಗೆ ಹಿಂತಿ ರುಗಿದನು ಮತ್ತು ತನ್ನ ಸೈನ್ಯವನ್ನು ಪುನರ್ವ್ಯವಸ್ಥೆಗೊಳಿಸಿದನು. ಅಬ್ದುರ್ ರಜಾಕ್ ಎಂಬ ಪ್ರವಾಸಿಯು ಹೇಳಿರುವಂತೆ ಇವನ ಸೈನ್ಯದಲ್ಲಿ 2000 ಮುಸಲ್ಮಾ ನರೂ, 60,000 ಹಿಂದು ಬಿಲ್ಲುಗಾರರೂ, 80,000 ಕುದುರೆ ಸೈನಿಕರೂ, 2 ಲಕ್ಷ ಕಾಲಾಳುಗಳೂ ಇದ್ದರು ಒಂದು ಕುದುರೆಗೆ 100 ಘಟ್ಟಿಗ ಮತ್ತು ಒಂದು ಆನೆಗೆ 1000 ವರಹ ಬೆಲೆ ಇದ್ದಿತು. ದೊರೆಯು 12,000 ಆನೆಗಳನ್ನು ಕೊಂಡು ಕೊಂಡನೆಂದು ತಿಳಿದು ಬರುತ್ತದೆ. ನೆರೆಹೊರೆಯ ಮತ್ತು ಇತರ ರಾಜ್ಯಗಳಾಗಿದ್ದ ಅಹಮದಾನಗರ, ಗೋಲಕೊಂಡ, ಬಿದರುಕೋಟೆ, ರಾಜಮಹೇಂದ್ರ, ಇಕ್ಕೇರಿ,

ಆಗರ, ಚೆನ್ನಪಟ್ಣ, ಶ್ರೀರಂಗಪಟ್ಣ ಮತ್ತು ಉಮ್ಮತ್ತೂರು ಮುಂತಾದೆಡೆಗೆ ಗುಪ ಚಾರರನ್ನು ಕಳುಹಿಸುವ ಪದ್ಧತಿ ರೂಢಿಯಲ್ಲಿತ್ತು. ದೊರೆಯು ರಾಚೂರು (ರಾಯ ಚೂರು) ಪ್ರದೇಶಕ್ಕೆ ಮುತ್ತಿಗೆ ಹಾಕಿ, ಗುಲ್ಬರ್ಗದ ಮೇಲೆ ಹೋಗಿ ಬಿದರೆಯನ್ನು ಆಕ್ರಮಿಸಿದನು ಮತ್ತು ದಂಗೆಯೆದ್ದಿದ್ದ ಉಮ್ಮತ್ತೂರಿನ ಗಂಗರಾಯನ ಮೇಲೆ ಯುದ್ಧ ವನ್ನು ಮುಂದುವರಿಸಿ, ಪೆನುಕೊಂಡವನ್ನು ವಶಪಡಿಸಿಕೊಂಡು, ಶ್ರೀರಂಗಪಟ್ಟಣ ವನ್ನು ನೂತನ ಪ್ರಾಂತ್ಯದ ರಾಜಧಾನಿಯನ್ನಾಗಿ ಮಾಡಿಕೊಂಡನು. ಇಕ್ಕೇರಿ, ಆಗರ, ಮುದಗಲ್, ಆದವಾನಿ, ಅನ್ವಂಕಿಗಳನ್ನು ಗೆದ್ದು, ಕೃಷ್ಣವೇಣಿ ನದಿಯನ್ನು (ಕೃಷ್ಣಾನದಿ) ದಾಟಿ ಉದಯಗಿರಿಯನ್ನು ವಶಪಡಿಸಿಕೊಂಡನು. ಒರಿಸ್ಸದ ದೊರೆ ಗಜಪತಿ ವಂಶದ ಪ್ರತಾಪರುದ್ರನ ಮೇಲೆ ಇವನು ನಡೆಸಿದ ಯುದ್ಧವು ಇಬ್ಬರ ಸ್ನೇಹದಲ್ಲಿ ಪರಿಣಮಿಸಿತು ಮತ್ತು ರಾಯನು ಗಜಪತಿಯ ಮಗಳನ್ನು ವಿವಾಹವಾದನು.

ದೊರೆಯು ಗಜಪತಿ ಪ್ರತಾಪರುದ್ರನಿಗೆ ಕಳುಹಿಸಿದ 16 ಒಡವೆಗಳನ್ನು ಈ ತಾಳೆಯೋಲೆ ಪುಸ್ತಕವು ತಿಳಿಸುತ್ತದೆ. ಅವು ಬೆಣ್ಣೆಯ ಮುದ್ದೆ ಕಂಠಮಾಲೆ, ನವರತ್ನ ಖಚಿತ ಗಿಣಿತಾಳಿ, ತುಂಬಿಯ ತಾಳಿ, ವೈಢೂರ್ಯ ತಾಳಿ, ವಜ್ರದ ಸರಪಣಿ, ಪಚ್ಚೆಯ ಕಡಗ, ಹುರುಮುಂಜಿಯ (ಕಿರುಮಂಜಿಯ ?) ಮುತ್ತಿನ ಪಚ್ಚೆಯ ಸರ, ಇಂದ್ರನೀಲ ಮುಕುಟ, ವಜ್ರದ ಉಡಿದಾರ, ಕೆಂಪುಗಳ ಜವದಾಡೆ, ಮುತ್ತಿನ ಕಾಲ ಘೆಂಡೆಯ, ವಜ್ರಗಳ ಬಾಹುಪುರಿ, ದೊಡ್ಡ ಮುತ್ತುಗಳ ಅಡ್ಡಗತ್ತಿ, ನವರತ್ನದ ಹರಿಗೆ, ನವರತ್ನದ ಸಿಂಹಲಲಾಟ, ಮತ್ತು ಮುತ್ತುಗಳ ಮೊಗರಂಬ. ಇವುಗಳ ಬೆಲೆಯ ಮೊತ್ತ 64 ಲಕ್ಷ ಆಗಿನ ಕಾಲದಲ್ಲಿ ಒಡವೆಗಳನ್ನು ತಯಾರಿಸುವ ಕಲೆ ಕರ್ನಾಟಕದಲ್ಲಿ ಯಾವ ಮಟ್ಟದಲ್ಲಿತ್ತು ಎಂಬುದನ್ನು ತಿಳಿಯಲು ಈ ಒಡವೆಗಳು ಸಹಾಯವಾಗಿವೆ.

ಕೃಷ್ಣದೇವರಾಯನು ತಿರುಪತಿ, ಕಾಳಹಸ್ತಿ, ಕಾಂಚಿ, ಶ್ರೀರಂಗಂ, ತಿರು ವೈಯ್ಯಾರ್ ತ್ಯಾಗರಾಜ, ಆಳ್ವಾರ್ ತಿರುನಗರಿ, ಪಾಪವಿನಾಶಿ, ಸೇತು, ಶ್ರೀರಂಗ ಪಟ್ಟಣ ಮತ್ತು ಇತರ ಸ್ಥಳಗಳಿಗೆ ಭೇಟಿಕೊಟ್ಟು ಅಲ್ಲಿಯ ಮುಖ್ಯ ದೇವರುಗಳನ್ನು ಪೂಜಿಸಿ, ಬಹು ಬೆಲೆ ಬಾಳುವ ವಸ್ತುಗಳನ್ನು ಕೊಟ್ಟು ಮತ್ತು ಜಂಬುಕೇಶ್ವರದಲ್ಲಿ ತುಲಾಪುರುಷವನ್ನು ಮಾಡಿಕೊಂಡು ದಾನಮಾಡಿ ರಾಜಧಾನಿಗೆ ಹಿಂತಿರುಗಿದ ವಿಷಯವು ತಿಳಿದುಬರುತ್ತದೆ.

ಸರ್ಕಾರದ ವಿವಿಧ ಅಧಿಕಾರಿಗಳಾದ ಸ್ಥಾನಪತಿಗಳು, ಒಂಬತ್ತು ಸಂಪ್ರತಿಗಳು (ಕರಣಿಕರು), 72 ವಿನಯೋಗಿಗಳು, ನಿಯೋಗಿಗಳು, ಮಂತ್ರಿಗಳಾದ ಅಪ್ಪಾಜಿ, ಕೊಂಡಮರಸ, ಅಯ್ಯಪ್ಪರಸು, ಪ್ರಧಾನಿ ತಿಮ್ಮರಸ ಮತ್ತು ಷೋಡಶ ಪಾತ್ರರು (ಬಲಭದ್ರಪಾತ್ರ, ದುರ್ಗ ಪಾತ್ರ, ಭೀಮ ಪಾತ್ರ, ಮುಕುಂದ ಪಾತ್ರ, ಭೀಕರ ಪಾತ್ರ, ಭೇರ ಪಾತ್ರ, ರಣರಂಗ ಪಾತ್ರ, ಖಡ್ಗ ಪಾತ್ರ, ಮುರಾರಿ ಪಾತ್ರ, ವಜ್ರ

ಮುಷ್ಟಿ ಪಾತ್ರ, ತುರಂಗರೇವಂತ ಪಾತ್ರ, ಗಜಾಂಕುಶ ಪಾತ್ರ, ಅಸಹಾಯ ಪಾತ್ರ, ಅಶನಿ ಪಾತ್ರ, ಮೃಗೇಂದ್ರ ಪಾತ್ರ) ಮುಂತಾದವರನ್ನೂ, ಕವಿಗಳಾದ ಅಲ್ಲಾಸಾನಿ ಪೆದ್ದರಾಜ ಮತ್ತು ಮುಕ್ಕತಿಮ್ಮಯ್ಯ ಇವರನ್ನೂ ಹೆಸರಿಸಲಾಗಿದೆ.

ಕಂದಾಚಾರ ಮತ್ತು ಅವಸರದ ಇಲಾಖೆಗಳನ್ನೂ ಹೆಸರಿಸಿದೆ. ಈ ಗ್ರಂಥದಲ್ಲಿ 'ಕನ್ನಾ೯ಟಕ' ಎಂದು ಬರೆದಿರುವುದು ಗಮನಾರ್ಹ. ಅದು 'ಕರ್ಣಾಟಕ' ಎಂದಿಲ್ಲ.

ರಾಯನು ದಿನವೂ ಬೆಳಗ್ಗೆ ನೂರೆಂಟು ತಿರುಪತಿಗಳಿಂದ ತೀರ್ಥಪ್ರಸಾದ ಮತ್ತು ಎಪ್ಪತ್ತೇಳು ಶಿವಸ್ಥಾನಗಳಿಂದ ಗಂಧ ಪ್ರಸಾದಗಳನ್ನು ಸ್ವೀಕರಿಸುವ ಸಂಪ್ರದಾಯ, ಅಷ್ಟ ಸ್ವಯಂವ್ಯಕ್ತರಾದಂಥಾ ಶ್ರೀರಂಗಂ, ಶ್ರೀಮುಷ್ಣ, ವೆಂಕಟಾಚಲ, ತೋತಾದ್ರಿ ಮುಂತಾದ ಸ್ಥಳಗಳಲ್ಲಿ ನಿತ್ಯೋತ್ಸವಗಳು ಸರಿಯಾಗಿ ನಡೆಯುತ್ತಿವೆಯೇ ಎಂಬುದನ್ನು ವಿಚಾರಿಸುತ್ತಿದ್ದುದು ಮತ್ತು ಹದಿನೆಂಟು ಶಕ್ತಿಸ್ಥಾನಗಳ ಬಗ್ಗೆ ವಿಚಾರಿಸುತ್ತಿದ್ದುದು ಇವನ್ನು ಹೇಳಲಾಗಿದೆ. ಇವಲ್ಲದೆ ತಿರುಪತಿಗೆ ಹೋಗಿ ವೆಂಕಟರಮಣಸ್ವಾಮಿಯನ್ನು ಸೇವಿಸಿ ಷೋಡಶ ಮಹಾದಾನಗಳನ್ನು ಮಾಡಿ, ಅಲ್ಲಿಂದ ಕಾಳಹಸ್ತಿಗೆ ಬಂದು ಸ್ವಾಮಿಯ ದರ್ಶನ ಮಾಡಿ ಕಾಣಿಕೆಗಳನ್ನೂ ನವರತ್ನಾಭರಣಗಳನ್ನೂ ಗ್ರಾಮಗಳನ್ನೂ ಸಮರ್ಪಿಸಿ, ಹಾಗೆಯೇ ಶಿವಕಂಚಿ, ವಿಷ್ಣುಕಂಚಿಗೆ ಬಂದು ಏಕಾಂಬ್ರನಾಥ, ಕಾಮಾಕ್ಷಿ, ವರದರಾಜಸ್ವಾಮಿ, ಶೂಡಿಕುಡುತ್ತನಾಚ್ಚಾರ್ (ಗೋದಾದೇವಿ) ಇವರನ್ನು ಸೇವಿಸಿ ನವರತ್ನಾಭರಣಗಳನ್ನೂ ಗ್ರಾಮಗಳನ್ನೂ ಸಮರ್ಪಿಸಿದ ವಿಷಯವು ಗಮನಾರ್ಹವಾಗಿದೆ.

ಕೃಷ್ಣದೇವರಾಯನ ದಿನಚರಿ ಮತ್ತು ದೈನಂದಿನ ಜೀವನ, ಅವನು ರಾಜ್ಯವನ್ನಾಳುತ್ತಿದ್ದ ಮತ್ತು ಕೆಲಸಮಾಡುತ್ತಿದ್ದ ರೀತಿಯನ್ನು ತಿಳಿಯಲು ಈ ತಾಳೆಯೋಲೆ ಗ್ರಂಥವು ಬಹು ಸಹಾಯಕವಾಗಿದೆ.

ಈ ಗ್ರಂಥವನ್ನು ನನಗೆ ಕೊಟ್ಟು ಉಪಕರಿಸಿರುವ ಡಾ|| ಎಸ್. ಎನ್. ಶರ್ಮ, ಶರ್ಮ ಆಯುರ್ವೇದ ವೈದ್ಯಶಾಲಾ, ವಾಣೀವಿಲಾಸ ರಸ್ತೆ, ಮೈಸೂರು-4 ಇವರಿಗೆ ನಾನು ಆಭಾರಿಯಾಗಿದ್ದೇನೆ. ಆಸಕ್ತಿವಹಿಸಿ ಈ ಗ್ರಂಥವನ್ನು ಬೆಳಕಿಗೆ ತರಲು ಮುಖ್ಯ ಕಾರಣರಾದ ಪ್ರೊಫೆಸರ್ ಎಂ. ವಿ. ಸೀತಾರಾಮಯ್ಯನವರಿಗೂ, ಮತ್ತು ನನ್ನ ಮಿತ್ರರಾದ ಕೆಳದಿ ಗುಂಡಾಜೋಯಿಸರಿಗೂ ನಾನು ಅತ್ಯಂತ ಚಿರಋಣಿಯಾಗಿದ್ದೇನೆ.

ಮೈಸೂರು
4-10-82

ಡಾ|| ವಿ. ಎಸ್. ಎಸ್. ಆಚಾರ್ಯ

ಪ್ರಸ್ತಾವನೆ

ಶ್ರೀ ಕೃಷ್ಣದೇವರಾಯನ ದಿನಚರಿ ಎಂಬ ಮಾತು ಈ ಕೃತಿಯ ಹಸ್ತಪ್ರತಿಯ ಮೊದಲಲ್ಲೇ ಹೇಳಿದೆಯಷ್ಟೆ. "ದಿನಚರಿಯ ಕೃತ್ಯಗಳ ವಿಸ್ತಾರ" ಎಂಬ ವಿವರಣೆಯ ಮಾತಿನಿಂದ, ದಿನ ದಿನದ ಕೃತ್ಯಗಳನ್ನು ವಿಸ್ತಾರವಾಗಿ ಹೇಳುವ ಒಂದು ದಾಖಲೆ ಎಂದು ಅರ್ಥ ಮಾಡಲು ಅವಕಾಶವಿದೆ. ದಿನಚರಿ ಎಂದದ್ದರಿಂದ ಒಂದು ದಿನದ ಕಾರ್ಯ ಕಲಾಪದ ವಿವರ ಮಾತ್ರ ಎಂದೇನೂ ತಿಳಿಯಬೇಕಾದ್ದಿಲ್ಲ. ಅನೇಕ ದಿನಗಳ ಕಾರ್ಯಗಳ ದಾಖಲೆ ಉಳ್ಳ ಪುಸ್ತಕ, ಹಾಳೆಗಳ ಕಟ್ಟು,–ಅದನ್ನೂ ದಿನಚರಿ ಎನ್ನುತ್ತೇವೆ. ತನ್ನ ದಿನ ದಿನದ ಕೆಲಸ ಕಾರ್‍ಯಗಳ ವಿಷಯವಾಗಿ ತಾನೇ ಬರೆದಿಟ್ಟದ್ದು ದಿನಚರಿ. ದಿನಚರಿಕಾರನ ವ್ಯಕ್ತಿತ್ವ, ಮನೋಧರ್ಮ, ಇವುಗಳಿಗೆ ದಿನಚರಿ ಕೈಗನ್ನಡಿ. ಜೀವನ ಚರಿತ್ರೆ ಬರೆಯುವಾತನಿಗೆ ದಿನಚರಿಯೂ ಒಂದು ಉಪಯುಕ್ತ ಆಕರ ಸಾಮಗ್ರಿ.

ಶಾಸನಗಳು ಪ್ರಾಯಿಕವಾಗಿ ಕಲ್ಲಿನ ಮೇಲೆ ಕೊರೆದವು. ತಾಮ್ರಫಲಕಗಳ ಮೇಲೆ ಬರೆದವೂ ಉಂಟು. ಇವು ಒಂದು ಘಟನೆಯನ್ನು (ಅಗ್ರಹಾರ ಇತ್ಯಾದಿಗಳ ದಾನ, ದೇವಾಲಯ ಕೆರೆ ಮುಂತಾದವನ್ನು ನಿರ್ಮಾಣ ಮಾಡಿದ್ದು, ವ್ಯಕ್ತಿಯ ಮರಣ, ಮುಂತಾದ ಸಂಗತಿಗಳನ್ನು) ಮಾತ್ರ ಸಂದರ್ಭೋಚಿತ ವಿವರಗಳೊಂದಿಗೆ ಸಂಕ್ಷೇಪವಾಗಿಯೋ ಇಲ್ಲ ಸ್ವಲ್ಪ ವಿಸ್ತಾರವಾಗಿಯೋ ತಿಳಿಸುತ್ತವೆ. ಈ ಶಾಸನಗಳು ಪದ್ಯರೂಪದಲ್ಲಿಯೂ ಗದ್ಯರೂಪದಲ್ಲಿಯೂ ದೊರಕಿವೆ. ಕಾವ್ಯಶೈಲಿಯ ಶಾಸನಗಳೂ ಹೇರಳವಾಗಿ ದೊರಕಿವೆ. ಚರಿತ್ರಕಾರನಿಗೆ ಇವು ಚಿನ್ನದ ಗಣಿ ಇದ್ದ ಹಾಗೆ.

ಕೈಫಿಯತ್ತು, ನಾಮೆ, ಕಡತ (ಅಥವಾ ಕಡಿತ), ಬಖೈರು, ಪತ್ರವ್ಯವಹಾರ, ಇವು ಕೂಡ ಚರಿತ್ರಕಾರನಿಗೆ ಅತ್ಯುಪಯುಕ್ತ ಸಾಧನ ಸಾಮಗ್ರಿ. ಶಾಸನಗಳಷ್ಟು ಪ್ರಾಚೀನ ದಾಖಲೆಗಳಲ್ಲ ಇವು. 7 ನೆಯ ಶತಕದಿಂದ ಮೊದಲ್ಗೊಂಡು 15 ನೆಯ ಶತಕದವರೆಗೂ ಶಾಸನಗಳು ವಿಪುಲ ಸಂಖ್ಯೆಯಲ್ಲಿ ದೊರೆಯುತ್ತವೆ. ಅಲ್ಲಿಂದೀಚೆಗೆ ಅವು ಬರುಬರುತ್ತ ವಿರಳವಾಗುತ್ತವೆ. ಶಾಸನಗಳು ಶಿಲಾಲಿಖಿತಗಳಾದರೆ ಕೈಫಿಯತ್ತು ಮುಂತಾದವು ಕಾಗದಗಳ ಮೇಲೆ ಬರೆದವು. ಕಡಿತಗಳು ಮಾತ್ರ ಒಂದು ವಿಶಿಷ್ಟ ರೀತಿಯಲ್ಲಿ ಸಿದ್ಧಪಡಿಸಿದ ಉದ್ದನೆಯ ಕಪ್ಪು ಬಣ್ಣದ ರಟ್ಟುಬಟ್ಟೆಯ ಮೇಲೆ ಬಳಪದಿಂದ ಬರೆದವು. ಕಡತದ ಪ್ರಾಚೀನತೆಯ ಬಗ್ಗೆ ಕನ್ನಡ ಕಾವ್ಯಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ; ಉಲ್ಲೇಖಗಳ ಪರಿಶೀಲನೆಯಿಂದ ಅವು ಲೆಕ್ಕಗಳನ್ನು ಮಾತ್ರ ಬರೆದಿಡಲು ಬಳಕೆಯಾಗುತ್ತಿತ್ತು ಎಂದು ವ್ಯಕ್ತಪಡುತ್ತದೆ. ಕಡತಗಳು ಉಪಲಬ್ಧವಾಗಿರುವುದು ಈಚಿನ ದಿನಗಳಲ್ಲಿ. ಅರಮನೆಯ, ದೇವಸ್ಥಾನಗಳ,

ಲೆಕ್ಕಗಳನ್ನೂ ಇತರ ಸಣ್ಣಪುಟ್ಟ ವಿವರಗಳನ್ನೂ ದಾಖಲೆ ಮಾಡಲು ಕಡತಗಳನ್ನು ಉಪಯೋಗಿಸುತ್ತಿದ್ದರು ಎಂದು ತಿಳಿದುಬರುತ್ತದೆ.

ಇನ್ನೊಂದು ಬಗೆಯ ಐತಿಹಾಸಿಕ ಮಹತ್ವದ ದಾಖಲೆ ಎಂದರೆ ಬಖೈರು ಅಥವಾ ನಾಮೆ. ನಮಗೆ ತಿಳಿದು ಬಂದಿರುವಮಟ್ಟಿಗೆ ಇವು ಸಾಧಾರಣವಾಗಿ ಕಾಗದದ ಮೇಲೆ ಬರೆದವು. ಕೃಷ್ಣದೇವರಾಯನ ದಿನಚರಿಯೂ ಒಂದು ಬಖೈರು. 'ಕಾಗಜ' ಎಂಬ ಮಾತು ಕೃಷ್ಣದೇವರಾಯನ ಈ ದಿನಚರಿಯಲ್ಲಿಯೇ ಬಳಕೆಯಾಗಿದೆ. ಹೀಗಿದ್ದರೂ ಈ ಬಖೈರು ತಾಳೆಗರಿಯ ಮೇಲೆ ಲಿಖಿತವಾಗಿರುವುದು ಬಹಳ ಕುತೂಹಲಕಾರಿಯಾದ ವಿಷಯ. ಅಲ್ಲದೆ, ಇದುವರೆಗೂ ಅನುಪಲಬ್ಧವಾಗಿದ್ದ ಈ ಬಖೈರು ದೊರೆತಿರುವವುಗಳಲ್ಲಿ ('ರಾಮರಾಯನ ಬಖೈರು', 'ಹೈದರ್ ನಾಮೆ,' 'ರಾಜೇಂದ್ರ ನಾಮೆ') ಅತ್ಯಂತ ಪ್ರಾಚೀನವಾದದ್ದು ಎಂದು ತೋರಿಬರುತ್ತದೆ. ಅಲ್ಲದೆ, ನಮ್ಮ ಗಮನಕ್ಕೆ ಬಂದಂತೆ, ಸದ್ಯಕ್ಕೆ ಓಲೆಗರಿಯಲ್ಲಿ ಬರೆದ ಬಖೈರು ಇದೊಂದೇ ದೊರೆತಿರುವುದು.

ಈ ಕೃತಿಯ ಸಮಾಪ್ತಿ ವಾಕ್ಯಗಳನ್ನು ಪರಿಶೀಲಿಸಿದರೆ, ಇದೇ ರೀತಿಯಲ್ಲಿ ಕೃಷ್ಣದೇವರಾಯನ ಮುಂಚಿನ ದೊರೆಗಳ ಹಾಗೂ ಆತನ ಪೂರ್ತಿ ಆಳ್ವಿಕೆಗೆ ಸಂಬಂಧಪಟ್ಟಂತೆ ದಿನಚರಿ ಕೃತಿಗಳು ರಚಿತವಾಗಿದ್ದುದು ವ್ಯಕ್ತಪಡುತ್ತದೆ. (ಇವೂ ಓಲೆಗರಿಯಲ್ಲಿ ಬರೆದವಾಗಿರಬೇಕು)

"ಒಂದು ದಿನ ವಾಲಗದಲ್ಲಿ | ಯಿಷ್ಟಾಲಾಪ ವಿನೋದರಾಗಿ | ಅರಮನೆಯ ನಿಜೋಗಿಗಳು | ವಿದ್ವಾಂಸರು | ಕವೀಶ್ವರರುಗಳು ಮುಂತಾದವರು ಯಿರಲಾಗಿ | ಪ್ರಸಂಗ ಬೆಂಬಳಿಯಲ್ಲಿ ಕೀರ್ತ್ತಿ ಶಾಶ್ವತವಾಗಿ ನಿಲ್ಲುವ ಹಾಗೆ | ಆದಿ ದೊರೆಗಳ ಕೃತಿಯಲ್ಲಿ ಕೊಂಗರವರ ಪ್ರಸಂಗ ಪ್ರತಾಪಗಳು ಯಲ್ಲರಿಗು ಯಣಿಸಲಾಯಿತು | ಅದರಿಂದ ತಾವುನ್ನು | ಕೃತಿಯ ಹೇಳಿಸ ಬೇಕೂ ಯಂದು ಅಪ್ಪಣೆಯನ್ನು ಕೊಟ್ಟು | ಮುಕ್ಕ ತಿಂಮ್ಮಯ್ಯ | ಮಾದಯ್ಯನವರ ಮಲ್ಲಯ್ಯನವರು ಮೊದಲಾದವರಿಂನ್ನು ಕೃತಿಯ ಹೇಳಿಕೊಂಡು ಬಹ ಹೇಳಿ ಅಪ್ಪಣೆ ಕೊಟ್ಟರು | ಯಿದೂ ಯಿಂದಿನವರಿಗೆ ನಡದ ಪ್ರವರ್ತ್ತಕಗಳು | ಯಿಂನ್ನು ಮೇಲೆ ನಡದ ವರ್ತ್ತಮಾನಗಳಿಗೆ ಬಿಂನ್ನಹಂ ಮಾಡಿ ಕಳುಹಿಸ್ಸಿನು ಚಿತ್ತಕ್ಕೆ ಪರಾಮರಿಸಿಕೊಳ್ಳ ಚಿತ್ತೈಸೂದು ಇಂತಿ ಬಿಂನಹ."

ದಿನಚರಿಯನ್ನು ಇಡುವ ಒಂದು ಪದ್ಧತಿ ಕೂಡ ಕೃಷ್ಣದೇವರಾಯನಿಂದಲೇ ಸೂಚಿತವಾದದ್ದು ಎನ್ನುವುದಕ್ಕೆ ಆತನ ಕೃತಿಯಲ್ಲಿ ಆಧಾರ ಇದೆ; ಅಲ್ಲದೆ, ರಾಜನಾದವನು ದಿನವಹಿ ಮುಂಜಾವಿನಿಂದ ಸಂಜೆಯವರೆಗೆ ಏನು ಮಾಡಬೇಕೆಂಬುದರ ಬಗೆಗೆ ಕೃಷ್ಣದೇವರಾಯನೆ ತೆಲುಗಿನಲ್ಲಿ ರಚಿಸಿರುವ "ಆಮುಕ್ತಮಾಲ್ಯದ" ಎಂಬ ಕೃತಿಯಲ್ಲಿ ವಿವರಿಸುವುದಕ್ಕೂ ಈ ಕೃತಿಯಲ್ಲಿ ತಿಳಿಸಿರುವ ವಿವರಗಳಿಗೂ ಹೆಚ್ಚು

ವ್ಯತ್ಯಾಸವಿಲ್ಲ ಎನ್ನುವುದು ಗಮನಾರ್ಹ. ತೆಲುಗು ಕಾವ್ಯದ ಪ್ರಸಕ್ತ ಭಾಗದ ಸಾರಾಂಶ ವನ್ನು ಕೆಳಗೆ ಕೊಟ್ಟಿದೆ.*

"ರಾಜನು ಪ್ರತಿನಿತ್ಯವೂ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಅನುಸರಿಸ ಬೇಕು. ಹೊತ್ತಿಗೆ ಮುಂಚೆ ಎದ್ದ ಕೂಡಲೆ ವೈದ್ಯರನ್ನೂ ಜ್ಯೋತಿಷಿಗಳನ್ನು ಕರೆಸಿ ಕೊಂಡು ತನ್ನ ಆರೋಗ್ಯದ ಬಗೆಗೂ ಗ್ರಹಗತಿಯ ಬಗೆಗೂ ಸಮಾಲೋಚನೆ ನಡೆಸ ಬೇಕು. ಅನಂತರ ಆತನು ತನ್ನ ಸಚಿವರು, ಸಾಮಂತರು, ಕರಣಿಕರು, ಇವರುಗಳೊಂದಿಗೆ ವಿಚಾರ ವಿನಿಮಯ ಮಾಡಿ, ಆದಾಯ ವೆಚ್ಚಗಳನ್ನು ಪರಿ ಶೀಲಿಸಿ, ರಾಜ್ಯದ ಆಗುಹೋಗುಳ ಬಗೆಗೆ ತನ್ನ ಆಪ್ತ ಮಂತ್ರಿಗಳ ಸಲಹೆ ಪಡೆಯ ಬೇಕು. ಬಳಿಕ, ಅಂಗಮರ್ದನ ಮಾಡಿಸಿಕೊಂಡು ಗರಡಿಯಲ್ಲಿ ಸಾಮು ಮಾಡಬೇಕು. ಇದಾದ ಮೇಲೆ, ಮಾಂಸವನ್ನು ಸರಬರಾಯಿ ಮಾಡುವವರೊಂದಿಗೆ ಅದರ ಗುಣ ಮಟ್ಟವನ್ನು ವಿಚಾರಿಸಿ ತಿಳಿದುಕೊಂಡು, ಅಡಿಗೆ ಮಾಡುವವರೊಂದಿಗೆ ಅಂದು ತಯಾ ರಿಸಬೇಕಾದ ತಿಂಡಿತಿನಸುಗಳ ಬಗೆಗೆ ತಿಳಿಯ ಹೇಳಬೇಕು. ಮಧ್ಯಾಹ್ನದ ವೇಳೆಯಲ್ಲಿ ದೇವತಾರ್ಚನೆ ಮಾಡಿ ಹಿರಿಯರು, ಸಾಧು ಸಂತರು, ಧರ್ಮಾಧಿಕಾರಿಗಳು, ಇವರು ಗಳೊಂದಿಗೆ ಸ್ವಲ್ಪ ಕಾಲವನ್ನು ಕಳೆಯಬೇಕು. ಭೋಜನಾನಂತರ ವಿದೂಷಕರು, ಪೌರಾಣಿಕರು, ಕವಿಗಳು ಇವರುಗಳೊಂದಿಗೆ ವಿನೋದ ಗೋಷ್ಠಿ ನಡಸಬೇಕು. ಸಂಜೆಯ ವೇಳೆಯಲ್ಲಿ ಬೇಹುಗಾರರು ತಂದು ಹೇಳುವ ಸುದ್ದಿ ಸಮಾಚಾರಗಳನ್ನು ಕೇಳಿ ತಿಳಿದು, ಸಂಗೀತವನ್ನು ಆಲಿಸಬೇಕು. ರಾತ್ರಿಯನ್ನು ಅಂತಃಪುರ ಸ್ತ್ರೀಯ ರೊಂದಿಗೆ ಕಳೆಯಬೇಕು."

'ಆಮುಕ್ತಮಾಲ್ಯದ' ಕಾವ್ಯದಲ್ಲಿ ಶ್ರೀ ಕೃಷ್ಣದೇವರಾಯನು ರಾಜನೀತಿ ನಿರೂಪಣೆಯ ಸಂದರ್ಭದಲ್ಲಿ ನೀಡಿರುವ ಮೇಲ್ಕಂಡ ನಿರ್ದೇಶನವನ್ನು ಸ್ವತಃ ಹೇಗೆ ಅನುಸರಿಸಿದ್ದನು ಎನ್ನುವುದಕ್ಕೆ ಈ ದಿನಚರಿ ಕೈಗನ್ನಡಿ ಆಗಿದೆ. ಮೇಲಿನ ಅವತರ ಣಿಕೆಯಲ್ಲಿ ಕಂಡು ಬಾರದ ಎಷ್ಟೋ ರಾಜನೀತಿಯ ಸಂಗತಿಗಳು–ಈ ದಿನಚರಿಯಲ್ಲಿ ಹೇಳಿರುವವು-'ಆಮುಕ್ತಮಾಲ್ಯದ' ಕಾವ್ಯದಲ್ಲಿಯೂ ಹೇಳಿವೆ.

ಮುನ್ನುಡಿಯಲ್ಲಿ ಗ್ರಂಥ ಸಂಪಾದಕರು ಹೇಳಿರುವಂತೆ, ಕೃಷ್ಣದೇವರಾಯನು ಪಟ್ಟಕ್ಕೆ ಬಂದ ವರ್ಷದಿಂದ, ಎಂದರೆ ಕ್ರಿ. ಶ. 1509 ರಿಂದ 1520 ರವರೆಗೆ ನಡೆದ ಪ್ರಮುಖ ಘಟನೆಗಳು–ಯುದ್ಧಗಳು, ಕೈಗೊಂಡ ತೀರ್ಥಯಾತ್ರೆಗಳು, ದಿನನಿತ್ಯದ

---

* ಶ್ರೀ ಎಂ. ರಾಮರಾವ್ ಅವರು ಬರೆದ 'ಕೃಷ್ಣದೇವರಾಯ' (ದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟ್‌ನ ಇಂಗ್ಲಿಷು ಪ್ರಕಟನೆ, ೧೯೭೧, ಪು. ೫೫) ಪುಸ್ತಕದ ಆಧಾರದಿಂದ ಸಂಗ್ರಹಿಸಿದೆ.

ಕಾರ್ಯಕ್ರಮ, ಒಡ್ಡೋಲಗದ ವಿವರಗಳು, ಸೈನ್ಯ ವಿವರಗಳು, ಮುಂತಾದ ಚಾರಿತ್ರಕ ಮೌಲ್ಯವುಳ್ಳ ಅನೇಕಾನೇಕ ಸಂಗತಿಗಳು ಬಿತ್ತರಗೊಂಡಿವೆ.* ಮುಕ್ಕು ತಿಮ್ಮಯ್ಯ, ಮುಂತಾದ ಹಲವರಿಗೆ ಆಳ್ವಿಕೆಯ ವಿವರಗಳನ್ನು "ಹೇಳಿಕೊಂಡು ಬನ್ನಿ" ಎಂದು ಈ ದಿನಚರಿಯ ಕೊನೆಯಲ್ಲಿ ಹೇಳಿದೆಯಷ್ಟೆ. ಹನ್ನೊಂದು ವರ್ಷಗಳ ಆಳ್ವಿಕೆಯ ವಿವರಗಳನ್ನು ಅವರಿಬ್ಬರೂ ಕೂಡಿ ಬರೆದರೇ, ಇಲ್ಲವೆ ಹೇಳಿ ಬರೆಯಿಸಿದರೆ, ಈ ಇಬ್ಬರಲ್ಲಿ ಬರೆದವನು (ಅಥವಾ ಹೇಳಿ ಬರೆಯಿಸಿದವನು) ಒಬ್ಬನೇಯೆ (ತಿಮ್ಮಯ್ಯ ಅಥವಾ ಮಲ್ಲಯ್ಯ) ಎಂಬುದು ಖಚಿತವಾಗಿ ತಿಳಿದು ಬರುವುದಿಲ್ಲ. ದೊರೆಯ ಅಪ್ಪಣೆಯಂತೆ ಈ ಇಬ್ಬರೂ ಬರೆದರು ಎಂದು ಊಹೆ ಮಾಡಲು ಅಡ್ಡಿಯಿಲ್ಲ. ತಿಮ್ಮಯ್ಯ ಮತ್ತು ಮಲ್ಲಯ್ಯ ಆಸ್ಥಾನದ ಕವಿಗಳು (ಗದ್ಯರಚನೆ ಮಾಡುವವರೂ ಕವಿಗಳೆ ತಾನೆ, ನಮ್ಮ ಲಾಕ್ಷಣಿಕರ ಅಭಿಪ್ರಾಯದಲ್ಲಿ) ಎನ್ನುವುದು ಮಾತ್ರ ಈ ಕೃತಿಯಿಂದ ಸ್ಪಷ್ಟ. ಅಂದು ರೂಢಿಯಲ್ಲಿದ್ದ ಬಳಕೆಯ ಭಾಷೆಯಲ್ಲಿ ಈ ಕೃತಿ ಸಿಗದಿತವಾಗಿದೆ.

ವಿದೇಶಿ ಪ್ರವಾಸಿಗಳು ಮತ್ತು ಇತರ ಆಧಾರಗಳಿಂದ ಶ್ರೀ ಕೃಷ್ಣದೇವರಾಯನ ಆಳ್ವಿಕೆಗೆ ಸಂಬಂಧಪಟ್ಟಂತೆ ತಿಳಿದುಬರುವ ಮುಖ್ಯ ಸಂಗತಿಗಳನ್ನು ಚರಿತ್ರ ಗ್ರಂಥಗಳಿಂದ ತಿಳಿಯಬಹುದು. ಈ ಗ್ರಂಥದಲ್ಲಿ ಪ್ರಸಕ್ತವಾದ ಅವಧಿಯಲ್ಲಿ (1509-1916) ಜರುಗಿದ ಮುಖ್ಯ ಘಟನೆಗಳನ್ನು ಚರಿತ್ರ ಗ್ರಂಥಗಳಿಂದ ಹೀಗೆ ಸಂಗ್ರಹಿಸಬಹುದು :

ಗ್ರಂಥಾರಂಭದಲ್ಲಿ ವಿದ್ಯಾರಣ್ಯರು ಶಾಲಿವಾಹನ ಶಕ 1125ರಲ್ಲಿ (ಎಂದರೆ ಕ್ರಿ. ಶ. 1203ರಲ್ಲಿ) ವಿದ್ಯಾನಗರವನ್ನು ಸ್ಥಾಪಿಸಿದರು ಎಂದು ಹೇಳಿದೆ. ಆದರೆ ಚಾರಿತ್ರಿಕ ದಾಖಲೆಗಳಲ್ಲಿ ಸಾಮ್ರಾಜ್ಯ ಸ್ಥಾಪನೆಯ ವರ್ಷ 1336. ರಾಜ್ಯ ಸ್ಥಾಪನೆಯಾಗಿ ಆದ 25 ಪಟ್ಟಗಳು ಜರುಗಿ 300 ವರ್ಷಗಳು ಸಂದಮೇಲೆ ಕೃಷ್ಣರಾಯನ ಪಟ್ಟ ಎಂದು ಈ ದಾಖಲೆ ತಿಳಿಸುತ್ತದೆ ; ಎಂದರೆ, ಕೃಷ್ಣರಾಯನು ಪಟ್ಟಕ್ಕೆ

* ದಿನಚರಿಯಲ್ಲಿ ಪ್ರಭವಾದಿಯಲ್ಲಿ ಕೃಷ್ಣದೇವರಾಯನಿಗೆ ಯುವರಾಜ ಪಟ್ಟಾಭಿಷೇಕ ಆಯಿತೆಂದೂ ವಿಜಯಯಾತ್ರೆ ಮುಗಿದ ಮೇಲೆ ಶ್ರೀಮುಖ ಸಂವತ್ಸರದಲ್ಲಿ ತೀರ್ಥಕ್ಷೇತ್ರಗಳಿಗೆ ಭೇಟಿಕೊಟ್ಟು ವಿದ್ಯಾನಗರಕ್ಕೆ ಹಿಂದಿರುಗಿದ ಮೇಲೆ ಅಲ್ಲಿಯವರೆಗೆ ನಡೆದ ಸಂಗತಿಗಳನ್ನು ಹೇಳುವಂತೆ ಕೃಷ್ಣದೇವರಾಯನು ಅಪ್ಪಣೆ ಮಾಡಿದನೆಂದೂ ಉಲ್ಲೇಖಿಸಿದೆ. ಎಂದ ಮೇಲೆ ಪ್ರಭವದಿಂದ ಶ್ರೀಮುಖದವರೆಗೆ 7 ವರ್ಷಗಳ (ಎಂದರೆ 1509 ರಿಂದ 1516ರ ವರೆಗಿನ) ಸಂಗತಿಗಳು ಮಾತ್ರ ಹೇಳಿವೆ ಎಂದು ತಿಳಿಯಬೇಕಾಗುತ್ತದೆ. ಗಜಪತಿಯ ಮೇಲೆ ವಿಜಯ ಸಾಧಿಸಿದ್ದು ಕ್ರಿ. ಶ. 1516 ಎಂದು ಈ ದಿನಚರಿ ದಾಖಲಿಸಿದೆ. ಇದು ವಿಚಾರಾರ್ಹ.

ಬಂದದ್ದು, ಈ ದಾಖಲೆಯ ಪ್ರಕಾರ, 1503. ಆದರೆ, ಕೃಷ್ಣದೇವರಾಯ ಪಟ್ಟಕ್ಕೆ ಬಂದದ್ದು 1509. ಅದೇ ರೀತಿ, ರಾಜ್ಯಸ್ಥಾಪನೆ ಆದ ಮೇಲೆ "360 ವರುಷ ನಿಂತೀತು" ಎಂದು ಈ ದಾಖಲೆಯ ಹೇಳಿಕೆ. ಎಂದರೆ, 1636ರಲ್ಲಿ ರಾಜ್ಯ ಕೊನೆಗೊಂಡಿತು. ವಿಜಯನಗರ ಸಾಮ್ರಾಜ್ಯದ ಅಂತ್ಯ 1646. ಇದು ಭವಿಷ್ಯವಾಣಿಯ ಮಾತಾದದ್ದರಿಂದ, 10 ವರ್ಷದ ವ್ಯತ್ಯಾಸವನ್ನು ಗಮನಕ್ಕೆ ತಂದುಕೊಳ್ಳಬೇಕಾಗಿಲ್ಲ. ಆದರೆ, ರಾಜ್ಯದ ಶಂಕುಸ್ಥಾಪನೆ ಶಾಲಿವಾಹನ ಶಕ 1125ರ ಮೇಲೆ ಸಂದ ಪ್ರಭವ ಸಂವತ್ಸರದ ಚೈತ್ರ ಬಹುಳ ಅಮಾವಾಸ್ಯೆ ಎಂದಿರುವುದು ಪರಿಶೀಲನಾರ್ಹ.

ಕೃಷ್ಣದೇವರಾಯನು ಪಟ್ಟಕ್ಕೆ ಬಂದದ್ದು 1503 ಎಂದಿರುವುದಕ್ಕೆ ಈ ರೀತಿ ಸಮಾಧಾನ ಹೇಳಬಹುದು: "ಈ ಪ್ರಭವಾದಿಯಲ್ಲಿ ಯುವರಾಯ ಪಟ್ಟವನ್ನು ಕೃಷ್ಣರಾಯರಿಗೆ ಮಾಡಬೇಕು ಯೆಂದು ಡಣಾಯಕರ ಕೂಡೆ ಯೆಂದಂಥಾದ್ದಕ್ಕೆ ವೀರ ನೃಸಿಂಹರಾಯರವರು | ತಾವು ಹಿರಿಯರಾದೆವು | ತಮ್ಮೋಸಾದಿಯಲ್ಲಿ ರಾಜ್ಯಪರಿಪಾಲನೆಯ ಮಾಡೋದಕ್ಕೆ ಕೃಷ್ಣರಾಯರವರಿಗೆ ಪಟ್ಟಾಭಿಷೇಕನ ಮಾಡಿ ಅಧಿಷ್ಠಾನ ಕರ್ತರ ಮಾಡು ಯೆಂದು ಪೊಳ್ಳೆಯ ವೇಳೆಯಲ್ಲಿ ಮುದ್ರೆ ಉಂಗುರವನ್ನು ಕೊಟ್ಟರು" ಎಂದಿರುವುದರಿಂದ, 1503ರಲ್ಲಿ ವೀರ ನರಸಿಂಹರಾಯನ ಅಪೇಕ್ಷೆಯಂತೆ ಕೃಷ್ಣದೇವರಾಯನಿಗೆ ಯುವರಾಜ ಪಟ್ಟವಾಯಿತು ಎಂದು ಭಾವಿಸಬೇಕು. ಆದರೂ, ವೀರ ನರಸಿಂಹನ ಪರವಾಗಿ ಕೃಷ್ಣದೇವರಾಯನೇ ವಾಸ್ತವವಾಗಿ ಆಡಳಿತ ಮಾಡತೊಡಗಿದನು. 1509ರಲ್ಲಿ ವೀರನರಸಿಂಹನು ಕಾಲಾಧೀನನಾದ ಮೇಲೆ ಕೃಷ್ಣದೇವರಾಯನೇ ಸ್ವತಂತ್ರವಾಗಿ ಆಳತೊಡಗಿದನು ಎಂದು ಇಟ್ಟುಕೊಂಡರೆ 1503-1509ರ ನಡುವಣ ವ್ಯತ್ಯಾಸಕ್ಕೆ ಪರಿಹಾರವನ್ನು ಹೇಳಿದಂತಾಗುವುದು.

o o o o o

ಈ ದಿನಚರಿಯಲ್ಲಿ ಮುಖ್ಯವಾಗಿ ನಿರೂಪಿತವಾಗಿರುವ ದಿಗ್ವಿಜಯಗಳು ಎರಡು: ಉತ್ತರದಿಂದ ದಂಡೆತ್ತಿ ಬಂದ ಬಹಮನಿ ರಾಜ್ಯದ ಅರಸು ಸುಲ್ತಾನ ಮಹಮುದ್ ಷಹ (II) ಮತ್ತು ಬಿಜಾಪುರದ ಯುಸೂಫ್ ಅದಿಲ್‌ಖಾನರ ಸಂಯುಕ್ತ ಆಕ್ರಮಣ. ಈ ಆಕ್ರಮಣವನ್ನು ವಿಜಯನಗರದ ಸೈನ್ಯ ಎರಡು ಸಲ ಎದುರಿಸಿ, ಎರಡನೆಯ ಸಲ ಕೋವಿಲಕೊಂಡದ ಬಳಿ ಮುಸ್ಲಿಮರನ್ನು ಪೂರ್ತಿಯಾಗಿ ಸೋಲಿಸಿದುವು; ಆದಿಲ್‌ಖಾನನು ಯುದ್ಧದಲ್ಲಿ ಮೃತನಾದನು; ಮಹಮುದ್ ಷಹನು ಬೀದರಿಗೆ ಓಡಿಹೋದನು. ಮುಸ್ಲಿಮರಲ್ಲಿ ಉಂಟಾದ ಗೊಂದಲದ ಪರಿಸ್ಥಿತಿಯನ್ನು ಗಮನಿಸಿ, ಕೃಷ್ಣದೇವರಾಯನು ಕೃಷ್ಣಾ-ತುಂಗಭದ್ರೆ ನಡುವಣ ಪ್ರದೇಶಕ್ಕೆ ನುಗ್ಗಿ ರಾಯಚೂರನ್ನು ವಶಪಡಿಸಿಕೊಂಡನು (1512). ಬೀದರಿಗೆ ಓಡಿಹೋಗಿದ್ದ ಸುಲ್ತಾನ ಮಹಮುದ್ ಷಹನು ಮಂತ್ರಿ ಅಮೀರ್ ಬರೀದನ ಬಂದಿಯಾಗಿದ್ದನು. ಕೃಷ್ಣದೇವ

ರಾಯನು ಸುಲ್ತಾನನನ್ನು ಸೆರೆಯಿಂದ ಬಿಡಿಸಿ, ಬಹಮನಿ ಗದ್ದುಗೆಯ ಮೇಲೆ ಅವನನ್ನು ಕುಳ್ಳಿರಿಸಿ, ಮುಸ್ಲಿಮರು ತಲೆ ಎತ್ತದಂತೆ ಮಾಡಿ, "ಯವನರಾಜ್ಯಸ್ಥಾಪನಾಚಾರ್ಯ" ಎಂಬ ಬಿರುದನ್ನು ಧರಿಸಿದನು. ಅನಂತರ ಉಮ್ಮತ್ತೂರು ಗಂಗರಾಜನು ಪ್ರತಿಭಟನೆ ತೋರಲು ಅವನ ಮೇಲೆ ದಂಡೆತ್ತಿ ಹೋಗಿ ಅವನ ಅಧೀನದಲ್ಲಿದ್ದ ಪೆನುಕೊಂಡ, ಶ್ರೀರಂಗಪಟ್ಟಣ, ಶಿವನಸಮುದ್ರಗಳನ್ನು ಸ್ವಾಧೀನ ಪಡಿಸಿಕೊಂಡನು. ದಿನಚರಿಯಲ್ಲಿ ಈ ಎಲ್ಲ ದಂಡಯಾತ್ರೆಗಳ ನಿರೂಪಣೆ ಹಿಂದು ಮುಂದಾಗಿ (ಎಂದರೆ, ಮೊದಲು ಉಮ್ಮತ್ತೂರು ದೊರೆಯ ವಿರುದ್ಧ, ಆಮೇಲೆ ಮುಸ್ಲಿಮರ ವಿರುದ್ಧ) ಉಲ್ಲೇಖಗೊಂಡಿವೆ.

ಮುಸ್ಲಿಮರ ಪ್ರಭಾವವನ್ನು ನಿರ್ನಾಮ ಮಾಡಿದ ಮೇಲೆ, ಕೃಷ್ಣದೇವರಾಯನ ದೃಷ್ಟಿ ಓರುಂಗಲ್ಲಿನ (ಒರಿಸ್ಸಾದ) ಗಜಪತಿ ಪ್ರತಾಪರುದ್ರ ದೇವನ ಕಡೆಗೆ ಹರಿಯಿತು. ಪ್ರತಾಪರುದ್ರನು ಬಹಳ ಬಲಶಾಲಿ; ಅನೇಕ ಕೋಟೆಕೊತ್ತಲ ಗಿರಿದುರ್ಗಗಳ ಅಧಿಪತಿ; ಅಜೇಯ-ಎನಿಸಿದ್ದವನು. ಈ ಬಗೆಗೆ ದಿನಚರಿಯಲ್ಲಿ ವಿವರಪೂರ್ಣವಾದ ಪ್ರಸ್ತಾವ ದೊರೆಯುತ್ತದೆ. ಅವನ ಅಧೀನದಲ್ಲಿದ್ದ ಷೋಡಶ'ಪಾತ್ರ'ರ ಹೆಸರುಗಳು ದಿನಚರಿಯಲ್ಲಿ ಉಲ್ಲೇಖಗೊಂಡಿವೆ.* ಪ್ರಲೋಭನೆಯಾಗಿ ಅವರಿಗೆ ಕಳಿಸಿಕೊಟ್ಟ 16 ಅನರ್ಘ್ಯರತ್ನಾಭರಣಗಳ ಹೆಸರುಗಳೂ ಇಲ್ಲಿ ನಮೂದಾಗಿವೆ. ಗಜಪತಿಯೊಂದಿಗೆ ನಡೆಸಿದ ಮಹಾಯುದ್ಧವು 1913-1918ರ ವರೆಗೆ ದೀರ್ಘವಾಗಿ ನಡೆಯಿತು. ಗಜಪತಿಯೊಡನೆ ನಡೆದ ಹೋರಾಟದ ಒಸ್ಸೀಲಿಯ ಚಿತ್ರಣವು ಚರಿತ್ರ ಗ್ರಂಥಗಳಲ್ಲಿ ದೊರೆಯದ ಒಂದೆರಡು ಸ್ವಾರಸ್ಯದ ಸಂಗತಿಗಳನ್ನು ಒಳಗೊಂಡಿದೆ. ಓರುಗಲ್ಲಿನ ಗಜಪತಿ ಪ್ರತಾಪರುದ್ರನಿಗೂ ದೆಹಲಿ ಸುಲ್ತಾನನಿಗೂ ವೈರ ಮಸೆದು, ಸುಲ್ತಾನನು ಓರುಗಲ್ಲಿಗೆ ಮುತ್ತಿಗೆ ಹಾಕಿದನು. ಗಜಪತಿ ಹನ್ನೆರಡು ವರ್ಷ ಹೋರಾಡಿದನು. ದುರ್ಗದೊಳಗಿನ ಆಹಾರ ಮುಂತಾದ ಸಾಮಗ್ರಿ ತೀರಿಹೋಗಲು, ಗಜಪತಿ ಹೊರ ಹೊರಟು ಹೋರಾಡಿದನು; ಸುಲ್ತಾನನಿಗೆ ಸೆರೆ ಸಿಕ್ಕಿದನು. ಸುಲ್ತಾನನು ಅವನನ್ನು ದೆಹಲಿಗೆ ಕರೆದೊಯ್ದನು. ಸುಲ್ತಾನನ ತಾಯಿ ಗಜಪತಿಯನ್ನು ನೋಡಲು ಅಪೇಕ್ಷೆಪಟ್ಟಳು. ಅವಳ ನಿದ್ರೆಯಲ್ಲಿ ಪ್ರತಾಪರುದ್ರನು ಈಶ್ವರನಂತೆ, ಅವನ ಬಾಹ್ಯಚಿಹ್ನೆಗಳೊಡನೆ ಕಾಣಿಸಿಕೊಂಡನು. ಇಂತಹ ದೊರೆಯನ್ನು ಹಿಡಿದು ತರುವುದು ಸರಿಯಲ್ಲ ಎಂದು ಆಕೆ ಸೂಚಿಸಲು, ತಾನು ನಿದ್ರೆ ಹೋಗುವಾಗ ನೋಡು ಎಂದು ತಾಯಿಗೆ ತಿಳಿಸಿದನು. ಅದರಂತೆ ನೋಡಿದಾಗ, ತಾಯಿಗೆ ಸುಲ್ತಾನನು ಶೇಷಶಾಯಿಯಾಗಿ ವಿಷ್ಣುವಿನಂತೆ ಕಂಡನು. ಆಕೆಗೆ ಆಶ್ಚರ್ಯ. ಮಹಿಮೆಯಲ್ಲಿ ಇಬ್ಬರೂ ಸಮಾನರು

---

*ಒರಿಸ್ಸಾದಲ್ಲಿ ಈಗಲೂ 'ಮಹಾಪಾತ್ರ' ಎಂಬ ಉಪನಾಮವು ಬಳಕೆಯಲ್ಲಿದೆ.

ಎಂದು ಎಣಿಸಿ, 'ಪ್ರತಾಪ ರುದ್ರನಿಗೆ ಸಹಪಂಕ್ತಿ ಭೋಜನ ಮಾಡಿಸಿ, ಸನ್ಮಾನ ಬಹುಮಾನಗಳನ್ನು ಮಾಡಿ ಓರುಗಲ್ಲಿಗೆ ಕಳಿಸಿಕೊಟ್ಟರೆ ಕೀರ್ತಿ ಶಾಶ್ವತವಾಗಿ ಉಳಿಯುವುದು' ಎಂದು ಸಲಹೆ ಮಾಡಿದಳು. ಸುಲ್ತಾನನು ಹಾಗೆಯೆ ಮಾಡಿದನು. ಬೇಹುಗಾರರಿಂದ ಕೇಳಿ ತಿಳಿದ ಈ ಸಂಗತಿಯನ್ನು ಕೃಷ್ಣದೇವರಾಯನಿಗೆ ಅವನ ಆಪ್ತರಾದ ಓಲಗದ ಸಾಮಾಜಿಕರು ತಿಳಿಸುತ್ತಾರೆ. ಅಂದಿನ ದಿನಗಳಲ್ಲಿ ದಿಳ್ಳಿ ಸುಲ್ತಾನನ ಹಾಗೂ ಪ್ರತಾಪ ರುದ್ರನ ಮಹಿಮೆಯ ಬಗ್ಗೆ ಜನಜನಿತವಾಗಿ ಹಬ್ಬಿದ್ದ ಪ್ರತೀತಿಯೋ ಇಲ್ಲವೆ ದಿನಚರಿಯನ್ನು ಬರೆಯಿಸಿದವರೇ ಕಟ್ಟಿದ ಕತೆಯೋ ಎನ್ನುವುದನ್ನು ನಿಶ್ಚಯಿಸುವುದಕ್ಕೆ ಆಧಾರವೇನೂ ಇಲ್ಲ. ಅದು ಹೇಗೇ ಇರಲಿ, ಪ್ರತಾಪ ರುದ್ರನ ಮಹಿಮೆಯನ್ನು ಅತಿಶಯ ಮಾಡಿ ಹೇಳಿದರೆ ಅವನನ್ನು ಗೆದ್ದ ಕೃಷ್ಣದೇವ ರಾಯನ ಮಹಿಮೆಯೂ ಇಮ್ಮಡಿಸಿದಂತಾಗುವುದು ಎನ್ನುವುದು ಈ ಸ್ವಪ್ನ ಪ್ರಸಂಗದ (ಪು. 29) ಉದ್ದೇಶವಾಗಿರುವ ಹಾಗೆ ಕಂಡುಬರುತ್ತದೆ. ಅಂತೆಯೇ, ಗಜಪತಿಯನ್ನು ಕೊಲ್ಲಲು ಅವನ ಶತ್ರುಗಳು ಜಗನ್ನಾಥನ ಪೂಜಾರಿಯನ್ನು ಒಳ ಹಾಕಿಕೊಂಡು ತೀರ್ಥದಲ್ಲಿ ವತ್ಸನಾಭಿ ವಿಷವನ್ನು ಬೆರೆಸಿ ಗಜಪತಿಯನ್ನು ಕೊಲೆ ಮಾಡಲು ಯತ್ನಿಸಿದಾಗ, ಅವನು ವಿಷಬೆರಸಿದ ತೀರ್ಥವನ್ನು ಸೇವಿಸಿ ವಿಷವನ್ನು ಜೀರ್ಣಿಸಿಕೊಂಡ ಪ್ರಕರಣವೂ ಆತನ ಮಹಿಮೆಯನ್ನು ಹೆಚ್ಚಿಸುವುದಾಗಿದೆ.

ಗಜಪತಿಯ ದೈವಭಕ್ತಿ, ಶೌರ್ಯ ಪ್ರತಾಪಗಳು, ರಾಜನೀತಿಜ್ಞತೆ, ಅವನ ಅಧೀನರಾದ ಷೋಡಶ ಪಾತ್ರರ ಶಕ್ತಿಸಾಮರ್ಥ್ಯಗಳು— ಈ ಎಲ್ಲವುಗಳ ವರ್ಣನೆ ಸವಿವರವಾಗಿ ಸ್ವಾರಸ್ಯಪೂರ್ಣವಾಗಿ ಸಾಗಿದೆ. (ಪು. 31-37).

ಗಜಪತಿಯನ್ನು ಸತ್ತ್ವಸಂಪನ್ನನಾಗಿ ಮಾಡಿ ಅವನ ವ್ಯಕ್ತಿತ್ವವನ್ನು ಕೃಷ್ಣ ದೇವರಾಯನ ವ್ಯಕ್ತಿತ್ವಕ್ಕೆ ಸರಿದೊರೆಯಾಗಿ ಮಾಡಿದೆ. ಇಂಥ ಸಮಾನಸ್ಕಂದನನ್ನು ಗೆದ್ದದ್ದರಿಂದ ಕೃಷ್ಣರಾಯನ ವ್ಯಕ್ತಿತ್ವದ ಬಣ್ಣವೂ ಏರಿದೆ. ಕೃಷ್ಣದೇವರಾಯ ಮದುವೆ ಆಗುವುದು ಗಜಪತಿಯಂಥ ಶೂರನ ಮಗಳನ್ನು.

ಕೃಷ್ಣದೇವರಾಯನ ವ್ಯಕ್ತಿತ್ವ

ಅಳಾಗಲಿ ಅರಸಾಗಲಿ, ಆತನ ವ್ಯಕ್ತಿತ್ವ ಹೊಮ್ಮಿ ಬೆಳಕಿಗೆ ಬರುವುದು ಆತನ ನಡೆನುಡಿಗಳ ಮೂಲಕ. ಈ ಬಖೈರಿನ ಕರ್ತರು ಇದನ್ನು "ಕೃಷ್ಣರಾಯರ ದಿನಚರಿಯ ಕೃತ್ಯಗಳ ವಿಸ್ತಾರ" ಎಂದು ಕರೆದಿರುವುದರಿಂದ, ಕೃಷ್ಣದೇವರಾಯನ ಗೈಮೆ ಗರಿಮೆ ಹಿರಿಮೆಗಳನ್ನು ಚಿತ್ರಿಸುವುದೇ ಇದರ ಮುಖ್ಯ ಉದ್ದೇಶವಾಗಿ ಕಾಣುತ್ತದೆ.

ಕೃಷ್ಣದೇವರಾಯನೇ ರಚಿಸಿರುವ 'ಆಮುಕ್ತಮಾಲ್ಯದ'ವು ಪರಮವಿಷ್ಣುಭಕ್ತನಾದ ವಿಷ್ಣುಚಿತ್ತನ ಕಥೆಯನ್ನು ಮಹಾಕಾವ್ಯದ ಪ್ರಕಾರದಲ್ಲಿ ನಿರೂಪಿಸುತ್ತದೆ. ಈ ಕೃತಿಗೆ 'ವಿಷ್ಣುಚಿತ್ತೀಯ' ಎಂಬ ನಾಮಾಂತರವೂ ಉಂಟು. ಇದರಲ್ಲಿ ವಿಷ್ಣುಚಿತ್ತ (ಪೆರಿಯಾಳ್ವಾರ್), ಅವನಿಗೆ ದೊರೆತ ಹೆಣ್ಣುಮಗು ಶೂಡಿಕುಡುತ್ತಮ್ಮ (ಆಂಡಾಳ್ ಮತ್ತು ಗೋದಾದೇವಿ ಎಂಬುದು ಅವಳ ನಾಮಾಂತರಗಳು), ಅವಳ ಭಕ್ತಿಪರವಶತೆ, ಕಟ್ಟಕಡೆಯಲ್ಲಿ ಅವಳು ಶ್ರೀರಂಗನಾಥನಲ್ಲಿ ಸಾಯುಜ್ಯ ಹೊಂದುವುದು, ವಿಷ್ಣುಚಿತ್ತನು ಪಾಂಡ್ಯರಾಜನಿಗೆ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ವಿಷ್ಣುಪಾರಮ್ಯವನ್ನು ಬೋಧಿಸಿ ಪಾಂಡ್ಯರಾಜನಾದ (ಶೈವ) ಮತ್ಸ್ಯಧ್ವಜನನ್ನು ವಿಷ್ಣುಭಕ್ತನನ್ನಾಗಿ ಮಾಡಿದ್ದು—ಇವು ವರ್ಣಿತವಾಗಿರುವ ಮುಖ್ಯ ಸಂಗತಿಗಳು. ಇವುಗಳನ್ನೊಳಗೊಂಡ ಕಥಾಭಿತ್ತಿಯಲ್ಲಿ ಪ್ರಾಸಂಗಿಕವಾಗಿ ಯಾಮುನಾಚಾರ್ಯರು ತಮ್ಮ ಮಗನಿಗೆ ರಾಜನೀತಿಯನ್ನು ಬೋಧಿಸುತ್ತಾರೆ. ಈ ರಾಜನೀತಿಯ ಪ್ರಕರಣದಲ್ಲಿ "ರಾಜನ ದಿನಚರಿ" ಹೇಗಿರಬೇಕೆಂಬ ವಿವರಣೆ ಅಡಕವಾಗಿದೆ. ಕೃಷ್ಣದೇವರಾಯನು ತಾನು ಅನುಸರಿಸುತ್ತಿದ್ದ ದಿನಚರಿಯನ್ನೇ ಯಾಮುನಾಚಾರ್ಯರ ಮುಖೇನ ಹೇಳಿದಂತಿದೆ. 'ಆಮುಕ್ತಮಾಲ್ಯದ'ದ ರಾಜನೀತಿಯ ಕೆಲವು ಅಂಶಗಳೂ, ದಿನಚರಿಯ ಅನೇಕ ವಿವರಗಳೂ ಪ್ರಸ್ತುತ ದಿನಚರಿ ಕೃತಿಯಲ್ಲಿ ಪ್ರತಿಬಿಂಬಿತವಾಗಿವೆ ಎನ್ನಲಡ್ಡಿಯಿಲ್ಲ. ಈ ಕೃತಿಯ ಕರ್ತರು 'ಆಮುಕ್ತಮಾಲ್ಯದ'ವನ್ನು ಓದಿಕೊಂಡಿದ್ದು ಅದರ ಪ್ರಭಾವಕ್ಕೆ ಒಳಗಾಗಿದ್ದರೋ ಇಲ್ಲವೆ ಕೃಷ್ಣರಾಯನ ದಿನನಿತ್ಯದ ಕಾರ್ಯಚಟುವಟಿಕೆಗಳನ್ನು ಸಾಕ್ಷಾತ್ತಾಗಿ ಬಲ್ಲವರಾಗಿದ್ದು ಅವುಗಳನ್ನು ಯಥಾವತ್ತಾಗಿ ವರ್ಣಿಸಿರುವರೋ ಹೇಳುವುದು ಕಷ್ಟ. ಈ ದಿನಚರಿಯಲ್ಲಿ ಕೃತಿಕರ್ತರು ಕೃಷ್ಣರಾಯನು ಬಹಮನಿ ರಾಜ್ಯದ ತುರುಷ್ಕ ದೊರೆಗಳನ್ನೂ ಗಜಪತಿ ಪ್ರತಾಪ ರುದ್ರನನ್ನೂ ಯುದ್ಧದಲ್ಲಿ ಸೋಲಿಸಿ ಜಯ ಪಡೆದದ್ದನ್ನು ಪ್ರಧಾನವಾಗಿ ನಿರೂಪಿಸಿದ್ದಾರೆ. ಹೀಗಿರುತ್ತ, ಈ ಕೃತಿಯನ್ನು 'ಕೃಷ್ಣದೇವರಾಯ ವಿಜಯ' ಎಂದು ಕರೆದರೂ ತಪ್ಪಾಗುವುದಿಲ್ಲ. ಈ ವಿಜಯಕ್ಕೆ ಜಂಗಮ ಜಯಸ್ತಂಭವೋ ಎನ್ನುವಂತೆ, "ಗಜಪತಿ ತನ್ನ ಕೌಮಾರಿತಿಯನ್ನು ಧಾರೆಯೆರೆದು ಕೊಟ್ಟನು."

ಕೃಷ್ಣದೇವರಾಯನು ಮನುಧರ್ಮಶಾಸ್ತ್ರ ಕೌಟಿಲ್ಯನ ಅರ್ಥಶಾಸ್ತ್ರ ಶುಕ್ರನೀತಿಸಾರ ಮೊದಲಾದ ಧರ್ಮಶಾಸ್ತ್ರ ಗ್ರಂಥಗಳನ್ನೂ ಅರ್ಥಶಾಸ್ತ್ರ ಗ್ರಂಥಗಳನ್ನೂ ಓದಿಕೊಂಡಿದ್ದನು. ತಾನು ಬಲ್ಲ ರಾಜನೀತಿಯನ್ನು ತನ್ನ ಜೈತ್ರಯಾತ್ರೆಗಳ ಸಂದರ್ಭದಲ್ಲಿಯೂ ರಾಜ್ಯಭಾರಕ್ರಮದಲ್ಲಿಯೂ ಅನುಸರಿಸುತ್ತಿದ್ದನು. ಶತ್ರುಗಳ ಚಲನವಲನಗಳನ್ನು, ಸಂಚುಹೊಂಚುಗಳನ್ನು ಬೇಹುಗಾರರ ಮೂಲಕ ತಿಳಿದು, ಆಪ್ತರಾದ ಮಂತ್ರಿಗಳೊಂದಿಗೆ ಮಂತ್ರಾಲೋಚನೆ ಮಾಡಿ, ಸಮಯಕ್ಕೆ ತಕ್ಕಂತೆ

ಚತುರುಪಾಯುಗಳನ್ನು ಪ್ರಯೋಗಿಸಿ, ಶತ್ರುಗಳನ್ನು ಸ್ವಾಧೀನಕ್ಕೆ ತಂದುಕೊಳ್ಳುತ್ತಿದ್ದನು. ಶತ್ರುಗಳ ಸೈನ್ಯಬಲಗಳ ಅಂಕಿಅಂಶಗಳನ್ನು ತಿಳಿದುಕೊಂಡು ಅದಕ್ಕೆ ತಕ್ಕಂತೆ ತನ್ನ ಸೈನ್ಯದ ದಳಗಳನ್ನು ಹೆಚ್ಚಿಸಿಕೊಳ್ಳುತ್ತಿದ್ದನು. ಸ್ವತಃ ವಿದ್ವಾಂಸನೂ ಕವಿಯೂ ಆದದ್ದರಿಂದ ವಿದ್ವಾಂಸರಿಗೂ ಕವಿಗಳಿಗೂ ಆಶ್ರಯವಿತ್ತಿದ್ದನು. ದೈವ ಬ್ರಾಹ್ಮಣರಲ್ಲಿ ಅಪಾರ ಭಕ್ತಿ. ತನ್ನ ಯಶಸ್ಸಿಗೆ ದೈವಕೃಪೆಯೇ ಕಾರಣ ಎಂದು ನಂಬಿದ್ದರಿಂದ ದಿಗ್ವಿಜಯಪೂರ್ವದಲ್ಲೂ ದಿಗ್ವಿಜಯಾನಂತರವೂ ಪ್ರಸಿದ್ಧ ದೈವಸನ್ನಿಧಿಗಳಾದ ತೀರ್ಥಕ್ಷೇತ್ರಗಳಿಗೆ ಹೋಗಿ ದೇವರ ಸೇವೆ ಮಾಡುತ್ತಿದ್ದನು. ಅಚ್ಚ ಶ್ರೀವೈಷ್ಣವನಾದರೂ ಎಲ್ಲ ಮತಧರ್ಮಗಳನ್ನೂ ಸಮದೃಷ್ಟಿಯಿಂದ ಕಾಣುತ್ತಿದ್ದನು. ಜ್ಯೋತಿಷ ಶಕುನಾದಿಗಳಲ್ಲಿ ನಂಬಿಕೆ ಇಟ್ಟಿದ್ದನು. ಬೆಳಗ್ಗೆ ನಿದ್ರೆಯಿಂದ ಎದ್ದ ಕ್ಷಣದಿಂದ ತೊಡಗಿ ರಾತ್ರಿ ಮಲಗುವವರೆಗೂ ನಿತ್ಯಕರ್ಮಗಳನ್ನು ನಿಷ್ಠೆಯಿಂದ ಆಚರಿಸುತ್ತ ನುಡಿದಂತೆ ನಡೆದುಕೊಳ್ಳುತ್ತಿದ್ದನು. ಶಕ್ತಿತ್ರಯಗಳೂ ಅವನಲ್ಲಿ ಮನೆಮಾಡಿಕೊಂಡಿದ್ದುವು. ಯುದ್ಧವೀರನಾಗಿದ್ದುದಲ್ಲದೆ ದಾನ ದಯಾವೀರನೂ ಆಗಿದ್ದನು. ಭಕ್ತನಾಗಿದ್ದರೂ ಭೋಗಿ. ಒಂದು ಮಾತಿನಲ್ಲಿ, ಪುರಾಣ ಪ್ರಸಿದ್ಧ ರಾಜರಂತೆ ಕೃಷ್ಣದೇವರಾಯ ಒಬ್ಬ ಆದರ್ಶ ಪ್ರಭು. ಅವನ ಆದರ್ಶ ವ್ಯಕ್ತಿತ್ವದ ಸುಳುವು ಹೊಳವುಗಳೆಲ್ಲ ಈ ಅಪೂರ್ವ ಕೃತಿಯಲ್ಲಿ ಹಾಸುಹೊಕ್ಕಾಗಿ ಬಂದಿವೆ. ಯಾವ ದೃಷ್ಟಿಯಿಂದ ನೋಡಿದರೂ ಇದೊಂದು ಅಮೂಲ್ಯ ಐತಿಹಾಸಿಕ ದಾಖಲೆ ಎಂಬಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ಪ್ರಮಾಣ ದೃಷ್ಟಿಯಿಂದ ಕೃತಿ ಸಣ್ಣದು. ಆದರೆ ಅದರಲ್ಲಿ ಅಡಗಿರುವ ವಿಷಯದ ವ್ಯಾಪ್ತಿಯನ್ನು ಗಮನಿಸಿದರೆ ದಿನ ದಿನದ'ಕೃತ್ಯಗಳ ವಿಸ್ತಾರ'ಎಂಬ ಮಾತು ಈ ಕೃತಿಗೆ ಸಲ್ಲುತ್ತದೆ. ಕೃತಿಯ ಘಟನೆಗಳನ್ನು ಸ್ಥೂಲವಾಗಿ ಹೀಗೆಸಂಗ್ರಹಿಸಬಹುದು: ವೀರನರಸಿಂಹರಾಯನ ಅರ್ಥಾತ್ ಕೃಷ್ಣದೇವರಾಯನ ಪ್ರಾತಃಕಾಲದ ದಿನಚರಿ (ಪು. 1–3) ; ವಿದ್ಯಾರಣ್ಯರಿಂದ ರಾಜ್ಯಸ್ಥಾಪನೆಯಾದ ಸಂಗತಿ (ಪು. 3–5); ಕೃಷ್ಣದೇವರಾಯನ ಪಟ್ಟಾಭಿಷೇಕ (5-6); ಅಪ್ಪಾಜಿ ಮಂತ್ರಿ ರಾಜನೀತಿಯನ್ನು ಬೋಧಿಸಿದ್ದು (ಪು. 7–9 : ಇಲ್ಲಿ 'ಆಮುಕ್ತಮಾಲ್ಯದ'ದ ಪ್ರಭಾವವನ್ನು ಗುರುತಿಸಬಹುದು); ನೆರೆ ರಾಜ್ಯಗಳ ವಿಚಾರವನ್ನು ತಿಳಿಯಲು ಬೇಹುಗಾರರನ್ನು ಕಳಿಸುವುದು (ಪು. 10); ಕೃಷ್ಣದೇವರಾಯನು ರಾತ್ರಿಯ ವೇಳೆ ನಗರ ಶೋಧನೆ ಮಾಡಿದ್ದು (ಪು. 11); ಅರಮನೆಯ ಬೊಕ್ಕಸದ ಲೆಕ್ಕಗಳ ತನಿಖೆ (ಪು. 12); ಚತುರಂಗ ಬಲಾಬಲಗಳ ತನಿಖೆ (ಪು. 13–17); ತುರುಷ್ಕರಾಜರ ಪಟ್ಟಣಗಳಲ್ಲಿಯ ವಿದ್ಯಮಾನದ ವರ್ಣನೆ (ಪು. 18–22); ಅವರ ಮೇಲೆ ದಂಡೆತ್ತಿಕೊಂಡು ಹೋಗುವ ಬಗೆಗೆ ಮಂತ್ರಾಲೋಚನೆ, ಯುದ್ಧಸಿದ್ಧತೆ (23–28); ದೆಹಲಿ

ಸುಲ್ತಾನನು ಓರುಗಲ್ಲಿಗೆ ಮುತ್ತಿಗೆ ಹಾಕಿದ್ದು, ದೆಹಲಿ ಸುಲ್ತಾನ ಮತ್ತು ಗಜಪತಿಗಳ ಮಹಿಮೆಯ ವರ್ಣನೆ (ಪು. 29-30); ಪುರುಷೋತ್ತಮ ನಗರದ (ಈಗಿನ ಪೂರಿ ಜಗನ್ನಾಥ?) ವರ್ಣನೆ (ಪು. 31-33); ಗೋದಾವರೀ ತೀರದಲ್ಲಿ ಗಜಪತಿ ಜಗನ್ನಾಥನನ್ನು ಅರ್ಚನೆ ಮಾಡಿದ ವಿವರ, ಷೋಡಶ ಪಾತ್ರರ ಸಾಹಸ ಪರಾಕ್ರಮ ವ್ಯಕ್ತಪಟ್ಟಿದ್ದು (ಪು. 34-35); ಓರುಗಲ್ಲಿನ ಗರುಡಿ ಮನೆಗಳಲ್ಲಿ ಜಟ್ಟಿಗಳು ಸಾಮು ಮಾಡುವುದರ ವರ್ಣನೆ (ಪು. 36); ತುರುಕರ ಮೇಲೆ ಸಾಧಿಸಿದ ವಿಜಯ (ಪು. 37-41); ಕೃಷ್ಣದೇವರಾಯ ಗಜಪತಿಯ ಮೇಲೆ ದಂಡೆತ್ತಿ ಬರಬಹುದು ಎಂದು ಶಂಕಿಸಿ, ಆತನ ಸೈನ್ಯವನ್ನು ಎದುರಿಸಲು ಷೋಡಶ ಪಾತ್ರರನ್ನು ಸಜ್ಜುಗೊಳಿಸಿದ್ದು (42-46); ಈ ಸಂಗತಿಯನ್ನು ತಿಳಿದು ಕೃಷ್ಣದೇವರಾಯನು ಚಿಂತಾಕ್ರಾಂತನಾದದ್ದು, ಅಪ್ಪಾಜಿಯೊಡನೆ ಮಂತ್ರಾಲೋಚನೆ, ದಾನಭೇದೋಪಾಯಗಳಿಂದ ಷೋಡಶ ಪಾತ್ರರನ್ನು ನಿಷ್ಕ್ರಿಯರನ್ನಾಗಿ ಮಾಡಿ, ಅನಂತರ ಗಜಪತಿಯ ಮೇಲೆ ಬೀಳಬೇಕು ಎಂದು ಅಪ್ಪಾಜಿ ಸಲಹೆಮಾಡಿ ಅದರಂತೆ ಕಾರ್ಯನಡಸಿದ್ದು— ಪರಿಣಾಮವಾಗಿ, ಷೋಡಶ ಪಾತ್ರರು ತಂತಮ್ಮ ದುರ್ಗಗಳಿಗೆ ಹೊರಟುಹೋಗಲು ಗಜಪತಿ ನಿಸ್ಸಹಾಯಕನಾದುದನ್ನು ತಿಳಿದು ಕೃಷ್ಣದೇವರಾಯನು ಶರಣಾಗತನಾದ ಗಜಪತಿಯೊಡನೆ ಹೋರಾಡದೆ ಒಪ್ಪಂದ ಮಾಡಿಕೊಂಡು, ಪಟ್ಟನೂರು ಸಿಂಹಾದ್ರಿಯಲ್ಲಿ ಜಯಸ್ತಂಭವನ್ನು ಹಾಕಿಸಿ, ಗಜಪತಿಯ ಮಗಳನ್ನು ಮದುವೆನಿಂದು ಕಲುಬುರ್ಗಿ ಕೋಟೆಯನ್ನು ಸಾಧಿಸಿ ವಿದ್ಯಾನಗರಕ್ಕೆ ಹಿಂದಿರುಗುವ ಮುನ್ನ ತಿರುಪತಿ ಮೊದಲಾದ ತೀರ್ಥಕ್ಷೇತ್ರಗಳಿಗೆ ಹೋಗಿ, ವಿದ್ಯಾನಗರಕ್ಕೆ ಹಿಂದಿರುಗಿ, ಓಲಗ ಕೊಟ್ಟಿದ್ದು, ಮುಂತಾದ ಸಂಗತಿಗಳ ವಿವರಗಳು (47-58).

ಮುಸಲ್ಮಾನ ದೊರೆಗಳ ಹೆಸರುಗಳು, ಯುದ್ಧಗಳ ಕಾಲಗಳ ಅನುಪೂರ್ವಿ, ಚತುರಂಗ ಸೈನ್ಯದ ಲೆಕ್ಕವಿವರ ಮುಂತಾದ ಕೆಲವು ಸಂಗತಿಗಳ ವಿಚಾರದಲ್ಲಿ ಚರಿತ್ರೆಯಲ್ಲಿ ಹೇಳಿರುವುದಕ್ಕೂ ಇಲ್ಲಿ ತಿಳಿಸಿರುವುದಕ್ಕೂ ಅಲ್ಪ ಸ್ವಲ್ಪ ವ್ಯತ್ಯಾಸಗಳು ಕಂಡುಬಂದರೂ ಈ ದಿನಚರಿಯು ಒಟ್ಟಿಗೆ ಬಹುಮಟ್ಟಿಗೆ ವಸ್ತುನಿಷ್ಠವಾದ ದಾಖಲೆಯಾಗಿ ಪರಿಣಮಿಸಿದೆ; ಕೃಷ್ಣದೇವರಾಯನ ಮೊದಲ ಹತ್ತು ವರ್ಷಗಳ ಆಳ್ವಿಕೆಯ ಮುಖ್ಯ ಘಟನೆಗಳನ್ನು ಪ್ರತ್ಯಕ್ಷದರ್ಶಿಯ ವರದಿಯ ರೀತಿಯಲ್ಲಿ ನಿರೂಪಿಸುತ್ತದೆ. ಈ ದಿನಚರಿ ಕೃಷ್ಣದೇವರಾಯನ ಆಳ್ವಿಕೆಗೆ ಸಂಬಂಧಪಟ್ಟಂತೆ ಚರಿತ್ರ ಗ್ರಂಥಗಳಲ್ಲಿ ಕಾಣಸಿಕ್ಕದ ಕೆಲವು ವಿಚಾರಗಳನ್ನು ಹೇಳುವುದರಿಂದ ಐತಿಹಾಸಿಕ ಮೌಲ್ಯವುಳ್ಳದ್ದಾಗಿದೆ; ಚರಿತ್ರೆಯ ವಿದ್ಯಾರ್ಥಿಗಳು ಅಧ್ಯಯನ ಮಾಡಲು ಯೋಗ್ಯವಾಗಿದೆ. ಹೀಗಿದ್ದರೂ, ವಿಶಿಷ್ಟವಾದ ಗದ್ಯಶೈಲಿಯ ಈ ಕೃತಿಯಲ್ಲಿ ಸಾಹಿತ್ಯಗುಣಲೇಪವೂ ಸಹೃದಯರಿಗೆ ಗೋಚರಿಸದೆ ಇರದು. ಇಲ್ಲಿಯ ಶಬ್ದಪ್ರಯೋಗಗಳೂ ಗಮನಾರ್ಹವಾದದ್ದರಿಂದ, ಸ್ಥಳನಾಮಗಳು ವ್ಯಕ್ತಿನಾಮಗಳು ಇತರ ಶಬ್ದಗಳು ಇವುಗಳನ್ನು

ಸಂಗ್ರಹಿಸಿ ಅನುಬಂಧವಾಗಿ ಕೊಟ್ಟಿದೆ. ಇವು ಅಂದಿನ ಉಚ್ಚಾರಣೆಯ ರೂಪದಲ್ಲಿಯೇ ಪ್ರಯೋಗವಾಗಿವೆ. ಸ್ಥಳನಾಮ-ವ್ಯಕ್ತಿನಾಮಗಳ ಅಧ್ಯಯನ ಪ್ರಾರಂಭವಾಗಿರುವ ಈ ಕಾಲದಲ್ಲಿ ಇವು ಅಧ್ಯಯನ ಸಾಮಗ್ರಿಯನ್ನು ಒದಗಿಸುತ್ತವೆ.

ಹಸ್ತಪ್ರತಿಯ ಸ್ವರೂಪ

ಕಡೆಯ ಗರಿ ಅಲ್ಲಲ್ಲಿ ಸ್ವಲ್ಪ ಮುರಿದುಹೋಗಿರುವುದನ್ನು ಬಿಟ್ಟರೆ ಗರಿಗಳು ಚಕ್ಕಮಟ್ಟಿಗೆ ಸುಸ್ಥಿತಿಯಲ್ಲಿವೆ. ಪ್ರತಿ ಗರಿಯಲ್ಲಿಯೂ ಸರಾಸರಿ 9 ಸಾಲುಗಳಿದ್ದು, ಪ್ರತಿ ಸಾಲಿನಲ್ಲಿಯೂ ಸರಾಸರಿ 35 ಅಕ್ಷರಗಳಿವೆ. ಗರಿಗಳ ಸಂಖ್ಯೆ 63 ; ಗರಿಯ ಅಳತೆ-ಉದ್ದ 22 ಸೆಂಟಿಮೀಟರ್, ಅಗಲ 4.7 ಸೆಂ. ಮೀ. ಬರವಣಿಗೆ ಸ್ಫುಟ ವಾಗಿದ್ದು, ಹೆಚ್ಚು ಕಷ್ಟವಿಲ್ಲದೆ ಓದಬಹುದಾಗಿದೆ. ಹಸ್ತಪತ್ರಿಯ ಪ್ರಾರಂಭದಲ್ಲಿ "ಶ್ರೀ ರಾಮಾನುಜಾಯನಮಃ" ಎಂದಿರುವುದರಿಂದ, ಶ್ರೀವೈಷ್ಣವ ಮತಾನುಯಾ ಯಿಯಾದ ಶ್ರೀ ಕೃಷ್ಣದೇವರಾಯನ ಅಪ್ಪಣೆಯ ಪ್ರಕಾರ ಬರೆದದ್ದಾದ್ದರಿಂದ ಹಾಗೆ ಬರೆದಿದೆಯೋ ಇಲ್ಲವೆ ಇದನ್ನು ಬರೆದ ಲಿಪಿಕಾರನೇ ಶ್ರೀವೈಷ್ಣವ ಮತಾನುಯಾ ಯಿಯೋ ಹೇಳಬರುವಂತಿಲ್ಲ. ಇದನ್ನು ಹೇಳಿ ಬರೆಯಿಸಿದವರಿಬ್ಬರೂ (ಮುಕ್ಕು ತಿಮ್ಮಯ್ಯ ಮತ್ತು* ಮಾದಯ್ಯ*ನವರ ಮಲ್ಲಯ್ಯ) ಕೃಷ್ಣದೇವರಾಯನ ಓಲಗದ 'ಕವೀಶ್ವರರು' ಎಂದು ಗ್ರಂಥದಲ್ಲಿಯೇ ಉಲ್ಲೇಖವಿದೆ. ಉದ್ದಕ್ಕೂ ಆ ಕಾಲದ ಆಡು ನುಡಿಯ ಗದ್ಯವೇ ಬಳಕೆಯಾಗಿದ್ದರೂ ನೀತಿಪದ್ಯಗಳು, ಶ್ಲೋಕಗಳು ಉದಾಹೃತ ವಾಗಿರುವುದರಿಂದಲೂ ಒಂದೆರಡು ಕಡೆ ಚಂಪೂ ಕಾವ್ಯಗಳ ಸಂಸ್ಕೃತ ಸಮಾಸ ಭೂಯಿಷ್ಠ ಶೈಲಿಯ ವಾಕ್ಯಗಳಿರುವುದರಿಂದಲೂ ಇಬ್ಬರು ಕವೀಶ್ವರರಲ್ಲಿ ಒಬ್ಬರು ಹೇಳಿ ಬರೆಯಿಸಿದ್ದು ಎಂಬಲ್ಲಿ ಸಂದೇಹವಿಲ್ಲ. ಹಸ್ತಪ್ರತಿಯಲ್ಲಿ ಲಿಪಿಕಾರ ಸ್ಖಾಲಿತ್ಯ ಗಳೂ ವೈಲಕ್ಷಣ್ಯಗಳೂ ಹೇರಳವಾಗಿವೆ. ಆದ್ದರಿಂದ ಕೃತಿ ಕೃಷ್ಣದೇವರಾಯನ ಸಮಕಾಲೀನವೇ ಆದರೂ ನಮಗೆ ದೊರಕಿರುವ ಹಸ್ತಪ್ರತಿ ಮೂಲ ಮಾತೃಕೆಯ ನಕಲಾಗಿರುವ ಸಂಭವವೇ ಹೆಚ್ಚು. ಱಕಾರ ಇರಬೇಕಾದ ಕೆಲವು ಪದಗಳು ಬಳಕೆ ಯಾಗಿದ್ದು, ಱಕಾರ ಇಲ್ಲದಿರುವುದರಿಂದ ಕೃತಿ 16 ನೆಯ ಶತಮಾನದ್ದಾದರೂ ಪ್ರತಿ ಇನ್ನೂ ಈಚಿನದು—ಬಹುಶಃ 17-18 ನೆಯ ಶತಮಾನದ್ದು, ಎನ್ನಬೇಕಾಗುತ್ತದೆ.

ಪಾಠಸ್ವರೂಪ : ಪರಿಷ್ಕರಣ

ಸಾಧಾರಣವಾಗಿ ಎಲ್ಲ ಹಸ್ತಪ್ರತಿಗಳಲ್ಲಿಯೂ ಕಂಡು ಬರುವ ಕೆಲವು ಲಿಪಿ

---

* 'ದ'ಕಾರಾಕ್ಷರ ಸ್ಪಷ್ಟವಾಗಿ ಲಿಖಿತವಾಗಿಲ್ಲವಾದ್ದರಿಂದ 'ಮಾರಯ್ಯ' ಎಂದು ಓದಿ ಕೊಳ್ಳಲೂ ಸಾಧ್ಯವಿದೆ.

ಲೇಖನ ವೈಲಕ್ಷಣ್ಯಗಳು ಈ ಹಸ್ತಪ್ರತಿಯಲ್ಲಿಯೂ ಕಂಡು ಬರುತ್ತವೆ; ಅವು ಯಾವುವೆಂದರೆ :–

೧. 'ಯ' ಶ್ರುತಿ : ಇ ಈ ಎ ಏ ಐ ಸ್ವರಗಳು ಬಿಡಿಯಾದ ರೂಪದಲ್ಲಿದ್ದಾಗ ಯ ಕಾರವಾಗಿ ಉಚ್ಚಾರಣೆಯಾಗಿ ಹಾಗೆಯೇ ಲಿಖಿತವಾಗುತ್ತವೆ. ಉದಾ., ಇದ್ದಾರು > ಯಿದ್ದಾರು, ಇಲ್ಲ > ಯಿಲ್ಲ. ಇಲ್ಲಿಗೆ > ಯಿಲ್ಲಿಗೆ, ಎಂದು > ಯೆಂದು > ಯಂದು (ಈ ಹಸ್ತಪ್ರತಿಯಲ್ಲಿ ಈ ರೂಪ ಇದ್ದು, 'ಯೆಂದು' ಎಂದು ಮಾರ್ಪಡಿಸಿದೆ.) ಏಕಾಂಬರ > ಯೆಕಾಂಬರ.

'ವ' ಶ್ರುತಿ : ಉ, ಊ, ಒ, ಓ ಸ್ವರಗಳು ವಕಾರವಾಗಿ ಮಾರ್ಪಡುತ್ತವೆ : ಉದಾ. ಉಂಟಾಗಿ > ವುಂಟಾಗಿ, ಓಲಗ > ವೋಲಗ> ವಾಲಗ ಇತ್ಯಾದಿ.

ಇಂಥ ಸಂದರ್ಭಗಳಲ್ಲಿ, ಸರಿಯಾದ ಶಬ್ದರೂಪಕ್ಕೆ ಹತ್ತಿರವಾದ 'ಯ' ಶ್ರುತಿ 'ವ' ಶ್ರುತಿ ಸಹಿತವಾದ ರೂಪಕ್ಕೆ ಶಬ್ದಪ್ರಯೋಗಗಳನ್ನು ಹಸ್ತಪ್ರತಿಯಲ್ಲಿ ತಿದ್ದುಪಾಟು ಮಾಡಲಾಗಿದೆ.

'ಉ' ಸ್ವರದೊಂದಿಗೆ (ಆಗಮವಾಗಿ ಇಲ್ಲವೆ ಸಹಜವಾಗಿ) 'ವ' ಕಾರ ಇರಬೇಕಾದಲ್ಲಿ 'ವ' ಕಾರವನ್ನು ಬಿಟ್ಟು 'ಉ' ಕಾರ ಸಹಿತವಾಗಿ ಪ್ರಯೋಗಿಸಿರುವುದು : ನಾಉ (ನಾವು), ನಡಉತ್ತ (ನಡೆವುತ್ತ), ದಿವಸಊ (ದಿವಸವೂ), ಕೆಲಉ (ಕೆಲವು), ಇತ್ಯಾದಿ.

೨. ಸಂಯುಕ್ತ ವ್ಯಂಜನಾಕ್ಷರಗಳ ಪೂರ್ವವ್ಯಂಜನ ಸ್ಥಾನದಲ್ಲಿ ಬಿಂದುವಿನ ಪ್ರಯೋಗ : ತಂನ (ತನ್ನ), ನಿಂನ (ನಿನ್ನ), ಅಸಿತಂನು (ಅಸಿತನ್ನು), ಇತ್ಯಾದಿ.

೩. ಸಾಧಾರಣವಾಗಿ ದೀರ್ಘ ಸ್ವರ ಚಿಹ್ನೆಗಳನ್ನು ಕೊಡಬೇಕಾದ ಕಡೆ ಕೊಡದೆ ಇರುವುದು : ಕೆಳಿಕೊ (ಕೇಳಿಕೊ), ಕಿರ್ತಿ (ಕೀರ್ತಿ), ಅಬಿಸೆಕ (ಅಭಿಷೇಕ), ನಿಉ (ನೀವು), ಇತ್ಯಾದಿ.

೪. ಸ-ಶ-ಷ ಭೇದ ವಿವಕ್ಷೆ ಇಲ್ಲದಿರುವುದು, ಅಲ್ಪಪ್ರಾಣ – ಮಹಾಪ್ರಾಣಗಳ ಸ್ಥಾನಪಲ್ಲಟ,—ಇವೂ ಸಾಮಾನ್ಯ : ಉದಾ, ವಿಸೆಸ (ವಿಶೇಷ), ಸಿಬಿ (ಶಿಬಿ), ಇದ್ಧಾರೆ (ಇದ್ದಾರೆ), ಬೂಷಣ (ಭೂಷಣ), ಲೆಖ್ಖ (ಲೆಕ್ಕ) ಇತ್ಯಾದಿ.

೫. ಕ್ರಿಯಾಪದಗಳ ಪ್ರೇರಣಾರ್ಥಕ ಇಸು ಪ್ರತ್ಯಯದ ಮುಂದೆ ಕಾಲವಾಚಕ ಪ್ರತ್ಯಯಗಳು, ಆಖ್ಯಾತ ಪ್ರತ್ಯಯಗಳು, ಇವುಗಳಲ್ಲಿ 'ದ' ಕಾರಕ್ಕೆ 'ತ' ಕಾರ ಮತ್ತು ವಿವೃತವಾಗಿ ಬರೆಯುವುದಕ್ಕೆ ಬದಲಾಗಿ ಸಂವೃತವಾಗಿ ಬರೆಯುವುದು: ಇರಿಸ್ತರಾದ ಕಾರಣ (ಇರಿಸಿದರಾದ ಕಾರಣ), ಪರಾಮರಿಸ್ತಿದ ಕಾರ್ಯ (ಪರಾಮರಿಸಿದ ಕಾರ್ಯ), ಇತ್ಯಾದಿ; ವಾಲಗಿಸ್ತರು (ಓಲಗಿಸಿದವರು); ಈ ಪ್ರಯೋಗ

ಗಳ ರೂಪಸಾಮ್ಯದಿಂದಾಗಿ ನಾಮಪದಗಳ ಷಷ್ಠಿವಿಭಕ್ತಿ ರೂಪಗಳಲ್ಲೂ ದಕಾರಕ್ಕೆ ತಕಾರಾದೇಶ ಕಂಡುಬರುತ್ತದೆ: ಬೊಕ್ಕಸ್ತ (ಬೊಕ್ಕಸದ), ಇತ್ಯಾದಿ.

ನಡುಗನ್ನಡ ಕಾವ್ಯಗಳಲ್ಲಿ ಕಂಡು ಬರುವ ಕ್ರಿಯಾರೂಪಗಳೂ ಕಂಡು ಬಂದಿವೆ: ಬಾಹ (< ಬಹ < ಬಪ್ಪ=ಬರುವ),ಹೋಹ(ಪೋಪ)=ಹೋಗುವ), ಇತ್ಯಾದಿ.

ಇನ್ನೂ ಇಂತಹ ಎಷ್ಟೋ ಲಿಪಿಕಾರ ವಿಶಿಷ್ಟ ಶಬ್ದಪ್ರಯೋಗಗಳನ್ನು ಪಟ್ಟಿ ಮಾಡಬಹುದು. ಮೂಲ ಪಾಠದ ಸ್ವರೂಪವನ್ನು ಅನಗತ್ಯವಾಗಿ ಶಿಷ್ಟ ಪ್ರಯೋಗಾನುಗುಣ್ಯವಾಗಿ ತಿದ್ದುವ ಗೋಜಿಗೆ ಹೋಗಿಲ್ಲ. ಇಂಥ ಪ್ರಯೋಗಗಳನ್ನು ಅಲ್ಪ ಸ್ವಲ್ಪ ಮಾರ್ಪಾಡುಗಳೊಂದಿಗೆ ಹಾಗೆಯೇ ಉಳಿಸಿಕೊಂಡಿದೆ. ಓದುಗರಿಗೆ ಅರ್ಥ ಕ್ಲೇಶಕ್ಕೆ ಎಡೆಗೊಡಬಹುದಾದ ಇಲ್ಲವೆ ಅರ್ಥಶೂನ್ಯವೋ ವಿಪರೀತಾರ್ಥವೋ ಆಗ ಬಹುದಾದ ಸಂದರ್ಭಗಳಲ್ಲಿ ಮಾತ್ರ ಮೂಲಪಾಠವನ್ನು ತಿದ್ದುವ ಯತ್ನಮಾಡಿದೆ. ಉದಾ., "ನಂಬಿದವರ ನಿರುತ ಯೆಂದು" ಎಂಬ ಪಾಠದಲ್ಲಿ 'ನಿರುತ'ಕ್ಕೆ 'ದಿಟ, ಸತ್ಯ' ಎಂಬ ಅರ್ಥವಿದ್ದು, ಸಂದರ್ಭಕ್ಕೆ ಹೊಂದುವುದಿಲ್ಲ. ಪ್ರಕರಣಬಲದಿಂದ 'ನೀರು ತಾ' ಎಂದು ತಿದ್ದಿದೆ (ಪು 13). ಇಂಥಲ್ಲಿ, ಮೂಲಪಾಠವನ್ನು ಅಡಿಯಲ್ಲಿ ಕೊಟ್ಟಿದೆ.

ಇದು ಏಕೈಕ ಹಸ್ತಪ್ರತಿ ಆದ್ದರಿಂದ ಪಾಠಾಂತರದ ಪ್ರಶ್ನೆಯೇ ಉದ್ಭವಿಸಿಲ್ಲ.

ಉಪಕಾರ ಸ್ಮರಣೆ

ಶ್ರೀ ಕೃಷ್ಣದೇವರಾಯನ ದಿನಚರಿಯನ್ನು ಕೇಳಿದ ಕೂಡಲೆ ಪ್ರತಿಷ್ಠಾನದ ಮೇಲಣ ಅಭಿಮಾನದಿಂದ ಪ್ರಕಟನೆಗಾಗಿ ಹಸ್ತಪ್ರತಿಯನ್ನು ನಕಲು ಮಾಡಿ ತಮ್ಮ ಸಾರವತ್ತಾದ 'ನುಡಿ' ಯೊಂದಿಗೆ ಕಳಿಸಿಕೊಟ್ಟದ್ದಲ್ಲದೆ ಓಲೆಗರಿಯ ಹಸ್ತಪ್ರತಿಯನ್ನೂ ಪ್ರತಿಷ್ಠಾನಕ್ಕೆ ಕೊಟ್ಟು ಮಹೋಪಕಾರ ಮಾಡಿದ್ದಾರೆ, ಡಾ|| ವಿ. ಎಸ್. ಎಸ್. ಆಚಾರ್ ಅವರು. ಈ ಅಪೂರ್ವ ಕೃತಿ ಕನ್ನಡ ಬಾರದ ಇತಿಹಾಸಜ್ಞ ವಿದ್ವಾಂಸರ ಗಮನಕ್ಕೂ ಬರಬೇಕೆಂಬ ಉದ್ದೇಶದಿಂದ ಅವರು ತಮ್ಮ ಮುನ್ನುಡಿಯನ್ನು ಇಂಗ್ಲಿಷಿನಲ್ಲೂ ಬರೆದು ಕೊಟ್ಟು ಉಪಕಾರ ಮಾಡಿದ್ದಾರೆ ಇವರಿಗೆ ನಮ್ಮ ತುಂಬು ಹೃದಯದ ಧನ್ಯವಾದಗಳು. ಈ ವಿಚಾರದಲ್ಲಿ ಪ್ರತಿಷ್ಠಾನದ ಸದಸ್ಯರೂ ಹಿತೈಷಿಗಳೂ ಆದ ಶ್ರೀ ಕೆಳದಿ ಗುಂಡಾಜೋಯಿಸರ ನೆರವು ಚಿರಸ್ಮರಣೀಯ. ಅವರಿಗೂ ನಮ್ಮ ಕೃತಜ್ಞತೆಯ ವಂದನೆಗಳು. ಪ್ರತಿಷ್ಠಾನದ ಕಾರ್ಯಕರ್ತರೇ ಆದ ಶ್ರೀ ನಾ. ಗೀತಾಚಾರ್ಯ ಅವರು ಅಚ್ಚಿನಮನೆ ಪ್ರತಿ ತಯಾರಿಸುವುದು, ಪಾಠ ಪರಿಷ್ಕರಣ, ಅನುಬಂಧಗಳ ತಯಾರಿಕೆ, ಅಚ್ಚಿನ ಕರಡು ತಿದ್ದುವುದು ಮುಂತಾದ ಗ್ರಂಥ

ಸಂಪಾದನೆಯ ಎಲ್ಲ ಕೆಲಸಗಳಲ್ಲೂ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಆತನ ಶ್ರೇಯಸ್ಸನ್ನು ಕೋರಿ ಆತ ನೀಡಿದ ನೆರವನ್ನು ಮನಃಪೂರ್ವಕವಾಗಿ ನೆನೆಯುತ್ತೇನೆ.

ಡಾ॥ ಸೂರ್ಯನಾಥ ಕಾಮತ್, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಡಾ॥ ಎಂ. ಚಿದಾನಂದಮೂರ್ತಿ, ಇವರ ಸಮಯೋಚಿತ ಸಹಾಯವೂ ಸ್ಮರಣೀಯ.

ತಿರುಪತಿ ತಿರುಮಲ ದೇವಸ್ಥಾನದ ಅಧಿಕಾರಿಗಳು ಶ್ರೀ ಕೃಷ್ಣದೇವರಾಯನ ಪ್ರತಿಮೆಯ ಛಾಯಾಚಿತ್ರದ ಪ್ರತಿಯನ್ನು ಕಳುಹಿಸಿಕೊಟ್ಟು ಸಹಕರಿಸಿದ್ದಾರೆ. ಇವರಿಗೂ ನಮ್ಮ ವಂದನೆಗಳು.


ನಾವು ಕೊಟ್ಟ ತೊಂದರೆಯನ್ನು ಸಹಿಸಿಕೊಂಡು ಶ್ರದ್ಧೆಯಿಂದ ಮುದ್ರಣ ಕಾರ್ಯ ಮಾಡಿಕೊಟ್ಟ ಸ್ವತಂತ್ರ ಮುದ್ರಣಾಲಯದ ಶ್ರೀ ಎನ್. ರಾಘವೇಂದ್ರ ಅವರಿಗೆ ಕೃತಜ್ಞತೆ ತಿಳಿಸಿದರೆ ಉಪಚಾರದ ಮಾತಾಗದು.

ಬೆಂಗಳೂರು
೨-೩-೧೯೮೩

ಎಂ. ವಿ. ಸೀತಾರಾಮಯ್ಯ



ಶ್ರೀ ಕೃಷ್ಣದೇವರಾಯ ಮತ್ತು ಆತನ ಮಡದಿಯರು
ಛಾಯಾಚಿತ್ರ : ಟಿ. ಟಿ. ಡಿ. ಕೃಪೆ



ಕೃಷ್ಣದೇವರಾಯನ ದಿನಚರಿಯ ಓಲೆಗರಿಯ ಲಿಪಿಯ ಮಾದರಿ

ಶ್ರೀ ಕೃಷ್ಣದೇವರಾಯನ ದಿನಚರಿ

ಶ್ರೀಮತೇ ರಾಮಾನುಜಾಯ ನಮಃ

॥ ಕೃಷ್ಣರಾಯರ ದಿನಚರಿಯ ಕೃತ್ಯಗಳ ವಿಸ್ತಾರ ॥

ಶ್ರೀ

ವಿದ್ಯಾನಗರದಲ್ಲಿ ಕೃಷ್ಣರಾಯರು ॥ ವಿದ್ಯಾನಗರದಲ್ಲಿ ವೀರನರಸಿಂಹರಾಯ[ರ]ವರು ॥ ಬ್ರಾಂಹೀ ಮುಹೂರ್ತದಲ್ಲಿ ಯೆದ್ದು । ಆದ್ಯರ ನಾಮಾವಳಿಗಳನ್ನು । [1]ಅಧ್ಯಾತ್ಮ[1] ಸಂಕೀರ್ತನೆಗಳನ್ನು । ಪಾಂಡವ ವನಿತೆಯುನ್ನು । ಗಜೇಂದ್ರ ಮೋಕ್ಷವನ್ನು । ಭರತ ಸಾವಿತ್ರಿಯನ್ನು । ಭಾಗವತವನ್ನು । ಮುಚುಕುಂದ ಸ್ತೋತ್ರ ಮೊದಲಾದುವನ್ನೂ । ಸಂಜಯ ನೀತಿ । ವಿದುರ ನೀತಿ । ಚಾಳುಕ್ಯ ನೀತಿ । ವೈರಾಗ್ಯ ಶತಕ । ನೀತಿ ಶತಕ । ವಧ್ಯನೀತಿ ಮೊದಲಾದಂಥಾ । ರಾಜನೀತಿಗಳನ್ನು ಕೇಳಿದಂಥಾವರಾಗಿ । ಕಪಿಲಧೇನುವನ್ನು ಸ್ಪರ್ಶಮಾಡಿ । ಜೋಡು ಬ್ರಾಂಹ್ಮರನ್ನು ನೋಡಿ ಕಳುಹಿಸಿ । ಮುಜ[ಖ?]ಮಜ್ಜನ ನಾಮತೀರ್ಥವಾಗಿ । ಕುಳಿತುಕೊಳ್ಳಲಾಗಿ । ನೂರೆಂಟು ತಿರುಪತಿಯಿಂದ ತೀರ್ಥ ಪ್ರಸಾದಂಗಳ್ ಯೆಪ್ಪತ್ತೇಳು ಶಿವಸ್ಥಾನಗಳಿಂದ ಗಂಧ ಪ್ರಸಾದಂಗಳ್ ಬರಲಾಗಿ । ಪ್ರತ್ಯುತ್ಥಾನವಂ ಮಾಡಿ ತೆಗೆದುಕೊಂಡು । ಶಿರಸಾವಹಿಸಿಕೊಂಡು । ಸ್ಥಳಾಂತರದಿಂದ ಬಂದಂಥಾ ಆಚಾರ್ಯ ಪುರುಷರನ್ನೂ ಆರಾಧ್ಯ ಪೀಠದವರುಗಳನ್ನೂ ಕುಳಿತುಕೊಳ್ಳ ಹೇಳಿ ನಿಯಾಮಕವ ಮಾಡಿ । ಅಪ್ಪಸ್ವಯಂ ವ್ಯಕ್ತರಾದಂಥಾ । ಶ್ರೀರಂಗ । ಶ್ರೀಮುಷ್ಣ । ವೆಂಕಟಾಚಲ । ತೋತಾದ್ರಿ ಮೊದಲಾದಂಥಾ ಸ್ಥಳಗಳಿಗೆ । ತುಂಬು ಪಡಿತರವನ್ನು ನಿತ್ಯೋತ್ಸವಗಳನ್ನು ಕಡಮೆಯಿಲ್ಲದ ಹಾಗೆ ನಡದು ಬಹದೆ ಯೆಂದು ಕೇಳಲಾಗಿ । ಆದಕ್ಕೆ । ಆಚಾರ್ಯ ಪುರುಷರು । ದೇವರವರ ಪ್ರತಾ[ಪ]ದಿಂದ ಆ ಸ್ಥಳಾಂತರದಲ್ಲಿ ಯಿದ್ದ । ಮುದ್ರೆಕರ್ತರು । ಕಡಮೆ ಬಾರದ ಹಾಗೆ ನಡೆಸುತ್ತಾ ಯಿದ್ದಾರಾಗಲಾಗಿ । ನೂರೆಂಟು ತಿರುಪತಿಗಳಲ್ಲು । ನಿತ್ಯೋತ್ಸವ [2]ನಡೆಯುತ್ತಾ[2] ಯಿದ್ಧಿತೂ ಯೆಂದು । ಆಚಾರ್ಯ ಪುರುಷರು । ಪೃಥಿವ್ಯಪ್ತೇಜೋವಾಯುರಾಕಾಶಾತ್ಮರಾದ । ಯೇಕಾಂಬರನಾಥ । ಜಂಬುಲಿಂಗೇಶ್ವರ । ಅರುಣಾಚಲೇಶ್ವರ । ಕಾಳಹಸ್ತೀಶ್ವರ । ಚಿದಂಬರ ಮೊದಲಾದ ಯೆಪ್ಪತ್ತೇಳು ಶಿವಸ್ಥಾನಂಗಳಲ್ಲಿಯೂ । ಹದಿನೆಂಟು ಶಕ್ತಿಸ್ಥಾನಂಗಳಲ್ಲಿಯೂ । ತುಂಬು ಪಡಿತರಗಳನ್ನೂ । ಉಂಟಾಗಿಯಿರುತ್ತಿದ್ದರು ಯೆಂದು । ಆರಾಧ್ಯರಾದಂಥಾವರು ತಿಳುಹಲಾಗಿ । ಧರ್ಮಾಸನದ ಧರ್ಮಾಧ್ಯಕ್ಷನ ಕರೆಕಳುಹಿಸಲಾಗಿ । ಆತನು ಬಂದು ಬಿನ್ನಹಂ ಮಾಡಿದ್ದು । ದೇವರ ಅಪ್ಪಣೆ ಪ್ರಕಾರ । ತಿಗುಳಾಣ್ಯದಲ್ಲಿ ಉಂಟಾದಂಥ ಅಗ್ರಹಾರಗಳು । ತೆಲುಂಗಾಣ್ಯ । ಮೊರಸನಾಡು । ಕರ್ನಾಟಕ । ಮೇಲುನಾಡು । ಘಟ್ಟದ ಸೀಮೆ ।

---

1 ಅಧ್ಯಾತ್ಮ 2 ನಡಯುತ್ತಾ

ಚೋಳದೇಶ | ಪಾಂಡ್ಯದೇಶ | ಮಲೆಯಾಳ ದೇಶ ಮೊದಲಾದ ದೇಶಗಳಲ್ಲಿ ಉಂಟಾದಂಥ | ಅಗ್ರಹಾರಗಳು | ಅವಧಿ ಆತಂಕವಿಲ್ಲದೆ | ನಿತ್ಯಕರ್ಮಾನುಷ್ಠಾನನಿರತರಾಗಿ | ಋಗ್ವೇದ ಯಜುರ್ವೇದ | ಸಾಮವೇದ ಅಥರ್ವಣವೇದಂಗಳನ್ನು ಮಾಡಿಕೊಂಡು | ಅತಿಥಿಸತ್ಕಾರ ಸಂತರ್ಪಣವ ಮಾಡಿಕೊಂಡು ಸುಖದಿಂದಿರುತ್ತಿದ್ದರು ಯೆಂದು ಬಿನ್ನಹಂ ಮಾಡಲಾಗಿ | ರಾಯರವರು ಕೇಳಿದಂಥವರಾಗಿ | ದಣಾಯಕರ ಕರೆಸಲಾಗಿ | ಆತನೂ ಬಂದು ಕಾಣಿಸಿಕೊಂಡು ಸಿಂಹಾಸನದ ರಾಜ್ಯದಲ್ಲಿ ಯಿರುವಂಥ | ಗಿರಿದುರ್ಗ | ಸ್ಥಳದುರ್ಗ | ಜಲದುರ್ಗ | ಯೀ ದುರ್ಗಗಳ ಕಾವಲು ಕಟ್ಟಳೆ | ಪಾರಿ ಬೀಗಮುದ್ರೆಗಳು ಸ್ವಾಮಿಯವರ ಪ್ರತಾಪದಿಂದ | ಅತಿಜತನವಾಗಿ ಯಿದ್ದವು | ಸಾಮಂತರಾಜಕಾರ್ಯಗಳು [1]ವಿಶೇಷ[1]ವಿಲ್ಲಾ ಯೆಂದು | ಬಿನ್ನಹಂ ಮಾಡಲಾಗಿ | ತಳವಾರ ಜಂಗಮಯ್ಯನು ಬಂದು | ರಾಯರವರಿಗೆ | ಅಡ್ಡಬಿದ್ದು | ದಣಾಯಕರ ಕೂಡೆ ವಿದ್ಯಾನಗರದಲ್ಲಿ | ಹೊರ ವಾಳ್ಯದಲ್ಲಿ ಕಾವಲವರು ಅತಿಜತನವಾಗಿ ಕಾದುಕೊಂಡು ಯಿದ್ದರು | ಪಟ್ಟಣದೊಳಗೆ ಯಿದ್ದಂಥ ಹದಿನೆಂಟುಬಣದವರು | ಅತ್ಯಂತ ಸಂತೋಷಹೃದಯರಾಗಿ | ಅತಿವಿಭವದಿಂದ | ನಿತ್ಯ ಕಲ್ಯಾಣ | ಪಚ್ಚೆದೋರಣ | ಉಂಟಾಗಿ ಯಿದ್ದರು ಯೆಂದು ಬಿನ್ನಹಂ ಮಾಡಲಾಗಿ | ದಣಾಯಕರವರು ಕೇ| ರಾಯರಿಗೆ ಬಿನ್ನಹಂ ಮಾಡಿದರು | ವಿಠಲ ವಿರೂಪಾಕ್ಷರ ಸ್ಥಳದವರು | ಸ್ವಾಮಿ ನಿತ್ಯೋತ್ಸವಕ್ಕೆ ಕಡಮೆಯಿಲ್ಲದೆ [2] ನಡೆವುತ್ತಾಯಿದ್ದಿದೆ [2] | ಯೆಲ್ಲ ವಿರೂಪಾಕ್ಷರಿಗೆ ಧ್ವಜಾರೋಹಣವಾಗಿ | ಯೆಂದು ರಥೋತ್ಸವ ಆ ರಥೋತ್ಸವಕ್ಕೆ ದೇವರವರು ಚಿತ್ತೈಸಿ ದೇವತಾದರ್ಶನವನ್ನು ಮಾಡಬೇಕು ಯೆಂದು ಬಿನ್ನಹಂ ಮಾಡಲಾಗಿ | ದಣಾಯಕರು | ಆ ರೀತಿಯಲ್ಲೇ ರಾಯರವರು ಬರುತ್ತಾ ಇದಾರು | ರಥಾರೂಢವಾದ ಸಂಗಡಲಿ ಬಂದು ಬಿನ್ನಹಂ ಮಾಡಿ ಯೆಂದು ಕಳುಹಿಸಿ | ರಾಯರವರು | ಅರಮನೆಯ | ಪೊಂಭತ್ತು ಸಂಪ್ರತಿಯವರನ್ನು ಕರೆಯಕಳುಹಿಸಲಾಗಿ | ಆ ಕರಣಿಕರು ಬಂದು ಹದಿನೆಂಟು ಮಂದಿ ದೊರೆಗಳ ಲೆಕ್ಕವನ್ನು ಕೇಳಿಸಿದ ತರುವಾಯದಲ್ಲಿ | ದಿಕ್ಕುಗಳಿಂದ ಬಂದ ಪೊಲಿಕಾಳಿಗಳ ತಂದಂಥವರು | ಬಾಗಿಲಲ್ಲಿ ಯಿದಾರೆ ಯೆಂದು ತಿಳುಹಲಾಗಿ | [3]ಕೇಳಿ ಚಿತ್ತೈಸಿದಂಥವರಾಗಿ[3] | ಪ್ರಧಾನಿಗಳನ್ನೂ | ದಳವಾ[ಯಿ]ಯನ್ನೂ ಕರಸಿಕೊಂಡು ಕೆಲವು ಹೊತ್ತು ಯೇಕಾಂತ [4] ಪೋಲಗ[4] ವಾಗಿ | ಆ ಮೇಲೆ ದೊಡ್ಡ [4] ಪೋಲಗ[4]ಕ್ಕೆ ಬಂದಂಥವರನ್ನು ಕರಸಿಕೊಂಡು ನಾಲ್ಕು ಘಳಿಗೆ ದೊಡ್ಡ ಪೋಲಗದಲ್ಲಿ ಯಿದ್ದು | ಅರಮನೆಯ ಅಳಿಯಂದಿರು | ಮಕ್ಕಳು | ದೊರೆಗಳು | ಮನ್ನೆಯವರು | ಪ್ರಭು ಪಾಳೆಗಾರರು | ಅರಮನೆ ನಾಯಕರು | ಆಪ್ತರು |

---

1 ವಿಸೆಷ 2 ನಡೆಯುತ್ತಾ ಯಿದ್ದಿತೆ 3 ಕೇಳಿಚಿತ್ತೈಸ್ತಂಥಾವರಾಗಿ 4 ಪಾಲಗ (ಹಸ್ತಪ್ರತಿಯಲ್ಲಿ ಉದ್ದಕ್ಕೂ ಇದೇ ರೂಪ ಇದ್ದು, ಪೋಲಗ ಎಂದು ತಿದ್ದಿದೆ.)

ನಿಯೋಗಿಗಳು । ಆಶ್ರಿತರು । ಕವೀಶ್ವರರು । ವಿದ್ವಾಂಸರು । ಪುರೋಹಿತರು । ಆಚಾರ್ಯಪುರುಷರು । ಜೀಯರವರು । ಯತೀಶ್ವರರು । ಜೋಯಿಸರು । ವೈದ್ಯರು । ರಾವುತರು । ಮಾವುತರು । ವಂದಿಗಳು । ಗಾಯಕರು । ಪಾಠಕರು । ಲಕ್ಷಣಜ್ಞರು । ಶಾಸ್ತ್ರಜ್ಞರು । ನಾಟಕಾಲಂಕಾರವ ಬಲ್ಲ ವಿದ್ಯಾಧಿಕರು । ಮೊದಲಾದ ಯೆಪ್ಪತ್ತೆರಡು ವಿನಿಯೋಗದವರು ಬಂದು ವೊಡ್ಡೋಲಗಂಗೊಡಲಾಗಿ । ಜ್ಯೋತಿಷರು । [1]ಲಾಕ್ಷಣಿಕ[1]ರನ್ನು । ದಣಾಯಕರ ಕೂಡೆ । ಆಗತ । ಅನಾಗತ । ಭೂತ ಭವಿಷ್ಯೋತ್ತರ ಪ್ರಸಂಗ ಬೆಂಬಳಿಯಿಂದ । ವಿದ್ಯಾನಗರವನ್ನು । ಪಟ್ಟಣವ ಕಟ್ಟು[ವು]ದಕ್ಕೆ ಮೊದಲು ವಿದ್ಯಾ[ರಣ್ಯ]ರು ಯೆಲ್ಲಿದ್ದರು । ಅವರು ಯಿಲ್ಲಿಗೆ ಬಂದ ಕಾರಣವೇನು । ಅವರು ಯಿಲ್ಲಿಗೆ ಬಂದು ಪಟ್ಟಣವನ್ನು ಪ್ರಾರಂ[2]ಭಿಸಿದ[2] ವಿಧ ಹೇಗೆ । ಪೂರ್ವೋತ್ತರಗಳಾಗಿ ಕೇಳಿದಂಥದಕ್ಕೆ । ಮುಳಂದ್ರ ಡಿಂಡಿನು । ಪುಂಖಾ[ಭಾ?]ವ ಸರಸ್ವತಿ । ವಿದ್ಯಾರಣ್ಯ ವಚನ ಪ್ರಕಾರವನ್ನು । ವಿಜ್ಞಾನೇಶ್ವರವೆಂಬ ವಚನ ಮೊದಲಾದಂಥವು । ಅನಿತನ್ನು ಆತನಿಗೆ ತಿಳಿದಿಹವಾದ ಕಾರಣ ಪುಂಖಾ(?)ವ ಸರಸ್ವತಿ ಬಿನ್ನಹಂ ಮಾಡಿದಂಥ ವಿವರ ।

ವಿದ್ಯಾರಣ್ಯರು ಉತ್ತ[ರ] ದೇಶದಲ್ಲಿ । ಕಾಶ್ಮೀರಖಂಡದಲ್ಲಿ । ಮಿಶ್ರರ ಬಳಿಯಲ್ಲಿ ಸಕಲಶಾಸ್ತ್ರಗಳನ್ನೂ ಕಲಿತು । ಚಿಂತಾಮಣಿ ಮಂತ್ರೋಪದೇಶದಿಂದ । ಲಕ್ಷ್ಮೀ ಪ್ರಾರ್ಥನೆಯಂ ಮಾಡಲಾಗಿ । ಶ್ರೀ ದೇವಿ ಪ್ರತ್ಯಕ್ಷವಾಗಿ ಬೇಡಿದ ವರವನ್ನು ಕೇಳಿಕೊ ಯೆಂದು ಅಪ್ಪಣೆಯನ್ನು ಕೊಡಲಾಗಿ । ವಿದ್ಯಾರಣ್ಯರು ತನ್ನ ಹೆಸರಿನಲ್ಲಿ ವೊಂದು ಪಟ್ಟಣವ ಕಟ್ಟಿಸಬೇಕು ಯೆಂಬುದಾಗಿಯಿದ್ದಿತು । ಅಲ್ಲಿ ನೀವು ಯೆಷ್ಟು ದಿವಸ ಯಿದ್ದೀರಿ ಅಷ್ಟು ದಿವಸ[3]ವೂನೂ[3] । ಆ ಪಟ್ಟಣದಲ್ಲಿ ಯಿರು[ವ]ಂಥ ಪ್ರಜೆಗಳೆಲ್ಲರೂನು । ಸುಖದಲ್ಲಿ ಯಿರುವರು । ಆದ್ದರಿಂದ ತನ್ನ ಹೆಸರು । ಕೀರ್ತಿಯು । ಶಾಶ್ವತವಾಗಿ ನಿಲ್ಲು[ವು]ದು । ಭೂಲೋಕದಲ್ಲಿ ಯಾರ ಹೆಸರು ಯೆಷ್ಟು ದಿವಸವಿರುತ್ತಾ ಯಿದ್ದಿತು । ಅಷ್ಟು ದಿವಸವೂ ಸ್ವರ್ಗಾದಿ ಭೋಗಂಗಳನ್ನು ಅನುಭವಿಸುವರಾದ ಕಾರಣ । ನಾವು ಕಟ್ಟಿಸಿದ ಪಟ್ಟಣದಲ್ಲಿ । ಶಾಶ್ವತವಾಗಿ ಯಿರಬೇಕು ಯೆಂದು । ಪ್ರಾರ್ಥನೆಯಂ ಮಾಡಲಾಗಿ । ಅಮ್ಮನವರು ಹಾಗೆ[4]ಮಾಡಿಯಿರು[4] ಎಂದು । ಅನುಗ್ರಹಿಸಿ । ನೀನು ಹಿಂದೆ ನೋಡದೆ ಹೋಗು । ನಿನ್ನ ಸಂಗಡಲೇ ಬರುತ್ತಾಯಿದ್ದೇವೆಯೆಂದು ಅಪ್ಪಣೆ ಕೊಟ್ಟು ಕಳುಹಿಸಿ। ಕಾಶ್ಮೀರ ದೇಶದಿಂದ । ಉಜ್ಜ[ಯಿ]ನಿಗೆ ಬಂದು ಕೊಲ್ಲಾಪುರದಿಂದ । ಕಿಷ್ಕಿಂಧೆಗೆ ಬರಲಾಗಿ । ವಿದ್ಯಾರಣ್ಯರು । ತುಂಗಭದ್ರಾ ಸ್ನಾನವ ಮಾಡಿ ಹಂಪೆಯ ಹೊಳೆಯ ತಡಿಗೆ ಬಂದು । ವಿರೂಪಾಕ್ಷಸ್ವಾಮಿಯನ್ನು ಸೇವಿಸಿ ಮತಂಗ ಪರ್ವತವಂ ಹತ್ತಿ । ಪಟ್ಟಣವ ಕಟ್ಟುವುದಕ್ಕೆ ಚೌಕವಾದ ಭೂಮಿಯಂ ನೋಡಲಾಗಿ । ಸಮೀಪದಲ್ಲಿ ಕುರಿ ಹಿಂಡಿನಲ್ಲಿ

---

1 ಲಾಖನಿಕ 2 ಬಿಸ್ತ 3 ಉಂನು 4 ಮಾಥಿರೂ

ಯಿದ್ದಂಥ ಶುನಕವನ್ನು । ಆ ಹೊಲದಲ್ಲಿ ಯಿದ್ದಂಥ ಮೊಲವು ಬೆನ್ನಹತ್ತಿ [1]ತರು[1]ಬ
ಲಾಗಿ । ವಿದ್ಯಾರಣ್ಯರು ನೋಡಿ । ಶುನಕವು ಮೊಲ[ವ]ನ್ನು [2]ತರು[2]ಬಿದ್ದು ಉಂಟು।
ಮೊಲವು ಶುನಕವ ತರುಬಿದ್ದು ಯಿಲ್ಲಿಯೂ ಕಾಣೆವು । ಈ ಸ್ಥಳಮಹಿಮೆ ಯೇನು
ಯೆಂದು । ಅಲ್ಲಿಯಿದ್ದಂಥ ಹಿರಿಯ ಕಿರಿಯರನ್ನು ಕೇಳಲಾಗಿ । ಯಿದು ಮತಂಗ ಮಹಾ
ಋಷೀಶ್ವರನ ಆಶ್ರಮವು ! ಕಿಷ್ಕಿಂಧದಲ್ಲಿ ವಾಲಿ ಸುಗ್ರೀವರು ಯಿದ್ದರು । ಅವರು
ತಮ್ಮೊಳಗೆ ತಾವು । ಹೋರಿ ಆಡುವರು । ವಾಲಿ ಬಲವಂತನಾದ ಕಾರಣ ಸುಗ್ರೀವನು
ಯೆದುರಿಸಲಾರದೆ । ವೋಡಿಹೋಗಿ । ವೊಂದು ದಿನ ವಾಲಿಗೆ ಮತಂಗ ಋಷೀಶ್ವರನು ।
ತಾನು ಯಿದ್ದ ಬೆಟ್ಟಕ್ಕೆ ಹತ್ತದ ಹಾಗೆ ಶಾಪವ ಕೊಟ್ಟನು ಯೆಂಬ ವಾರ್ತೆಯ ಹಿರಿ
ಯರ ಕೈಯಿಂದ ಕೇಳಿ । ಆದಾರಭ್ಯವೂ । ಆಣಾಮೊನೆಯಿಂದ ಹೊಡೆದರೆ । ಮತಂಗ
ಪರ್ವತಕ್ಕೆ ಬಾರನು । ಆ ಸ್ಥಳಕ್ಕೆ ಯೆಂಥ ಬಲವಂತ ಬಂದರೂ ವೋಡಿ ಹೋಪನು ।
ಯೆದುರಿಸಿ ನಿಲಲರಿಯನು । ಅದಾರಭ್ಯವೂ ಯೀ ಸ್ಥಳದಲ್ಲಿ ಯಿದ್ದಂಥ ಜಂತುಗಳಾದರು ।
ಮನುಷ್ಯರಾದರು । ಶತ್ರುಗಳಿಗೆ ಅಸಾಧ್ಯರು ಯೆಂದು ಕೇಳಿದ[ನ]ರಾಗಲಾಗಿ । ಆಶ್ಚರ್ಯ
ಪಟ್ಟು ! ಮುನೀಶ್ವರರ ಮಹಿಮೆಯುಂಟಾದ ಸ್ಥಳ ಯೆಂದು ಮನಸ್ಸಿನಲ್ಲಿ ಬಹಳವಾಗಿ
ಯೆಣಿಕೆ ಮಾಡಿ । ಯೀ ದಿಕ್ಕಿನಲ್ಲಿ ಪಟ್ಟಣವ ಮಾಡಬೇಕು ಯೆಂದು । ಅಶ್ವಪತಿ ಗಜ
ಪತಿ ನರಪತಿಗಳೊಳಗೆ । ನರಪತಿ ಘನವಾದಂಥವನಾದ ಕಾರಣ ನರಪತಿಯ ರಾಜ್ಯದಲ್ಲಿ ।
ನರಾಕಾರವಾಗಿ । ಪುರವಮಾಡಿಸಿ । ಯೆಂದಿಗೂ ಚಲನವಿಲ್ಲದ ಹಾಗೆ [3]ವೊಳ್ಳೆಯ[3]
ಮುಹೂರ್ತದಲ್ಲಿ ಶಂಕುಸ್ಥಾಪನೆಯನ್ನು ಮಾಡಿ । ವಾಸ್ತುಪುರುಷನನ್ನು ನಿಲ್ಲಿಸಿ ಅಪರ
ಣರ್ವ(?) ಯೇರ್ಪಡಿಸಿ । ಅರಮನೆ ಗುಡಿ । ಕೋಟಿ ಕೊತ್ತಳ । ನವದ್ವಾರಂಗಳನ್ನು
ಯೇರ್ಪಡಿಸಿ । ವಾಸ್ತುವ ಶಿದ್ದಿ । ಬೀದಿಗಳ ಯೇರ್ಪಡಿಸಬೇಕು ಯೆಂದು । ತನ್ನ
ಸಂಗಡ ಕೂಡಿ ವಿದ್ಯಾಭ್ಯಾಸವ ಮಾಡಿದ ಶಿಷ್ಯನನ್ನು ಕೂಡಿಕೊಂಡು ಶಾಲಿವಾಹನ ಶಕ
ವರ್ಷಂಗಳು ೧೨೫೮ ರ ಮೇಲೆ ನಂದ ಪ್ರಭವ ಸಂವತ್ಸರದ ಚೈತ್ರ ಮಾಸದಲ್ಲಿ ಶುಭ
ನಕ್ಷತ್ರ ಶುಭ ತಿಥಿಯಲ್ಲಿ ಮುಹೂರ್ತವ ಮಾಡಿ । ಕೃಷ್ಣಪಕ್ಷದ[4]ಲಮಾವಾಸ್ಯದ[4]
ರಾತ್ರಿಯಲ್ಲಿ । ನಿಶಿಸಮಯದಲ್ಲಿ ಶಂಕುಸ್ಥಾಪನೆಯನ್ನು ಮಾಡುವುದಕ್ಕೆ । ಶಾಸ್ತ್ರಜ್ಞರು ।
ಮಂತ್ರವಾದಿಗಳು । ಜೋತಿಷರು ಕೂಡಿಕೊಂಡು । ಉತ್ತರ ದಕ್ಷಿಣಗಳ ಯೇರ್ಪಡಿಸಿ ।
ತ್ರಿಶಂಕು ಧ್ರುವಗಳನ್ನು ನೋಡಿ ತ್ರಿಪುರುಷ[5]ರ[5] ! ಶಂಕುಸ್ಥಾಪನೆಯ ಮಾಡಿ ।
ಮೂಡಲು ಪಡುವಲಿಗೂ । ತ್ರಿಪುರುಷ[6]ರ[6] । ಶಂಕುಸ್ಥಾಪಿಸಿ । ವಾಸ್ತುಪುರುಷನನ್ನು ।
ಚಿನ್ನದಲ್ಲಿ ಮಾಡಿ । ಜಾಪಕಂಬದಲ್ಲಿ ಪ್ರತಿಷ್ಠೆಯ ಮಾಡಿ ಆ ಕಂಬವನ್ನು [7]ಶಿರ[7]ಸ್ಥಳ
ದಲ್ಲಿ ಜಲಾಂತರವಾಗಿ ಅಗೆದು ವಾಸ್ತುಪುರುಷನನ್ನು ಸ್ಥಾಪನೆಯ ಮಾಡುವಾಗ ।
ಮೂರು ಸಾವಿರದ ನಾನ್ನೂರು ವರುಷ ಪರ್ಯಂತರವೂ ಲಯವಿಲ್ಲದ ಹಾಗೆ । ಒಳ್ಳೆಯ

1, 2 ತರ 3 ವಳ್ಳಿಯ 4 ಅಮಾವಾದಸ 5, 6 ಸಿ 7 ಸಿರ

ಮುಹೂರ್ತದಲ್ಲಿ ಪ್ರತಿಷ್ಠೆಯಂ ಮಾಡಿದರು | ಆ ವಾಸ್ತುಪುರುಷನನ್ನೂ ವಿದ್ಯಾರಣ್ಯರ ಶಿಷ್ಯರು ನೋಡಿ | ತಮ್ಮ ನಿಪುಣತೆಯಿಂದ ಚಲನವ ಮಾಡಿ ಸ್ಥಾಪಿಸಿದರಾದ ಕಾರಣ ವಿದ್ಯಾರಣ್ಯರು ನೋಡಿ ಬಹು ವಿಚಾರಪಟ್ಟು ವಾಸ್ತುಪುರುಷನನ್ನು ಚಲಿನದಂಥ ದೋಷವು ಮೂರು ಸಾವಿರದ ನಾನ್ನೂರು ವರುಷ[ದಲ್ಲಿ] | ಮುನ್ನೂರ ಅರುವತ್ತು ವರುಷ [1]ನಿಂತೀತು[1] ಯೆಂದು | ವಾಸ್ತುಪುರುಷನನ್ನು ನಿಕ್ಷೇಪಿಸಿದರು | ಆದಾರಭ್ಯವೂ ಯೀವರೆಗೆ ಯಿಪ್ಪತ್ತೈದು ಸಟ್ಟಕ್ಕೆ ಮುನ್ನೂರು ವರುಷ ಆಯಿತು | ಯೀ ಪ್ರಭವಾದಿಯಾಗಿ ಅರುವತ್ತು ವರುಷ ಸಿಂಹಾಸನದ ಪಟ್ಟವೂ ಯೆಂದು ಬಿನ್ನಹಂ ಮಾಡಿ | ಈ ಪ್ರಭವಾದಿಯಲ್ಲಿ ಯುವರಾಯ ಪಟ್ಟ[2]ವನ್ನು[2] ಕೃಷ್ಣರಾಯರಿಗೆ ಮಾಡಬೇಕು ಯೆಂದು ಡಣಾಯಕರ ಕೂಡೆ ಯೆಂದಂ[ದಂ]ಥಾದ್ದಕ್ಕೆ ವೀರನೃಸಿಂಹರಾಯರವರು | ತಾವು ಹಿರಿಯರಾದೆವು | ತಮ್ಮೋಪಾದಿಯಲ್ಲಿ ರಾಜ್ಯಪರಿಪಾಲನೆಯ ಮಾಡೋದಕ್ಕೆ ಕೃಷ್ಣರಾಯರವರಿಗೆ ಪಟ್ಟಾಭಿಷೇಕವ ಮಾಡಿ ಅಧಿಷ್ಠಾನ ಕರ್ತರಮಾಡು ಯೆಂದು ಪ್ರೊಳ್ಳೆಯ ವೇಳೆಯಲ್ಲಿ ಮುದ್ರೆ ಉಂಗುರವನ್ನು ಕೊಟ್ಟರಾದ ಕಾರಣ | ಡಣಾಯಕರು | ಅಯ್ಯಪ್ಪರಸು | ಕೊಂಡಮರಸು | ಅಪ್ಪಾಜಿ | ಲಕ್ಕಣ ಡಣಾಯಕರು | ಯೆಲ್ಲಣ ಡಣಾಯಕರು | ಪ್ರಧಾನಿ ತಿ[ಮ್ಮ]ಪ್ಪರಸರು | ಸಾಳುವ ನಾಯಕರು | ಆಪ್ಪರ ಪಿಳ್ಳೆಯು | ಕುಪ್ಪರಪಿಳ್ಳೆಯು | ಮನ್ನಾರಪಿಳ್ಳೆಯು | ರಾಯಸದ ವಿಠ್ಠಮರಸು | ತ್ರಿಯಂಬಕಯ್ಯನು | ಅವಸರದ ವೆಂಕಪ್ಪಯ್ಯನು | ಲಕ್ಷ್ಮೀಪತಿಯು ! ರಾಚಮರಸರು | ಬಯಕಾರು | ಬಯ್ಯಪ್ಪನಾಯಕರು | ಆರುವಿಟಿ ಬುಕ್ಕರಾಯರು | ಶ್ರೀಪತಿಯವರು | ಬೂದಹಳ್ಳಿಯವರು | ಚಿಪ್ಪಗಿರಿಯವರು | ಅಲುಕುಗ್ರಾಮದವರು | ನಂದ್ಯಾಲಹಾವಳಿಯವರು | ತೊರೆಗಲ್ಲವರು | ರಾಚೂರ ತಿಮ್ಮರಾಜನು | ತುಳುವ ದೊರೆಗಳು | ಮೊದಲಾದಂಥವರೆಲ್ಲರನ್ನು | ಅರಮನೆ ವಿದ್ವಾಂಸರು | ಜ್ಯೋತಿಷರು | ಯತೀಶ್ವರರು | ಹಿರಿಯ ಕಿರಿಯರೆಲ್ಲರನ್ನು | ಶಾಸ್ತ್ರಪ್ರಕಾರದಲ್ಲಿ ಕೃಷ್ಣರಾಯರವರಿಂದ | ಷೋಡಶ ಮಹಾದಾನಗಳನ್ನು ಮಾಡಿಸಿ ರಜತ ತುಲಾ | ಮೌಕ್ತಿಕ ತುಲಾ | ರತ್ನ ತುಲಾ | ಮೇರು ಕೋಟಿ ದಾನ | ಸಹಸ್ರ ಕುಟುಂಬ ಪ್ರತಿಷ್ಠೆಗಳು | ಮೊದಲಾದಂಥವನ್ನು ಮಾಡಿಸಿ | ನಾಲ್ಕು ಸಮುದ್ರೋದಕಗಳನ್ನು | ಗಂಗಾ ಯಮುನಾ ಸರಸ್ವತಿ | ನರ್ಮದಾ | ಗೋದಾವರಿ | ಸಿಂಧು | ಕಾವೇರಿ | ತಾಮ್ರಪರ್ಣಿ ಮುಂತಾಗಿ ಯಿದ್ದ ಪುಣ್ಯಜಲಗಳನ್ನು ತರಿಸಿ | ಅಭಿಷೇಕವ ಮಾಡಿಸಿ ಆ ಹಿಂದೆ ರತ್ನಾಭಿಷೇಕಗಳನ್ನು ಮಾಡಿಸಿ | ಪೀತಾಂಬರಧರರಾಗಿ | ಚಂದನ | ಅಗರು | ಕಸ್ತೂರಿ | ಕುಂಕುಮಧರರಾಗಿ ನವರತ್ನಾಭರಣಾಲಂಕೃತರಾಗಿ ವಿಠ್ಠಲ ವಿರೂಪಾಕ್ಷರ ದರ್ಶನವ ಮಾಡಿಸಿ | ಹಿರಿಯರಿಗೆ ನಮಸ್ಕಾರವ ಮಾಡಿಸಿ | ಕನಕಪಟ್ಟವನ್ನು ನೊಸಲಿಗೆ ಕಟ್ಟಿ [3]ಬೊಕ್ಕಸದ[3]

1 ನಿಂಥಿತೂ 2 ವೂ 3 ಭೋಕ್ತಸ್ತ

ಮನೆಯಲ್ಲಿ ನವರತ್ನ ರಾಶಿಗಳನ್ನು ಮುಟ್ಟಿಸಿ | ಆಯುಧಸ್ಪರ್ಶಗಳನ್ನು ಮಾಡಿಸಿದ ರಾಗಲಾಗಿ | ಸಿಂಹಾಸನದ ಮೇಲೆ ಚಿತ್ರೈಸಿ ಸಕಲವಾದಂಥವರು ವೋಲಗವನ್ನು ಕೊಟ್ಟು | ವೀರನೃಸಿಂಹರಾಯರ ತೋರಿಸಿ | ಅಪ್ಪಾಜಿ ಮೊದಲಾದವರೆಲ್ಲರನ್ನೂ ಮನೆಗೆ ಕಳುಹಿಸಿ | ಆಳಿಯಂದಿರು | ಮಕ್ಕಳು ಬಂಧು ಪಂಜಿನವರುಗಳನ್ನು ಪಂಜ್ತ್ರಯಲ್ಲಿಟ್ಟುಕೊಂಡು ಊಟವಮಾಡಿ | ಶತಪಥವ ನಡೆದು | ಅಪ್ಪಾಜಿ ಡಣಾಯಕರು ಮುಂತಾಗಿ ಯಿದ್ದವರ ಕರೆಕಳುಹಿಸಿ | ಅವರ ಕೂಡೆ ಕೃಷ್ಣರಾಯರು | ಬುದ್ಧಿಗಲಿಸಿದ ವರಾ[ಗ] | ವೀರ ನೃಸಿಂಹರಾಯರವರು | ಸಿಂಹಾಸನ ಪರಭಾರ ವಹಿಸಿ ನಡೆಸಲಾಗಿ | ಯೀ ವರೆಗೂ | ಅಚ್ಯುತರಾಯರು | ಚಂದ್ರಮೌಳಿ[1]ಸುಮುಖದಲ್ಲಿ[1] ಕುಳಿತುಕೊಂಡು ಸುಖದಲ್ಲಿಯಿದ್ದೆವು | ಯೀಗ ನಮ್ಮ ಮೇಲೆ ಸಿಂಹಾಸನದ ಪರಭಾರವನ್ನು ಯಿರಿಸಿದ ಕಾರಣ | ತಮಗೆ ಬುದ್ಧಿಮತಿಗಳೇನು | ಸಿಂಹಾಸನಸ್ಥರು ನಡೆಸುವಂಥ ಕ್ರಮವೇನು | ಪ್ರಜೆಗಳನಾವ ಮೇರೆಯಲ್ಲಿ ನಡೆಸಬೇಕು | ಬಂಧು ಪರಿಜನಗಳನ್ನೂ ಕೂಡಿಕೊಂಡು ಬರುವ ಫ[ಭ?]ಣಿತೆ ಯೆಂತು | ಧನವ ಆರ್ಜಿಸುವ ಕ್ರಮ ಯಾವ ಪರಿ | [2]ವ್ರಯ[2]ವ ಮಾಡುವ ಪರಿಯೂ | ಶತ್ರುಗಳ ಜಯಿಸುವುದೂ ಹೇಗೆ | ಆತ್ಮ ರಕ್ಷಣೆಗೆ ಯಾರು ಅರ್ಹರು | ಆಪ್ತರನ್ನೂ ಅನಾಪ್ತರನ್ನೂ ನಡೆಸುವ ರೀತಿಯೆಂತು | ಆಶ್ರಿತರಿಗೂ | [3]ವೋಲಗಿಸ್ತ್ರರವರಿಗೂ[3] ನಡೆಸುವ ಮರ್ಯಾದೆ ಯಾವುದು | ರಾಜದೋಷಗಳು ಯಾವುವು | ಅರ್ಥವ್ಯಯ | ಅನರ್ಥವ್ಯಯ | ಉಪಾಯ ಚಿಂತೆಗಳನ್ನೂ | ತಿಳಿಸುವ ಕ್ರಮವೆಂತು | ಶಾಶ್ವತ ಐಶ್ವರ್ಯ ಉಂಟಾಗುವುದು ಹೇಗೆ | ರಾಜನೀತಿಗಳು ಯಾವುವು | ಸಕಲವನ್ನೂ ನೀವು ಬಲ್ಲಿರಲ್ಲ | ತಿಳಿಯಹೇಳಿ ರೆಂದು | ಅಪ್ಪಾಜಿ ಮೊದಲಾದಂಥ ಹಿರಿಯರನ್ನು ಕೃಷ್ಣರಾಯರವರು ಬುದ್ಧಿಯ ಕೇಳಲಾಗಿ | ಅಪ್ಪಾಜಿಯು | ಅಯ್ಯಪ್ಪರಸರು | ಬಾಚಮರಸರು | ಬಿನ್ನಹ ಮಾಡಿದರು | ಸ್ವಾಮಿಯವರು ಅಪ್ಪಣೆ । ಕೊಟ್ಟದ್ದು ಕಾರ್ಯವಹುದು ಯಲ್ಲಾ | ಸಕಲ [4][ವಿದ್ಯಾ ?][4] ವಿಚಕ್ಷಣೆಗಳು | ಸಕಲ ಕಾರ್ಯ ನಿರ್ವಾಹಕಗಳು ಯೆಲ್ಲವಕನ್ಯ[5] [ಮಂತ್ರಿಗಳ] ಕೂಡಣ ಆಲೋಚನೆ ಸಾಮ್ರಾಜ್ಯಸಾಧಕವು ಯೆಂದು | ರಾಯರವರಿಗೆ ರಾಜ್ಯಪರಿಪಾಲನೆಯ ಮಾಡುವ ವಿಧವನ್ನೂ | ರಾಜನೀತಿ ಮೊದಲಾದವನ್ನೂ | ಅಪ್ಪಾಜಿ ತಿಳುಹಿದ್ದು | ಸಿಂಹಾಸನಾಧಿಪತಿ ಯೆಂಬುದು | ಸಕಲ ನರರೊಳಗೆ ನರಾಧಿಪನು | ವಿಷ್ಣುವಿನ ಅಂಶ | ಎಂಬುದು ಭಗವದ್ವಾಕ್ಯ | ನೀತಿಪದ್ಯ * |

ಬಾಲಕನಾಗಿ | ನವರತ್ನಾಭರಣನಾಗಿ | ಪುಷ್ಪ ಪರಿಮಳಯುತನಾಗಿ | ನರನಾಯಕರಿಂದ ಪರಿವೃತನಾಗಿ | ಪೊಪ್ಪುವಂಥವನು | ಸಭಾಪತಿಯೆಂದುಕೊಳ್ಳಪಡು

---

1 ಸುಖದಲ್ಲಿ 2 ಕ್ರಯ 3 ವಾಲಗಿಸ್ತವರಿಗೂ 4 × × 5 × × × ×

* ನೀತಿ ಪದ್ಯ ಉದ್ಧೃತವಾಗಿಲ್ಲ: ಮುಂದೆ ಅದರ ತಾತ್ಪರ್ಯವನ್ನು ಕೊಟ್ಟಿರುವಂತಿದೆ.

ವ್ರದಾದ ಕಾರಣ | ಹೀಗೆ ಸಿಂಹಾಸನಸ್ಥನು | ಸ್ವಾಮ್ಯ [ಅಮಾತ್ಯ] ಸುಹೃತ್ತು | ಕೋಶ | ರಾಷ್ಟ್ರ | ದುರ್ಗ | ಬಲ | ಯೆಂಬ ರಾಜ ಸಪ್ತಾಂಗಗಳ ತಿಳಿಯಬೇಕು | ವಾಹನ | ರಾಜ್ಯ | ಸತಿ | ವಸ್ತ್ರ | ಆಭರಣ | ಕರ್ಪೂರ | ತಾಂಬೂಲ | ವೆಂಬ ಉಚಿತ ಸಪ್ತಾಂಗಗಳ ತಿಳಿಯಬೇಕು | ಸಾಮ | ಭೇದ | ದಾನ | ದಂಡ | ಮಾಯೋಪಾಯ | ಉಪೇಕ್ಷೆ | ಮಹೇಂದ್ರಜಾಲ | ವೆಂಬ ಸಪ್ತೋಪಾಯಗಳ ತಿಳಿದು | ದೊರೆಗಳು ನಡೆಯಬೇಕು | [ಸಪ್ತವ್ಯಸನ] ಅದು ಯಾವುದು: | ಯೆಂದರೆ | ಸ್ತ್ರೀವ್ಯಸನ | ದ್ಯೂತ | [ಸುರಾ] ಪಾನ | [ನೀಚರ] ಸಂಗಡ [1]ಹೋಹೋಣವು[1] ವಾಗ್ದೋಷ | ಬಯ್ವುದು | ಅಕಾರಣವಾಗಿ ದಂಡಿಸುವುದು | ಉಚಿತವಲ್ಲದುದಕ್ಕೆ ಅನುಚಿತವಾಗಿ ವೆಚ್ಚಮಾಡುವುದು | ಯೀ ಯೇಳು ವ್ಯಸನಗಳನ್ನೂ ಬಿಟ್ಟುಬಿಡಬೇಕು | ಸುತ | ನಿಕ್ಷೇಪ | ಶಿವಾಲಯ | ವನ | ತಟಾಕ | ಕೃತಿ | ಬ್ರಾಹ್ಮಣ ಪ್ರತಿಷ್ಠೆ | ಯೆಂಬ ಸಪ್ತ ಸಂತಾನಗಳ ಪಡೆದು | ಕವಿ | ವಿದ್ವಾಂಸ | ಪೌರಾಣಿಕ | ಯತಿಪೋಷಕ | ಭಟ್ಟ | ಪರಿಪೋಷಕ | ಗಾಯಕರೆಂಬ | ಸಭಾ ಸಪ್ತಾಂಗ ಪರಿವೃತನಾಗಿ | ಲವಣ | ಯಿಕ್ಷು | ಸುರೆ | ಸರ್ಪಿ | ದಧಿ | ಕ್ಷೀರ | ಶುದ್ಧೋದಕಗಳೆಂಬ ಸಪ್ತಸಾಗರ ವೇಷ್ಟಿತ ಭೂಚಕ್ರವನ್ನು | ನಿರ್ವಾಹಕವಾದ ಭುಜಲತೆಯಿಂದ ಧರಿಸಿ | ಜಂಬು | ಪ್ಲಕ್ಷ | ಶಾಲ್ಮಲಿ | ಕುಶ | ಕ್ರೌಂಚ | ಶಾಖಾ | ಪುಷ್ಕರ ದ್ವೀಪಗಳೆಂಬ ಸಪ್ತದ್ವೀಪಗಳಲ್ಲಿ | ನಿಬೆಚ್ಚ(?) | ಕೀರ್ತಿಕಾಂತಿಗಳು ಪ್ರಕಾಶವಾಗುವ ಹಾಗೆ ಮಾಡಿ | ಹೇಮಂತ | ನಿಷಧ | ವಿಂಧ್ಯಾ | ಮಾಲ್ಯಂವತ | ಪಾರಿಯಾತ್ರಕ | ಗಂಧಮಾಧನ | ಹೇಮಕೂಟ | ಗಳೆಂಬ ಸಪ್ತ ಕುಲಪರ್ವತಗಳ ಪ್ರಭಾವಗಳನ್ನು ತಿಳಿದು | ಕಶ್ಯಪ | ಅತ್ರಿ | ಭರದ್ವಾಜ | ವಿಶ್ವಾಮಿತ್ರ | ಗೌತಮ | ಜಮದಗ್ನಿ | ವಸಿಷ್ಠರೆಂಬ ಸಪ್ತಮಹಾ ಮುನೀಶ್ವರರ ಸಾಮರ್ಥ್ಯವನ್ನು ಕೇಳುತ್ತ | ಶಿರೋವೇಷ್ಟನ | ಕರ್ಣಭೂಷಣ | ಗ್ರೈವೇಯಕ | ಅಂಬರ | ವಾಹನ | ಗಂಧ | ತಾಂಬೂಲಗಳೆಂಬ ತ್ಯಾಗ [ಭೋಗ?] ಸಪ್ತಾಂಗವಂ ತಿಳಿದು | ಮತ್ತು | ನಾಸ್ತಿಕ್ಯ | ಅನೃತ | ಪ್ರಸಾರ | ಆಲಸ್ಯ | ಅನರ್ಥ [ರ್ಥ?] ಕ | ವ್ಯಯ: | ಕ್ರೋಧ | ದೀರ್ಘ | ಚಿಂತೆ | ದೀರ್ಘಸೂತ್ರತೆಯು | ಅರಿಕೆ ಉಳ್ಳವರ [ಲ್ಲಿ] ತಿಳಿವುದು | ವಿಷಯಗಳಲ್ಲಿ ತಗುಲುವುದು | ಅರ್ಥಗಳಲ್ಲಿ ಅನರ್ಥ ಚಿಂತೆ | ನಿಶ್ಚಿತ ಕಾರ್ಯಗಳನ್ನು ಮಾಡದಿಹುದು | ಮಂತ್ರಗಳನ್ನು ರಕ್ಷಿಸದೆಯಿಹುದು | ಶುಭಂಗಳ ಪ್ರಯೋಗಿಸದೆ ಯಿಹುದು | ಯೆಂದು ವೊಪ್ಪುವ ಹದಿನಾಲ್ಕು ರಾಜದೋಷಗಳನ್ನು ಪರಿಹರಿಸಿ | ಹರಿಶ್ಚಂದ್ರ | ನಳ | ಪುರುಕುತ್ಸ | ಪುರೂರವ | ಸಗರ | ಕಾರ್ತವೀರ್ಯ | ಎಂಬ ಆರುಮಂದಿ ಚಕ್ರವರ್ತಿಗಳ ಕ್ರಮ ತಿಳಿದು | ಅಂಬರೀಷ | ಶಶಿಬಿಂದು | ಅನಂಗ | ಪೃಥು | ರಘು | ಮರುತ್ತು | ಭರತ | ಸುಹೃತು | ರಾಮ | ದಿಲೀಪ | ಶಿಬಿ | ರಂತಿದೇವ | ಯಯಾತಿ | ಮಾಂಧಾತ | ಭಗೀರಥ | ರೆಂಬ

[1] ಹೋಹಣವು

ಮಹಾರಾಜ ಕಥಾಶ್ರವಣನಾಗಿ| ದುಷ್ಟಜನ ನಿಗ್ರಹವು| ಶಿಷ್ಟಜನ ಪರಿಪಾಲ
ನೆಯು| ಮಾಡಬೇಕು| ಯಿವು ಮೊದಲಾದ ರಾಜನೀತಿಗಳು ಅನೇಕ ಉಂಟು|
ಅದರಲ್ಲಿ ತಿಳಿದ ಮಾತ್ರವು| ನಾವು ಕೇಳಿದ ಮಾತ್ರವು| ಬಿನ್ನಹವಂ ಮಾಡಿದೆವು|
ಯೆಂದು| ಅಪ್ಪಾಜಿ| ಅಯ್ಯಪ್ಪರಸು| ಕೊಂಡಮರಸರು| ಮೊದಲಾದವರು
ಬಿನ್ನಹಂ ಮಾಡಿದುದಕ್ಕೆ ಕೃಷ್ಣರಾಯರವರು| ಅವರ ಕೂಡೆ| ಭೂತಭವಿಷ್ಯದ್ವರ್ತ
ಮಾನ ಕಾಲಜ್ಞರು| ದೂರದೃಷ್ಟಿ ಕಾರ್ಯಗಳನ್ನು| ಆಗತ| ಅನಾಗತಗಳನ್ನು
ಬಲ್ಲವರಾದ ಕಾರಣ| ಅನಿತನ್ನು| ಕರತಳಾಮಳಕವಾಗಿ ಹೇಳಿದರಾದ ಕಾರಣ|
ತುಂಬಿಯು ವಾಯು ವಶದಿಂದ| ಪರಿಮಳ ತಿಳಿದಹಾಗೆ| ಭ್ರಮರಕೀಟ ನ್ಯಾಯದ
ಹಾಗೂ| ಎಲ್ಲವೂ ಮನಸ್ಸಿಗೆ ಬಂತು| ನೀವು ಹೇಳಿದ ಬುದ್ಧಿಮಾರ್ಗದಲ್ಲಿ| ಪ್ರಜೆ
ಗಳಿಗೆಲ್ಲರಿಗೂ ಸೌಕರ್ಯವೂ| ಅರಮನೆಗೆ ಆದಾಯವೂ| ಆಗುವುದಕ್ಕೆ ಆವರೀತಿ
ಯಲ್ಲಿ ನಡೆಸಬೇಕು ಯೆಂದರೆ| ಸಾವಮಾಧಿಕರು ಧರ್ಮವೂ ತಪ್ಪದೆ ನಡೆಯಬೇಕು|
ಆದರಿಂದ ತಿಂಗಳಿಗೆ ಮೂರು ಮಳೆ ಹುಯ್ಯುವದು| ಬೆಟ್ಟದ ತಪ್ಪಲು ಬೆಳೆಯುವುದು|
ಕಂದಾಯ ಕಪ್ಪಗಳಿಂದ ಬಹು ಶ್ರೇಯಸ್ಸು ಉಂಟಾಗುವುದು| ಆದರಿಂದ ಬೊಕ್ಕಸಕ್ಕೆ
ರೊಕ್ಕರುಜಿನಗಳು ಬಾಹುದು| ಯೆಂದು| ಅವರು ಬಿನ್ನಹಂ ಮಾಡಿದುದಕ್ಕೆ|
ಕೃಷ್ಣರಾಯರವರು ಕೇಳಿ ಚಿತ್ತೈಸಿದ ಸಮಯದಲ್ಲಿ ನೀತಿ ಪದ್ಯ|

ನ್ಯಾಯಮು ಪ್ರಜಾ ಪಿತುರತುನು
ಪಾಯಮು ಪ್ರಜಾತವಿ ಮಿಸರಿತುಪಾಯ್ಯಂಬಗುಟಂ
ನ್ಯಾಯಮು ಭಂಡಾರಮು ನರ
ನಾಯ ಕಲ ಲಿನಂಡ್ರು ಕೀರ್ತಿ ನಾರಾಯಣ*

ಪ್ರಜೆಪತ್ತುಗಳು ನ್ಯಾಯವು ಹೆಚ್ಚುವುದಕ್ಕೆ ಉಪಾಯವಾದಂಥದ್ದು| ಪ್ರಜೆ
ಗಳ ಭಾಗ್ಯವೂ ನೆರಿಗೆ ಉಪಾಯವಾದಂಥದ್ದು| ಭಂಡಾರ ಹೆಚ್ಚುವುದಕ್ಕೆ| ದೊರೆ
ಗಳಿಗೆ ನ್ಯಾಯವೆ ಮೂಲಕಾರಣ ವೆಂದು ಹೇಳುತ್ತಾಯಿಹುದು ಎಂಬ ನೀತಿಯನ್ನು
ಕೇಳಿಸಿ| ಸಜ್ಜನರಾದಂಥವರಿಗೆ ಬಾಧೆಯ ಮಾಡಿಸಿದಂಥವರನ್ನು [1][ಶಿ]ಕ್ಷಿಸದೆ[1]
ಪರಾಕುಮಾಡಿದರೆ| ರಾಜಧರ್ಮತ್ವವನ್ನು| ಆಯುಸ್ಸನ್ನು| ಮಾಡಿದ ಪುಣ್ಯವನ್ನು
ಕ್ಷೀಣವಾಗಿ[2][ಸು]ವದು[2] ಯೆಂಬುದು ಸಿದ್ಧಾಂತವು| ದ್ವಾಪರ ಯುಗಾಂತದಲ್ಲಿ|
ಕಲಿಯುಗಾದಿಯಲ್ಲಿ| ಪರಿಕ್ಷಿತರಾಯನು| ರಾಜ್ಯಾಭಿಷಿಕ್ತನಾಗಿ| ನಿಮ್ಮ ಹಾಗೆ
ಧರ್ಮಶಾಸ್ತ್ರ| ನೀತಿಶಾಸ್ತ್ರವನ್ನು ಕೇಳಿದಂಥವರಾಗಿ| ಕೃತಯುಗದಲ್ಲಿ ಧರ್ಮ ನಾಲ್ಕು
ಪಾದ| ತ್ರೇತಾಯುಗದಲ್ಲಿ ಮೂರು ಪಾದ| ದ್ವಾಪರಯುಗದಲ್ಲಿ ಯೆರಡು ಪಾದ|

---

1 ರಕ್ಷಿಸದೆ 2 ಹೋಗುವುದು * ಈ ಪದ್ಯ ದೋಷಪೂರ್ಣ

ಕಲಿಯುಗದಲ್ಲಿ ವೊಂದು ಪಾದವಾಗಲಾಗಿ | ಧರ್ಮದೇವತೆ ಧೇನುರೂಪ ಆದಂಥಾವ ಳಾಗಿ | ಧರ್ಮರಾಯನವರು | ಧರ್ಮಪರಿಪಾಲನೆಯನ್ನು ಮಾಡಲಾಗಿ | ಯಿಷ್ಟು ದಿವಸವೂ ಸುಖದಲ್ಲಿ ಯಿದ್ದೆನು| ಕಲಿಪ್ರವೇಶವಾದ ಕಾರಣ ಮೂರುಪಾದ ಅಧರ್ಮವೂ ವೊಂದು ಪಾದ ಧರ್ಮವೂ ಆದಕಾರಣ| ಕಾಲೂರಿ ನಿಲಕೂಡದು ಯೆಂದು ಮೂರುಪಾದ ವನ್ನೂ ಯೆತ್ತಿಕೊಂಡು ದುಃಖಪಡುತ್ತ ಯಿರಲಾಗಿ | ಪರಿಕ್ಷಿತನು ನಗರ ಶೋಧನೆಗಾಗಿ ವೊಂದು ದೇಶದಲ್ಲಿ ಬರಲಾಗಿ | ಯೀ ಧೇನುವನ್ನು ಕಂಡು | ನೆಲದಲ್ಲಿ ಕಾಲನ್ನೂರದೆ | ಕಣ್ಣೀರು ತೊಟ್ಟಿಡುತ್ತ ಚಿಂತೆಯಲ್ಲಿ ಯಿರಲಾಗಿ ಆ ಸಾಧು ಬಾಧೆಯನ್ನು ನೋಡಿ | ಹೀಗೆ ಮಾಡಿದವರ್ಯ್ಯಾರು ಯೆಂದು | ಆ ಕಾಮಧೇನುವನ್ನು ಕೇಳಿದ್ದಕ್ಕೆ | ಆ ಧೇನುವು ನನ್ನ ನೀನು ಕೇಳ ಕಾರಣವೇನು | ನಿನ್ನಿಂದ ಆಗುವಂಥ ಪ್ರಯೋಜನವೇನು | ಯೆಂದು ಹೇಳಿದುದಕ್ಕೆ | ಪರಿಕ್ಷಿತ[ನು]| ತಾನು ನಿಮಗೋಸ್ಕರ ಕೇಳಿದಂಥವನಲ್ಲ | ತನಗೋಸ್ಕರ ಕೇಳಿದೆನೆಂದುದಕ್ಕೆ | ಆ ಕಾಮಧೇನುವು | ನನ್ನಿಂದ | ನಿನಗೆ [1]ಬಾಹ[1] ಶ್ರೇಯಸ್ಸನ್ನು ಪರಾಮರಿಸದೆ ಯಿದ್ದರೆ ಹಾನಿಯುಂಟೆ ಯೆಂದು ಕೇಳಲಾಗಿ, ಪರಿಕ್ಷಿತು ಹೇಳಿದ ನೀತಿ ಪದ್ಯ |*

"ಸಾಧುವಾದಂಥ ಜಂತುಗಳಿಗೆ ಬಾಧೆ ಮಾಡುವಂಥ [2]ದುರ್ಜ[ನ]ರ[2] ಶಿಕ್ಷಿಸ ದಂಥವನು ರಾಜಾಧಮನು |" ಯೆಂಬ ನೀತಿಯನ್ನು ನೋಡಿ | ತಾನು | ಅರ್ಜುನನ ವೊಮ್ಮಗನೂ | ಅಭಿಮನ್ಯುವಿನ ಮಗನೂ | ಪರಿಕ್ಷಿತು ಯೆಂಬ ಹೆಸರುಳ್ಳವನೂ ಯೆಂದು ಹೇಳಲಾಗಿ | ಕಾಮಧೇನುವು | ತಾನು ಧರ್ಮದೇವತೆಯೆಂದು | ತನ್ನ ರೂಪ ವನ್ನು ತಿಳುಹಿ | ನಿನ್ನ ಆಜ್ಞೆಯಲ್ಲಿ ಸಕಲವಾದಂಥವರು ನಡೆಯಬೇಕು ಯೆಂದು ತನ್ನ ರೂಪವನ್ನು ತಿಳುಹಿ | ಕಲಿದೋಷವೂ ತನ್ನ ಮುಟ್ಟದ ಹಾಗೆ ನೀನು ರಾಜ್ಯ ಭಾರವ ಮಾಡಿದ ದಿನಗಳ್ಲಿ[3] [ನಾನು] ನಾಲ್ಕು ಪಾದದಿಂದ ಸಂಚರಿಸುವ ಹಾಗೆ ಧರ್ಮಪಾಲನೆಯ ಮಾಡಬೇಕು ಯೆಂದು | ಆಶೀರ್ವಾದವಮಾಡಿ | ಅಂತರ್ಧಾನವಾಯಿ ತಾಗಲಾಗಿ | ಪರಿಕ್ಷಿತು । ಕಲಿದೋಷಕ್ಕೆ ಯಿರತಕ್ಕ ಸ್ಥಳಗಳನ್ನು ಕಟ್ಟುಮಾಡಿ ರಾಮಭದ್ರನ ಹಾಗೆ ಪ್ರಜೆಗಳಿಗೆ ಮೃತ್ಯುವಿನಿಂದ ತಸ್ಕರದಿಂದ | ಅನಾವೃಷ್ಟಿ ದೋಷ ಭಯಗಳು ಯಿಲ್ಲದೆ | ಧನಧಾನ್ಯ ಸಮೃದ್ಧರಾಗಿ ಯಿದ್ದರು | ಆ ಪ್ರಕಾರದಲ್ಲೆ ನೀವೂ ರಾಜ್ಯವನ್ನಾಳಬೇಕು ಯೆಂದು | ಹೇಳಿದರಾಗಲಾಗಿ | ರಾಯರವರು | ಯೀ ವರೆಗು | ಈಶ್ವರನಾಯಕ | ನರಸಿಂಹನಾಯಕ | ವೀರನೃಸಿಂಹರಾಯರವರು ರಾಜ್ಯಪಾಲನೆಯಂ ಮಾಡಿದರು | ಅವರವರ ದಿವಸದಲ್ಲಿ | ರಾಜ್ಯಗಳನ್ನು ದುರ್ಗಗಳನ್ನು | ಅರಾಜ್ಯಗಳಂ ದೇಶಗಳಂ ನೋಡಿದ ಹಾಗೆ | ನಾವು ಕರ್ನಾಟಕ ಸಿಂಹಾಸನಕ್ಕೆ ಬಂದಂಥಂಥ | ೧೧

1 ಬಾಹು 2 ದುರ್ಜರರ 3 ಳಂನು

*ಪದ್ಯವನ್ನು ಉದ್ಧರಿಸಿಕೊಟ್ಟಿಲ್ಲ.

ದುರ್ಗ ಸ್ಥಳದುರ್ಗ ವನದುರ್ಗ ಜಲದುರ್ಗಗಳನ್ನೂ | ಆರಾಜ್ಯಗಳನ್ನೂ | ದೇಶಗಳನ್ನೂ | ನಾಡುಗಳನ್ನೂ | ಪುಣ್ಯಭೂಮಿಗಳನ್ನೂ | ಸಾಮಂತ ಸರಹದ್ದು ರಾಜ್ಯಗಳನ್ನೂ | ನೋಡಿಬಂದರೆ ಪೊಳ್ಳೆಯದು ಯೆಂದುದಕ್ಕೆ | ಸಾವಮಾಧಿಕರು | ಕೃಷ್ಣರಾಯರ ಕೂಡೆ ನೀವು ಅಪ್ಪಣೆ ಕೊಟ್ಟುದು ಅಹುದು | ಉಚಿತ ಕಾರ್ಯವು | ಹಿರಿಯರು | ಆಲಿದವರು | ರಾಜ್ಯಭೂಮಿಗಳ ಮೆಟ್ಟಿ ನೋಡಬೇಕು ಯಿದ್ದ ಬಳಿಯಿದ್ದರೆ ತಿಳಿಯದು | ಲೋಕದೊಳಗುಳ್ಳ ಪ್ರಜೆಗಳೆಲ್ಲರನ್ನೂ ಸ್ವಾಮಿಯವರು ಹೊಗಳಬೇಕು ಯೆಂದು ಬಿನ್ನಹಂ ಮಾಡಿದರಾಗಲಾಗಿ ರಾಯರವರು ಸಂತೋಷ ಭರಿತರಾಗಿ | ಭೂವಿಸ್ತಾರವ ನೋಡಬೇಕು ಯೆಂಬ ದೃಷ್ಟಿಯಿಂದ ಮೊದಲು ಗೂಢಚಾರರಿಂದ ಆ ದೇಶವಾರ್ತೆಗಳನ್ನು ಆ ದಿಕ್ಕಿನಲ್ಲಿ ಯಿದ್ದ ದೊರೆಗಳ ಮನ್ನೆಯರ ನಡತೆಗಳನ್ನು ಅವರವರ [1]ಧನಬಲ[1]ಗಳನ್ನು | ದೊರೆಗಳ ಆಳು ಜನಗಳನ್ನು | ಆ ಪಟ್ಟಣಗಳನ್ನು | ನಗರಗಳನ್ನು | ಪಂಡಿತ ಪಾಮರ ಜನರನ್ನು | ಆಡಿಕೊಂಬ ಮಾತುಗಳನ್ನು| ಮಾರ್ಗಗಳನ್ನು ತಿಳಿದು | ಆ ದಿವಸದ ಪ್ರವರ್ತಕಗಳಿಗೆ ಬಂದು ತಿಳುಹುವ ಹಾಗೆ ಗೋಪ್ಯದಲ್ಲಿ ಕಾಲುವೆಗಳುಂ(?)ಟಾದ | ಬುದ್ಧಿ ವಿಚಕ್ಷಣರಾದ | ಬಹು ಭಾಷಾಂತರಗಳ[ನ್ನು] ತಿಳಿದ | ಬಹುರೂಪಿ(ನಿ)ಂದ ಸಂಚರಿಸಿ | ಅಂತರಂಗ ಬಹಿರಂಗ ವಾರ್ತೆಗಳನ್ನು ತಿಳಿದು [2]ಬಹ ಹಾಗೆ[2] | ಗೋಲಕೊಂಡೆ| ಅಮುದಾನಗರ | ಬೆಡಂದು ಕೋಟೆ | ರಾಜಮಹೇಂದ್ರ | ಯಿಕ್ಕೇರಿ | ಆ[ಅ?]ಗರ | ಚೆನ್ನಪಟ್ಟಣ | ಶ್ರೀರಂಗ ಪಟ್ಟಣ | ಉಮ್ಮತ್ತೂರು | ಶಿವನಸಮುದ್ರ | ಪೆನುಗೊಂಡೆ| ಮೊರಸನಾಡು | ತಿಗುಳಾಣ್ಯ | ಚೋಳದೇಶ| ಮಲೆಯಾಳ | ಕೊಚ್ಚಿ| ಕೇರಳ| ತುಳುವ | ಹೈರಳ(?)| ಮೊದಲಾದ ದಕ್ಷಿಣ ರಾಜ್ಯವನ್ನು | ಚಂದ್ರಗಿರಿ | ತಿರುಪತಿ | ಗಂಡಿಗೋಟೆ | ಗುತ್ತಿ ನಂದ್ಯಾಲ | ರಾ[ಯಿ]ಚೂರು | ಮುದುಗಲ್ಲು | ಮೊದಲಾದ ಸ್ಥಳಗಳಿಗೆ | ಬೇಹಿನವರ ನೇಮಕ ಮಾಡಿ ಕಳುಹಿ | ಪಟ್ಟಣದಲ್ಲಿ | ದೊರೆ ಮನ್ನೆಯರು | ಅಮರನಾಯಕರ ಸುದ್ದಿಯನ್ನು ತಿಳಿದುಕೊಳ್ಳುವ ಹಾಗೆ | ಅವರವರಿಗೆ ಅಮರಿಕೆ ಮಾಡಿ ಪಟ್ಟಣದಲ್ಲಿ | ಆಲಾಗತಿ | ಅಭ್ಯಾಗತಿ | ರಾತ್ರಿ | ಹಗಲು | ಯಾರು ತಿರುಗಿದರು | ಅವರವರ | ಅಹುದು | ಅಲ್ಲ ಯೆಂದು ನಿಗ್ರಹಿಸದ ಹಾಗೆ | ದಣಾಯಕರಿಗೂ | ಪ್ರಧಾನಿಗಳ ಕೂಡಲು | ತಳವಾರ | ಜಂಗಮಯ್ಯನ ಕರೆಸಿ | ಯಿಂದಾ ರಾಜ್ಯವಾಗಿ | ಪಟ್ಟಣದಲ್ಲಿ | ಹೊರ ಪಾಳ್ಯದಲ್ಲಿ | ವಿಠಲವಿರೂಪಾಕ್ಷದಲ್ಲಿ | ಬಡಕು | ಬಗ್ಗು ಬಲವಂತರು | ರಾವುತ ಮಾವುತರು ತಿರುಗಾಡುತ್ತಯಿಹರು | ಆರಾದರು ದೌರ್ಬಲ್ಯ | ಪ್ರಾಬಲ್ಯದಿಂದ ನಡೆದರಾದರೆ | ಅವರಿಗೆ ತಕ್ಕ ಆಜ್ಞೆಯ ಮಾಡಿಸು ಯೆಂದು ನಿರುತ್ತರವಾಗಿ ಅಪ್ಪಣೆಯ ಕೊಟ್ಟು | ಅಳಿಯಂದಿರು | ಮಕ್ಕಳು | [3]ವೈಗಾವಲವರ[3] ಕೂಡೆ ತ್ರಿಹಗಲು | ಆರ

1 ಪಲಬಲ 2 ಬಾಹಾಗೆ 3 ಪೈಗಲವರ

ಮನೆಗೆ ಬಾಹಾಗ | ಹೋಃಹಾಗ | ನಿಮ್ಮ ನಿಮ್ಮ ಮಾರ್ಗದಲ್ಲೇ ಹೋಗಿ ಬಾಹಿರ
ಲ್ಲದೆ | ಆಲಾಗಿಕಿ | ಅಭ್ಯಾಗತಿಯಿಂದಲಾದರೂ | ಅಹಂಕರಿಸಿದಲ್ಲಿಯಾದರೂ | ಪರರ
ದಾರಿ ಹೋದರೆ ಆಜ್ಞೆ ಮಾಡುವದು ಯೆಂದು ಕಟ್ಟಳೆ ಮಾಡಿದ್ದೇವೆ | ಅರಮನೆಯ
ಮೀರದೆ ಅವರವರ ಕೂಡೆ | ಅಪ್ಪಣೆಕೊಟ್ಟು ಯಿದ್ದರಾಗಲಾಗಿ | ಪಟ್ಟಣದಲ್ಲಿ ಸಕಲ
ವಾದಂಥವರನ್ನು | ಅವರವರನ್ನು ಭಯಸ್ತರನ್ನಾಗಿಸಿ ಮಾರ್ಗದಲ್ಲಿ ತಾಕಿದ[ವ]ರು |
ಯೇನುಯೆಂತು ಯೆಂದು ತಡೆದವರು ಯಿಲ್ಲದೆ ಸುಖದಲ್ಲಿಯಿರುವ ನೀತಿಗೆ ನೇಮಕವ
ಮಾಡಿ | ರಾಯರವರು ನಿತ್ಯಕೃತ್ಯವನ್ನು ರಾತ್ರೆ ವೋಲಗ ತೀರಿದ ಮೇಲೆ ಶೋಧನೆಗೆ
ಹೊರಟು ಸಕಲ ಪ್ರಪಂಚಗಳನ್ನೆಲ್ಲ ತಿಳಿದು ಅರುಣೋದಯಕ್ಕೆ ಬರುವರಾದ | ರಾತ್ರಿ
ಪ್ರಪಂಚಯೆಲ್ಲವನ್ನು ಮನಸ್ಸಿಗೆ ತಂದುಕೊಂಡು ಹಗಲ ವೋಲಗದಲ್ಲಿ ಪಟ್ಟಣದಲ್ಲಿ
ಪ್ರವರ್ತಕಗಳು ಯೇನು ಯೆಂದು ತಳವಾರ ಜಂಗಮಯ್ಯರ ಕೇಳಲಾಗಿ ಆತನು ಸಕಲ
ವಾರ್ತೆಯನ್ನು ಬಿನ್ನಹ ಮಾಡುವನಾಗಲಾಗಿ ತಾವು ನೋಡಿದುದಕ್ಕೂ | ತಿಳಿದು
ದಕ್ಕೂ ಸರಿಹೋದರೆ ಸುಮ್ಮನೆಯಿಹರು ಯಿಲ್ಲದೆಯಿದ್ದರೆ ನಡೆದ ಕಾರ್ಯದ ವೊಳಗೆ
ಬಲ ದುರ್ಬಲಗಳ ಕಡಮೆ ಮಾಡಿ ತಿಳುಹದೆಯಿದ್ದರೆ | ಯೀಪಾಳ್ಯದಲ್ಲಿ ಯೆಂಥ ಬೀದಿ
ಯಲ್ಲಿ| ಯೀ ಶ್ರೇಣಿಯಲ್ಲಿ ಯಿಷ್ಟನೆಯ ಮನೆಯಲ್ಲಿ| ರಾತ್ರೆ ನ್ಯಾಯ ಅನ್ಯಾಯಗಳನ್ನು
ತಿಳಿದಂಥವನಲ್ಲ | ನೀನು ತಳವಾರಿಕೆಯನ್ನು ಮಾಡುವುದನ್ನು | ನಾವು ರಾಜ್ಯಪರಿ
ಪಾಲನೆ ಮಾಡುವುದು ಚೆನ್ನಾಯಿತು ಯೆಂದು | ಆಗ್ರಹ ಬಿದ್ದು ಅಪ್ಪಣೆಯಕೊಟ್ಟರೆ|
ತಳವಾರನು ಭಯಸ್ತನಾಗಿ | ತಾನು ರಾತ್ರೆ ಹಗಲು | ಆಹಾರ ನಿದ್ರೆಯಿಲ್ಲದೆ | ಬೀದಿ
ಬೀದಿಗಳಲ್ಲಿ ಮನುಷ್ಯರ ನಿಲ್ಲಿಸಿ| ಕ್ಷಣ ಕ್ಷಣದ ಸುದ್ದಿಯ ಪರಾಮರಿಸದೆ ಯಿಾ ಸುದ್ದಿಯ
ಬಂದು ತಳವಾರ ಹೇಳಲಿಲ್ಲ| ರಾಯರವರಿಗೆ ಯಾರು ಬಿನ್ನಹವ ಮಾಡಿದರು ಯೆಂದು
ಪರಾಮರಿಸಲಾಗಿ | ರಾಯರವರು ನಗರ ಶೋಧನೆ[ಗೆ] ಹೊರಟು ಪರಾಮ್ರು[1]ಸಿದ[1]
ಕಾರ್ಯವಲ್ಲದೆ ಕೇಳಿದ ಕಾರ್ಯವಲ್ಲವೆಂದು ಯೆಣಿಸಿ | ಆದಾರಭ್ಯವಾಗಿ | ಪಟ್ಟಣದಲ್ಲಿ
ಕಾವಲು ಕಟ್ಟಳೆ | ಅವರವರ ಕೂಡೆ ಜತನವಾಗಿ ಹೇಳಿ| ರಾಯರವರು ನಗರ ಶೋಧ
ನೆಗೆ ಹೊರಟು ಬಾಹರು | ಆದಾರು ಯೆಂದು ಕೇಳದೆ ಬೀದಿಗಳಲ್ಲಿ ದುಡಕಬಾರದ
ಹಾಗೆ ಯೆಚ್ಚರಿಕೆಯಲ್ಲಿ ಯಿರಿ ಯೆಂದು | ತಾನು | ತನಗೆ | ಉಂಟಾದ ಆಪ್ತರನ್ನು |
ವೋಲಗ ತಿಳಿ[ದು] ಅರಮನೆ ಯೊಳಗಿಂದ ಹೋದಾಕ್ಷಣದಲ್ಲೆ| ಹಜಾರದ ಬೀದಿ
ಯಲ್ಲಿ ಕಾದುಕೊಂಡಿದ್ದು ಅರಮನೆ ಬೀಗ ಮುದ್ರೆಯಾದ ಯೆರಡುಗಳಿಗೆ ರಾಯರವರು
ಲೀಲಾವತಾರವಾಗಿ ವೇಷಚ್ಛಾಯಗಳ ನೋಡಿ ಕಾಣಿಸಿಕೊಳ್ಳದೆ ಯೆಷ್ಟೊತ್ತ
ರಲ್ಲೂ ಯೆಚ್ಚರಿಕೆಯಲ್ಲಿ ಬರಲಾಗಿ ರಾಯರವರು ಜಂಗಮಯ್ಯನ ವೊಂಟಿಯಾಗಿ
ಬರಹೇಳಿ | ದಿನ ತಪ್ಪದೆ ನಗರ ಶೋಧನೆಗೆ ಬರುತ್ತಾಯಿದ್ದೇವೆ | ನೀನು ನಿನ್ನ

1 ಸ್ತ್ರದ

ಬಗೆಯವರನ್ನು ದೂರದಲ್ಲಿ ನೋಡುತ್ತ ತಿರುಗಾಡಿ ಯೆಂದು ಅಪ್ಪಣೆ ಕೊಟ್ಟರಾದ ಕಾರಣ | ಜಂಗಮಯ್ಯ ಆದಾರಭ್ಯವೂ ಭಯಸ್ತನಾಗಿ | ರಾಯರವರು ನಗರ ಶೋಧನೆ ಮಾಡಿ ಅರಮನೆಗೆ ಹೋಗುವ ಪರ್ಯಂತರ | ಬೀದಿಬೀದಿಗಳಲ್ಲಿ ಸಂಗಡ ತಿರುಗಿ | ತನ್ನ ಬಿಡದಿಗೆ ಹೋಹನು | ಈ ವರ್ತಮಾನವನ್ನು ಅಪ್ಪಾಜಿ ಮೊದಲಾದಂಥವರು ಕೇಳಿದಂಥವರಾಗಿ | ತಮ ತಮಗೆ ಆಲೋಚನೆ ಹುಟ್ಟಿ | ತಂತಮ್ಮ ಮನೆ[ಯ]ಲ್ಲಿ ರಾತ್ರಿ ಹಗಲು ಆವ ಮಾತನಾಡುವುದಕ್ಕೂ ಅತಿ ಯೆಚ್ಚರಿಕೆಯಲ್ಲಿ | ಆಪ್ತಾಲೋಚನೆಯ ನಡೆಸುತ್ತಯಿದ್ದರು |

ನಿತ್ಯಕೃತ್ಯವನ್ನು ರಾಯರವರು ಬ?ದ್ಯ ನೀತಿಯ ಪೋದಿಸಿ ಕೇಳುತ್ತ ಯಿಹರಾಗಲಾಗಿ | ವೊಂದುದಿನ | ಬದ್ಯ [ಪದ್ಯ?] ನೀತಿಯ ಭದ್ರಯ್ಯನು | ಅರಮನೆಗೆ ತಾನು ಬರದೆ | ಮಗನ ಕಳುಹಿಸಲಾಗಿ | ಆತನೂ ಸಂಜಯನೀತಿ | ವಿದುರನೀತಿ| ಭರ್ತೃಹರಿ ನೀತಿ | ಮೊದಲಾದ ನೀತಿಗಳನ್ನೋದಿ | ಬದ್ಯನೀತಿ ಪದ್ಯದೊಳಗೆ ವೊಂದೂ ತಪ್ಪದೆ ವೋದಲಾಗಿ | ಪದ್ಯ | ಟೀಕು | ತಲವರ್ಗ | ಸಾಮಂತರು | ಬಲಕ್ಕೆ ಅಧಿಕವಾದಂಥ ನೃಪಾಲನಿಗೆ ಬಲುಮೆಯಾಗಿ ವೊಪ್ಪುವುದು | ಮತ್ತು ಆಜ್ಞಾಬಲ ಸಂಪತ್ತು ವೊಪ್ಪುವುದು ಯೆಂಬ ನೀತಿಯ ಮೊದಲಾಗಿ ರಾಯರವರಿಗೆ ಮೂರುಬಾರಿ ವೋದು ಯೆಂದು ಪಾಠವಮಾಡಿ | ವೊಂದು ದಿನ ವೋಲಗದೊಳಗೆ ಕರಣಿಕರ ಕರೆಯಿಸಿ ಅವರ ಕೂಡೆ ಕರ್ನಾಟಕ ಸಿಂಹಾಸನಕ್ಕೆ ಯೆಷ್ಟು ಲಕ್ಷ ರಾಜ್ಯ | ಆ ರಾಜ್ಯದೊಳಗೆ | ಗಿರಿದುರ್ಗ | ನೆಲದುರ್ಗ | ವನದುರ್ಗ | ಜಲದುರ್ಗಗಳು ಯೆಷ್ಟು ಆವಾವ ದುರ್ಗಕ್ಕೆ ಆವಾವ ರಾಜ್ಯ ಸಲುವುದು |ಈ ರಾಜ್ಯಕ್ಕೆ ವೋಲೈಸುವ ಕುದುರೆ ಕಾಲಬಲ ಯೆಷ್ಟು | ಅರಮನೆ ಬೊಕ್ಕಸ ಭಂಡಾರದಲ್ಲಿ ಯಿರುವ ರೊಕ್ಕರುಜಿನಕ್ಕೂ | ಸೀಮೆಮಣಿ ತೂಗಾರರ ಮೇಲೆ ಸಂದನಿಂಚದಕ್ಕೂ | ಅರಮನೆ ಕೈಸಂಬಳದ ಆನೆ ಕುದುರೆ ಮಂದಿಗಳಿಗೆ ವಿವರವಾಗಿ ಲೆಕ್ಕವ ಬರೆದು ಓದಿ ಯೆಂದು ವೊಂಬತ್ತು ಮಂದಿ ಕರಣಿಕರ ಕೂಡೆ ಅಪ್ಪಣೆ ಕೊಟ್ಟುದಕ್ಕೆ|ಚಿನ್ನ ಭಂಡಾರದ ಅಲ್ಲಾಳನಾಥನು ಬಿನ್ನಹಮಾಡಿದ್ದು| ಯೀ ವರೆಗೆ ವೀರನೃಸಿಂಹರಾಯರವರು ಲೆಕ್ಕಗಳ ಕೇಳಿ ಪರಾಮರಿಸಿದವರಲ್ಲ | ಸ್ವಾಮಿಯವರು ಪರಾಮರಿಸುತ್ತ ಯಿದೀರಾದ ಕಾರಣ ಆವಾವ ಲೆಕ್ಕವ ಬಿನ್ನಹಂ ಮಾಡು ಯೆಂದರು | ಆ ಲೆಕ್ಕಗಳನ್ನು ಬರೆದು ಯಿದ್ದೇನೆ ಯೆಂದು ಬಿನ್ನಹಂ ಮಾಡಿದ್ದು | ವಿದ್ಯಾರಣ್ಯರು ಪಟ್ಟಣವ ಕಟ್ಟುವಾಗ ಸಿಂಹಾಸನಸ್ತರಿಗೆ | ನಿಕ್ಷೇಪವಾಗಿ | ತೊಂಬತ್ತಾರು ಕೋಟಿ ದ್ರವ್ಯ ನಿಕ್ಷೇಪಿಸಿದ್ದಲ್ಲದೆ | ಭೂಷಣಗಳಿಂದ ನಾಲ್ಕು ಕೋಟಿ | ಯಿದಲ್ಲದೆ | ಯೀವರೆಗೆ | ಸಿಂಹಾಸನಸ್ತರಿಗೆ | ಸಿಂಹಾಸನದ ಪಣವ ನಡೆಸುತ್ತ ಬಂದು | ಅವರವರ ದಿವಸದಲ್ಲಿ ಬೊಕ್ಕಸದಲ್ಲಿ ಹಾಕಿದ್ದು | ವೊಂಬತ್ತು ಕೋಟಿ ಯಿದ್ದೀತು |

---

1 ಹೊಂಹನು

ಕರ್ನಾಟಕ ರಾಜ್ಯ | ಯೆಂಬತ್ತು ಲಕ್ಷಕ್ಕೂ ದೇವಾದಾಯ | ಬ್ರಹ್ಮಾದಾಯ | ಮಠವುರ ಮಾನ್ಯ ಹೋಗಲಾಗಿ | ನಿಂತ ರಾಜ್ಯಕ್ಕೆ ಸಂಬಳ | ಜಿಶೆ(?)ರಾವುತ ಕುದುರೆ ೧ಕ್ಕೆ ಘಟ್ಟಗ ೧೦೦ ರ ಮೇರೆಯಲ್ಲಿ ಕುದುರೆ ಸಾವಿರಕ್ಕೆ ಲಕ್ಷಸ್ಥಿತಿ | ಕುದುರೆ ಯಿಪ್ಪತ್ತನಾಲ್ಕು ಸಾವಿರಕ್ಕೆ ಸ್ಥಿತಿ ಯಿಪ್ಪತ್ತುನಾಲ್ಕು ಲಕ್ಷವೂ | ಆನೆ ೧ಕ್ಕೆ ಸಾವಿರ ವರಹದ ಮೇರೆಯಲ್ಲಿ ಆನೆ ಘಟೆ ಸಾವಿರದ ಯಿನ್ನೂರಕ್ಕೆ | ಸ್ಥಿತಿ ಹನ್ನೆರಡು ಲಕ್ಷ | ಆಳು ೧ಕ್ಕೆ ಘಟ್ಟಗ ೨೦ ವರಹ ಮೇರೆಯಲ್ಲಿ ಆಳು ಸಾವಿರಕ್ಕೆ ೨೪೦೦೦ ಯಿಪ್ಪತ್ತ ನಾಲ್ಕು ಸಾವಿರ ಪ್ರಕಾರದಲ್ಲಿ | ಲಕ್ಷ ಅರುವತ್ತು ಸಾವಿರ ಕಾಲಾಳು | ಲಕ್ಷ ಅರುವತ್ತು ಸಾವಿರ ರಾಯದುರ್ಗ | ಆದವಾನಿ | ಚಿಮುಟಿದುರ್ಗ | ಗುತ್ತಿಗಂಡಿಗೋಟೆ | ಚಂದ್ರ ಗಿರಿ | ಗುಟ್ರೆಕೊಂಡೆ | ಮದ್ದೂರು | ಸಾಮುಗಿರಿ| ಪಡವಿ(೯)ಡು| ತೆಂ[ಕಂ?] ಚಿ ತಿರು ಚನಾಪಳ್ಳಿ | ಪೆನುಕೊಂಡೆ | ಮಾಸ್ತಿ ಮೊದಲಾದ ಗಿರಿದುರ್ಗಗಳನ್ನೂ | ನಂದ್ಯಾಲ | ಶ್ರೀರಂಗಪಟ್ಟಣ | ಉಮ್ಮತ್ತೂರು | ಶಿವನ ಸಮುದ್ರ ಡಣಾಯಕನ ಕೋಟೆ | ಮದ್ದೂರ ಪಾಳ್ಯದ ಕೋಟೆ | ದಿಂಡುಗಲ್ಲು ಮೊದಲಾದ ಸ್ಥಳ ದುರ್ಗಗಳನ್ನೂ | ಸತ್ಯ ಮಂಗಲ | ಕೂಟಗಲ್ಲು | ಡೆಂಕಣಿ ಕೋಟೆ | ನಾರಾಯಣವನ | ಮೊದಲಾದ ವನದುರ್ಗವೂ | ಆ ದೇಶದವರು | ಆಳಿ ವೋಲೈಸುತ್ತಿದ್ದಾರೆ | ಲೆಕ್ಕ ಪ್ರಕಾರಕ್ಕೆ ಆನೆ ಕುದುರೆ ಕಾಲಾಳನ್ನು | ಸರಿನೋಡಿಕೊಳ್ಳಬೇಕು | ಆ ದುರ್ಗವಾಳುವವರು | ಆನೆ ಕುದುರೆ ಕಾಲಾಳುಗಳ ವಿವರವಾಗಿ ಬರೆದು ತನ್ನಿಯೆಂದು ಅಪ್ಪಣೆಯ ಕೊಟ್ಟ ಮೇಲೆ ಅರಮನೆಯ ಕೈಜಿತವಾಗಿ ಯೇನನೂ ಓದಲಿಲ್ಲ ಯೆಂದು ಮನಸ್ಸಿನಲ್ಲಿ ಯೆಣಿಸಿ| ಅಪ್ಪಾಜಿ ಅಯ್ಯಪ್ಪರಸರ ಕೂಡೆ ಮುಂದೆ ನಡೆಸಿಕೊಂಬಂಥ ಕಾರ್ಯಗಳಿಗೆ | ಆಲೋಚನೆ ಯೇನು ಯೆಂದು ಕೇಳಿದುದಕ್ಕೆ | ಸಾಳುವ ತಿಮ್ಮರಸಯ್ಯ ಆಲೋಚನಾ ಪರನಾಗಿ | ಮತ್ತೇನೂ ಎನ್ನದೆ | ಚಿತ್ತಕ್ಕೆ ಸರಿಬಂದ ಹಾಗೆ ನಡೆಸುವಾ ಎಂದು | ಸಂಬುದ್ಧಿಯಾಗಿ ಯೆಂದುದಕ್ಕೆ | ರಾಯರವರು ಸಿಂಹಾಸನ ಭಾರಕ್ಕೆ ತಮ್ಮ ಕಾರಣಕರ್ತರನ್ನು | ಮಾಡಿದ್ದಲ್ಲದೆ | ಸಕಲ ಪ್ರಪಂಚವೂ ಸಾಮಾಧಿಕರಿಂದಲೆ | ನಡೆಯುತ್ತ ಯಿದ್ದಿತು | ತಮ್ಮ ಮಾತುಕತೆಗಳನ್ನು ಯಾರು ಕೇಳಿಯಾರು | ತರುಣದಲ್ಲಿಯೇ | ಸ್ವತಂತ್ರವಾಗಿ ನಡೆಸಿದರೆ | ಮಂತ್ರ ಭಿನ್ನವಾಗಿ | ಕಾರ್ಯ ಕೊನೆ ಸಾಗಲರಿಯದು | ಬಾಗಿಲಲ್ಲಿ ಯಿಹಂಥ ಹಿರಿಯರು ಕಿರಿಯರಿಂದ ತಿಳಿದು ನಡೆಸಿದರೆ ಸ್ವತಂತ್ರವಾಗಿ ನಡೆವುದು ಯೆಂದು ಯೆಣಿಸಿ | ನಗರ ಶೋಧನೆಗೆ ವೊಂದು ದಿವಸ| ಹೊರಟ ಹಾಗೆ ಅರಮನೆ ಹೊರಟು ಪಟ್ಟಣಕ್ಕೆ ಯೆರಡು ಗಾವುದದಲ್ಲಿ | ಉತ್ತರ ವಾಗಿ ಹೋಗಿ ಅಲ್ಲಿ ವೊಂದು ಗುಡಿ ಇರಲಾಗಿ ಅಲ್ಲಿ ನಿಂತು ನಂಬಿದವರ [1]ನೀರು ತಾ[1] ಯೆಂದು | ಮುಖಮಜ್ಜನ ನಾಮತೀರ್ಥವಾಗಿ | ಸ್ವಯಂ ಪಾಕ ನೈವೇದ್ಯವಾದಂಥ

---

1 ನಿರುತ

ಪ್ರಸಾದ ಪಣ್ಯಾರಗಳನ್ನು ತನ್ನಿ ಯೆಂದು ಊಟವನ್ನು ಮಾಡಿ ಕುಳಿತುಕೊಂಡು ಇರಲಾಗಿ | ಯಿಲ್ಲಿ ಪಟ್ಟಣದಲ್ಲಿ ಯೆಂದಿನ ಹಾಗೆ | ಸಾಳುವ ತಿಮ್ಮರಸಯ್ಯನವರು | ಅರಮನೆಗೆ ಬಂದು | ರಾಯರವರು ಯೆದ್ದು ಯೆಚ್ಚರಿಕೆಯಲ್ಲಿ ಯಿದ್ದಾರೆಯೋ | ಯೆಂದು ಪರಾಮರಿಸಲಾಗಿ ದಾದಿಯವರು | ಹೆಗ್ಗಡಿಕಾತಿಯವರು | ಅಣ್ಣಗಳು | ಮಂದಲಿಸಿದ್ದು ರಾಯರವರು ನಗರ ಶೋಧನೆಗೆ ಹೊರಟರಲ್ಲದೆ | ಯೇನೂ ಬರಲಿಲ್ಲ ಯೆಂದು | ಹೇಳಿದರಾಗಲಾಗಿ | ಅನರ ಕೂಡೆ ಯಾರು ಬಂದು ಕೇಳಿದರೂ | ಯಿನ್ನೂ ಯೆಚ್ಚತ್ತು ಯೇಳಲಿಲ್ಲ ಯೆಂದು ಹೇಳಿ ಯೆಂದು ಸೇಮುಕನ ಮಾಡಿ | ಹಜಾರಕ್ಕೆ ಬಂದು ಕುಳಿತುಕೊಂಡು ಗೂಢಚಾರರ ಯೆಂಟು ದಿಕ್ಕಿಗೂ ಕಳುಹಿಸಲಾಗಿ | ಆ ದಿಕ್ಕಿಗೆ ಹೋದವರೊಳಗೆ | ಪರಿಶೋಧಕನಾದಂಥ ಬೇಹಿನವನು ಬಂದು | ತಿಮ್ಮರಸಯ್ಯನವರ ಕೂಡೆ ಪಟ್ಟಣಕ್ಕೆ ಯೆರಡು ಗಾವುದ ದೂರದಲ್ಲಿ | ಪಲ್ಲಿಗೊಂಡ ರಂಗನಾಥ ಸ್ವಾಮಿಯವರ ಗುಡಿಯೊಳಗೆ | ಸ್ವಾಮಿಯ ಸನ್ನಿಧಿಯಲ್ಲಿ ಯೇಕಾಂತವಾಗಿ ಕುಳಿತುಕೊಂಡು ಪಟ್ಟಣದ ದಿಕ್ಕು ನೋಡುತ್ತ ಯಿದಾರೆ ಯೆಂದು ಹೇಳಲಾಗಿ | ಅಪ್ಪರಸಯ್ಯ ಹೇಳಿದಂಥ ವಿವರ |

ಮನ್ನೆಯವರು ಅಮರಗಾರರು ಅಷ್ಟು ಮಂದಿಗಳನ್ನೂ | ರಾಯರವರು ಬೇಟೆ ಮಾರ್ಗವಾಗಿ ಹೊರಡುತ್ತಯಿದ್ದಾರೆ | ನೀವೆಲ್ಲರೂ | ನಿಮ್ಮ ನಿಮ್ಮ ಸ್ತೋಮ ಶುದ್ಧಿ ಮಾಡಿಕೊಂಡು ಬನ್ನಿ ಯೆಂದು ಚೀಟಿಗಳ ಬರೆಯಿಸಿ ಕಳುಹಿಸಿದರಾದ ಕಾರಣ ಪಟ್ಟಣದೊಳಗುಳ್ಳ ರಾವುತರು | ಮಾವುತರು | ಕಾಲಾಳು | ದೊರೆಮನ್ನೆಯರು | ಅಷ್ಟು ಮಂದಿಯು ಕದಲಿ ಹೋದರು | ಮುಂದಾಗಿಯೆ ತಿಮ್ಮರಸಯ್ಯನವರು ಹೋಗಿ | ವೊಂದು ಹರಿದಾರಿಯ ದೂರದಲ್ಲಿ ಅಂದಳವನ್ನಿಳಿದು | [1]ಅಲ್ಲಿನ ನಂಟರು ಬಂಟರು[1] ಆನೆ ಕುದುರೆಗಳನ್ನು ಬರಮಾಡಿಕೊಂಡು ಯಿರ ಹೇಳಿ ಕಟ್ಟಳೆ ಮಾಡಿ | ಮಿತ ಪರಿಜನದಿಂದ ಕೆಲವು ದೂರ ಹೋಗಿ | ಅಷ್ಟು ಮಂದಿಯನ್ನೂ ಅಲ್ಲಿಯೆ ಸಿಲ್ಲಿಸಿ ತಾವು ಏಕದೇಶವಾಗಿ ಗುಡಿಯ ಬಳಿಗೆ ಹೋದರಾಗಲಾಗಿ | ರಾಯರವರು ತಿಮ್ಮರಸಯ್ಯನನ್ನು ದೂರದಲ್ಲೆ ಕಂಡು | ಹಚ್ಚಡವ ಮುಸುಕು ಹಾಕಿಕೊಂಡು ಮುನಿದಿರುವ ಮಾರ್ಗದಲ್ಲಿ ಯಿರಲಾಗಿ | ಅಪ್ಪಾಜಿ | ರಾಯರವರ ಪಾದದ ಬಳಿಯಲ್ಲಿ ಕೈ ಕಟ್ಟಿಕೊಂಡು ನಿಂತಿರಲಾಗಿ | ಕೆಲ ಹೊತ್ತು ಕಾಣಿಸಿಕೊಳ್ಳದೆಯಿದ್ದು | ಅತ್ಯಂತವಾಗಿ ನಿದ್ರೆ ಹೋಗಿ ಯೆದ್ದ ರೀತಿಯಲ್ಲಿ ಯೆದ್ದು | ಅಪ್ಪಾಜಿಯನ್ನು | ನೀವು ಯೇಕೆ ಯಿಲ್ಲಿಗೆ ಬಂದಿರಿ ಯೆಂದು ಕೇಳಲಾಗಿ | ಅಪ್ಪಾಜಿ ಅಡ್ಡಬಿದ್ದು | ಬಿನ್ನಹಂ ಮಾಡಿದ್ದು | ಸ್ವಾಮಿಯವರು | ನಿನ್ನೆ ರಾತ್ರಿ ನಗರ ಶೋಧನೆಗೆ ಹೊರಟು ಹಾಗೆ ಯಿಲ್ಲಿ ಚಿತ್ತೈಸಿದ್ದನ್ನು ತಿಳಿಯದಿರಲಾಗಿ | ಅರಮನೆಗೆ ಹೋಗಿ | ಸ್ವಾಮಿಯವರು ಯೆದ್ದು ಯಿದ್ದಾರೆಯೋ ಯೆಂದು ಕೇಳಲಾಗಿ | ಹೆಗ್ಗಡೆಗಾತಿ

1 ಅಲ್ಲಿ ನಂಟುಬಂಟು

ಯವರು | ಅಣ್ಣಗಳು ಯೀವರೆಗೂ ಬಂದಂಥವರಲ್ಲ ಯೆಂದು ಹೇಳಲಾಗಿ | ಮನಸ್ಸಿನಲ್ಲಿ ಬಹಳ ವಿಚಾರವಾಗಿ | ಆ ದಿಕ್ಕುಗಳಿಗೆ ಬೇಹಿನವರ ಕಳುಹಲಾಗಿ | ಯಿಲ್ಲಿ ಚಿತ್ರೈಸಿ ಯಿದ್ದಾರೆ ಯೆಂಬುದನ್ನು ಹೇಳಲಾಗಿ ಕೇಳಿ | ಯೀ ಸುದ್ದಿಯ ಹುಟ್ಟಿಸಬಾರದು ಯೆಂದು ರಾಯರವರು ಬೇಟೆ ಮಾರ್ಗವಾಗಿಯಿದಾರೆ ಯೆಂದು | ದೊರೆಮನ್ನೆಯರು ಅಷ್ಟು ಮಂದಿಯನ್ನೂ ಶಂತಮ್ನು ಸ್ತ್ರೀಮುವ ಕೂಡಿಕೊಂಡು ಬರುವುದು ಯೆಂದು ಚೀಟಿಗಳ ಬರೆದು ಕಳುಹಿಸಿ | ಸಮೀಪದವರ ಕೂಡೆ ರಾಯರವರು [1]ಹೊತ್ತಾರೆ[1] ಯೇಕದಲ್ಲಿ ಹೋಗುವಾಗ ಬರಹೇಳಿ ಅಪ್ಪಣೆ ಕೊಟ್ಟುಯಿದಾರೆ ಯೆಂದು ಅವರ ಕೂಡೆ ಮಂದಲಿಸಿ ಹೊರಟು ಬಂದೆನು | ಸ್ವಾಮಿಯವರು ಯೀ ರೀತಿಯಲ್ಲಿ ಬರಬಹುದೇ | ಯೀ ಸುದ್ದಿಯ ಪರರು ಕೇಳಿದರೆ ಪಟ್ಟಣವೆಲ್ಲ ಸೂರೆಹೋಹುದು | ದುನ್ನೆದಾರರು ಕೇಳಿದರೆ ಅಪಕೀರ್ತಿಯಾಗಿ ಪಟ್ಟಣವೆಲ್ಲ ಕೊಳ್ಳೆಹೋಗುವದು | ಯಿಂಥ ಕಾರ್ಯವ ಮಾಡುವುದುಚಿತವೇ ಸ್ವಾಮಿ | ಚಿತ್ತದಲಿ ಯಿಂಥ ಕಾರ್ಯವನೆಣಿಸಿ ಬರಬಹುದೆ ಯೆಂದು ನೀತಿ ಮಾರ್ಗವಾಗಿ ದೂರಿಕೊಳ್ಳಲಾಗಿ | ಭಯೋತ್ಪಾ[2]ದಕ[2]ವಾಗಿ ಹೇಳಿದುದಕ್ಕೆ ರಾಯರವರು | ಸಿಂಹಾಸನದ ಭಾರವನು ವಹಿಸಿ ನಿಮ್ಮಂಥ ಹಿರಿಯರು ಯಿರಲಾಗಿ | ಅಂಥ ಕಾರ್ಯಗಳು ಯೇಕೆ ಬಂದಾವು | ನೀವು ತೃಣವ ಪಿಡಿದರೆ ಮೇರುವಾಗುವುದು | ಮೇರುವನು ತೃಣವ ಮಾಡಲಾಪಿರಿ | ಘಟನಾಘಟನ ಸಾಮರ್ಥ್ಯವೂ ನಿಮ್ಮಲ್ಲಿಯೇ ಉಂಟು ಯೆಂದು ನಿರ್ಮಲಗ[3]ಭೊರ್ಗ[3]ಕ್ತಿಗಳಾಗಿ ಅಪ್ಪಣೆ ಕೊಟ್ಟದ್ದಕ್ಕೆ | ಸಾಳವ ತಿಮ್ಮರಸಯ್ಯ ಹಾಗೆಯಹುದು | ಸ್ವಾಮಿಯವರು ಸಕಲ ಭಾರವನ್ನೂ ನಮ್ಮ ಮೇಲೆ [4]ಹಾಕಿ[4] ನಡೆಸುತ್ತ ಯಿರಲಾಗಿ ಹಾಗೇ ನಡೆಯುತ್ತಾ ಯಿದ್ದಿತು | ಚಿತ್ತಕ್ಕೆ ಬಾರದೆ ಯಿದ್ದರೆ | ನಾವು ಯೆಂಬುದು ಯೆಷ್ಟು ತೃಣ | ತೃಣಗ್ರಾಹಿಯಾದಂಥ ಯಿಂದ್ರ ನೀಲವೂ ಖ್ಯಾತಿಯನ್ನೈದುವುದು | ತೃಣವೂ ತೃಣವೆಂದೆನಿಸಿ | ಕೈಪಿಡಿಯದೆ ಯಿದ್ದರೆ [5]ಚಾತಿ ನೀವಲ್ಲ[5] ಯೆಂದು ಬೆಲೆ ತಗ್ಗುವುದು ಆಗಲಾಗಿ | ಆಳಿದವರ ಪ್ರತಾಪ ದಿಂದ | ಪೋಲೈಸುವವರು ಘನವಾಗುವರು ತಾಪ ಉಂಟಾಗುವುದು ಯೆಂದು ದ್ವಂದ್ವಾರ್ಥಗಳಾಗಿ ಬಿನ್ನಹಂ ಮಾಡಿ | ಪಟ್ಟಣಕ್ಕೆ ಚಿತ್ರೈಸಿ ಯೆಂದು ತಿಳುಹಿ ದುದಕ್ಕೆ ರಾಯರವರು ತಮಗೆ ದೊರೆತನವೆನ್ನಲಾಗಿ | ಯೇನು ತಮ್ಮ ಅಂಕೆಗೆ ಯಾರು ಬಂದಾರು | ಯೆಂದೂ ಬಾರದವರನ್ನು ನಾವು ಯೇನು ಮಾಡುವೆವು ಯೆಂದು ದಂಡಿಸೆ ಸಮರ್ಥರಲ್ಲ | ದಂಡನಾಯಕತ್ವವು ಯಿಲ್ಲದವರಿಗೆ ಭೂಮಿಯ ನಾಳುವುದು ಹೇಗೆ | ಧರ್ಮ ಪರಿಪಾಲನೆಯ ಮಾಡುವದು ಹೇಗೆ | ದುಷ್ಟನಿಗ್ರಹ ಶಿಷ್ಟಪರಿಪಾಲನೆ ಮಾಡು ಯೆಂದು ಹೇಳಿದಿರಲ್ಲ ಆದಕ್ಕೆ ಪತ್ರಿ ಚಿಂತೆಯ ಕಂಡರೆ ಬಂದೆವು | ಯಿಲ್ಲದಿದ್ದರೆ ಬರತೀರದು ಯೆಂದು ನಾಲ್ಕು ಘಳಿಗೆ ಆಲೋಚನೆಯನ್ನು

---

1 ಹೊಂತ್ತರೆ 2 ತ 3 ಭ್ರಾಗ 4 ಹೂಗಿ 5 ಚಾತಿ ನಿಲಸಲ್ಲ

ಮಾಡಲಾಗಿ | ಸಾಳುವ ತಿಮ್ಮರಸಯ್ಯನವರು ದೇವರವರ ಅಪ್ಪಣೆ ಕೊಟ್ಟದ್ದೆಲ್ಲವೂ ಸಿದ್ಧವಹುದು | ಕಾರ್ಯ ರೀತಿಯಹುದು | ಅದಕ್ಕೆ ಯಿದು ಬುದ್ಧಿ ಯೆಂದು ಅಪ್ಪಣೆ ಕೊಟ್ಟರೆ ಸ್ವಾಮಿಯವರು ಅಪ್ಪಣೆ ಕೊಟ್ಟ ಹಾಗೆ | ಅಘಟನಘಟನಾಸಾಮರ್ಥ್ಯವೂ ಉಂಟು ಯೆಂದುದಕ್ಕೆ ಸ್ವಾಮಿಯವರ ಪ್ರತಾಪದಿಂದ ಯೆಲ್ಲ ಕಾರ್ಯಗಳೂ ಅಮರಿಕೆಯಾದವು ಯೆಂದು ತಿಳುಹಿದುದಕ್ಕೆ | ರಾಯರವರು | ನಮ್ಮ ಸ್ವತಂತ್ರ ಮಾಡಿದಿರಿ ಯೆಲ್ಲ ಆ ಪ್ರಕಾರದಲ್ಲಿಯೇ ನಡೆಸಿ ಯೆಂದು ಅಪ್ಪಣೆಯ ಕೊಟ್ಟು ಯಿಷ್ಟು ದಿವಸವೂ ನೀತಿ ಪದ್ಯಗಳನ್ನು ಕೇಳಿದೆವು | ವಿಶೇಷವಾಗಿ ಬುದ್ಧಿ ಮಾರ್ಗವಾಗಿ ನೀತಿಯ ಕೇಳಿದೆವಾಗಲಾಗಿ | ಆ ರೀತಿಯಲ್ಲಿ ನಡೆದುಕೊಳ್ಳಬೇಕು ಯೆಂದು ಸಾಮಂತರ ಬಲಕ್ಕಿಂತ ಅಧಿಕವಾಗಿ ಬಲವ ಕಟ್ಟಿ | ತುರುಕರ ಮಟ್ಟ ಮಾಡಬೇಕು ಯೆಂದು ಯೆಣಿಸಿದೆವು | ಯಿದಕ್ಕೆ ಯೇನು ಯೆಂದರೆ ಕೈ ಜಿತವಲ್ಲದೆ ಅವಕಾರ್ಯವಾಗದಾಗಲಾಗಿ | ಯೀಗ ಕೈಜಿತವಾಗಿ ಆನೆ ಕುದುರೆ ಕಾಲಾಳ ಸಾಲಾಳು ಕಟ್ಟಿ | ಆ ಸ್ತೋಮವ ಕೂಡಿಕೊಂಡು ಪಟ್ಟಣ ಪ್ರವೇಶವಾಗಬೇಕು ಯೆಂದು | ಅಪ್ಪಣೆ ಕೊಟ್ಟರಾಗಲಾಗಿ | ತಿಮ್ಮರಸಯ್ಯನು ಯಿನಿತು ಕಾರ್ಯಕ್ಕಾಗಿ | ದೇವರವರು ಬರಬಹುದೆ ಯೆಂದು | ಯೀ ಕ್ಷಣದಲ್ಲಿಯೆ ಚಿತ್ತಕ್ಕೆ ಬರುವ ಹಾಗೆ | ಆನೆ ಕುದುರೆ ಕಾಯಾಳು ಸಂತರಿಸಿ ಚತುರಂಗ ಬಲಸಹಿತವಾಗಿ ಪಟ್ಟಣಕ್ಕೆ ಚಿತ್ತೈಸಿ ಯೆಂದು ಬಿನ್ನಹಂ ಮಾಡಿದುದಕ್ಕೆ | ರಾಯರವರು ದಿನ ಕ್ರಮದಲ್ಲಿ ಅನುಕೂಲ ಮಾಡಿರು | ಯೀಗಲೆ ಅಮರಿಕೆಯಾಗುವ ಹಾಗೆ ಯತ್ನ ಕಂಡಿರು ಯೆಂದುದಕ್ಕೆ | ಯೀ ಕ್ಷಣದಲ್ಲಿಯೆ | ಅರಮನೆ ಆನೆ ಕುದುರೆ ಕಾಲಾಳು ಸಹಿತವಾಗಿ ಸಂಪಾದಿಸಿರು ಯೆಂದು ಬಿನ್ನಹಂ ಮಾಡಿದುದಕ್ಕೆ | ದೊರೆ ಮನ್ನೆಯರು | ಅಮರನಾಯಕರು | ರಾವುತರು | ರಾಣುವೆ ಯೆಪ್ಪತ್ತೆರಡು ವಿನಿಯೋಗದವರು ವೋಲಗಕ್ಕೆ ಬನ್ನಿಯೆಂದು ಕಂದಾಚಾರದ ಕರಣಿಕರ ಕರೆಸಿ | ಅವರ ಕೂಡೆ ಸಿಂಹಾಸನಕ್ಕೆ | ಅಮರನಾಯಕರ ಆನೆಗಳೆಷ್ಟು | ಕುದುರೆಗಳೆಷ್ಟು | ಕಾಲಾಳೆಷ್ಟು | ಯೆನ್ನಲಾಗಿ ಕರಣಿಕರು ಹೇಳಿದ್ದು | ಆನೆ ಘಟೆಗಳು ನೂರು | ಕುದುರೆ ಯೆಪ್ಪತ್ತ ನಾಲ್ಕು ಸಾವಿರ | ಕಾಲ್ಬಲ ಲಕ್ಷ ಅರುವತ್ತು ಸಾವಿರದ ಸ್ಥಿತಿ | ಯೆಪ್ಪತ್ತಾರು ಲಕ್ಷಕ್ಕೆ ಅಮರವನ್ನಾಳುತ್ತ ಯಿದ್ದಾರೆ ಯೆಂದು ಬಿನ್ನಹಂ ಮಾಡಿದುದಕ್ಕೆ | ಅವರ ಕೂಡೆ ರಾಯರವರು | ಅಮರದ ಆಳು ಕುದುರೆ ಆನೆಗಳನ್ನೂ | ಯಿಂದು ನಾಲ್ಕು ಘಳಿಗೆಯೊಳಗೆ ಯೆಣಿಕೆಗೆ ಬಾರದ ಕುದುರೆ ಆನೆಗಳಿಗೂ ಕಾಲಾಳಿಗೂ | ವೀರನೃಸಿಂಹರಾಯರವರು ಪಟ್ಟವ ಕಟ್ಟಿಕೊಂಡದಾರಭ್ಯ ಯೀವರೆಗೆ | ಹನ್ನೆರಡು ವರುಷಕ್ಕೂ | ಅವರ ಮೇಲೆ ರೊಕ್ಕವ ನಿಲುವು ಮಾಡಿ | ಯೀ ಕ್ಷಣಕ್ಕೆ ರೊಕ್ಕವ ಹರುವ ಮಾಡಿಸಿ ಯೆಂದು | ತಮ್ಮ ಮೇಲೆ ಹೊತ್ತ ರೊಕ್ಕಕ್ಕೆ ಕೊಡುವುದಕ್ಕೆ ಯೆರವಿಲ್ಲ | ಸೀಮೆಯ ಯೆಂಡಿನ ಹಾಗೆ ನಡೆಸಿದರೆ | ಯೀಗ ಯಿರುವ ಆನೆ ಕುದುರೆಗಳನ್ನೂ ಅರಮನೆಗೆ ಬೆಲೆ ಕಟ್ಟಿಕೊಟ್ಟ ಮೇಲೆ | ತಾವು ಸಂತರಿಸಿಕೊಂಡೇವು

ಯೆಂದು ಬಿನ್ನಹಂ ಮಾಡಲಾಗಿ | ಪ್ರೀತಿತು ಯೆಂದು ಅಮರಗಾರರ ಮೇಲಣ ನಿಲದ ಹಣವಿಗೆ | ಆನೆ ಕುದುರೆ ಬೆಲೆ ಕಟ್ಟಿಕೊಳ್ಳಲಾಗಿ | ಐನೂರು ಆನೆಯನ್ನೂ | ಹನ್ನೆರಡು ಸಾವಿರ ಕುದುರೆಯನ್ನೂ | ಅರುವತ್ತು ಸಾವಿರ ಕಾಲಾಳು | ದೊರೆಗಳನ್ನೂ ಅರಮನೆ ಹವಾಲಾಯಿತು | ಆನೆ ಕುದುರೆಗಳನ್ನು ಸಮ್ಮುಖದಲ್ಲಿ ನಿಲ್ಲಿಸಿ ಚಿತ್ತಬಂದವರಿಗೆ ಮನ್ನಿಸಿ ಯೆಂದು ಬಿನ್ನಹಂ ಮಾಡಲಾಗಿ | ರಾಯರವರು ಅಪ್ಪಾಜಿಯ ಕೂಡೆ| ಅಘಟನಾ ಘಟನ ಸಾಮರ್ಥ್ಯ ನಿನಗುಂಟು ಯೆಂದು | ಉಚಿತ ಸಪ್ತಾಂಗವನ್ನೂ| ಕುಲ್ಲಾಯಿ | ಕಬಾಯಿ | ತಾಳಿಚಾಕಳಿ ಪೀತಾಂಬರ | ಗಂಧ | ಕಸ್ತೂರಿ | ತಾಂಬೂಲ ಆದಿಯಾಗಿ ಕೊಟ್ಟು | ಕೈಸಂಬಳ | ಆನೆಗಳಿಗೆ ತುಳವ ಕೈ ಸಂಬಳ ಕುದುರೆಗಳಿಗೂ ಕುರುಬ ರಾವುತರಿಗೂ | [1]ಕಬ್ಬಿಲ[1] ರಾವುತರಿಗೂ | ಕಾತಾಳಿಗೂ ಸಂಬಳವ ಬರಿಸಿ | ಆ ತರುವಾಯದಲ್ಲಿ | ರಾಯರವರು ಮದ್ದಾನೆಯನೇರಿಕೊಂಡು | ಸಾಳುವ ತಿಮ್ಮರಸಯ್ಯನ ಹಿಂದೆ ಕುಳ್ಳಿರ ಹೇಳಿ | ಚತುರಂಗ ಬಲವನ್ನೂ ಕೂಡಿಕೊಂಡು | ಪಟ್ಟಣ ಪ್ರವೇಶವಾಗಿ | ಅಪ್ಪಾಜಿ ಮೊದಲಾದಂಥವರನ್ನು ಮನೆಗೆ ಕಳುಹಿಸಿ | ಅಪ್ತರ ಕೂಡೆ | ಸಾಳುವ ತಿಮ್ಮರಸಯ್ಯನಂಥ ನಿಯೋಗಿಯಿರಲಾಗಿ | ಪ್ರೊಂದು ದಿವಸದಲ್ಲಿ ಕೈಸಂಬಳದ ಬಲವ ಕಟ್ಟಬೇಕು ಅದು ಯಿಲ್ಲದೆಯಿದ್ದರೆ ಪಟ್ಟಣಕ್ಕೆ ಬಾರೆವು ಯೆಂದು [2]ಛಲ[2] ವಚನವಾಗಿ ಆಡಿದ ಹೊತ್ತಿಗು ತಾಳುವೆ ಉಂಟಾಗಿ | ಆ ಮೇರೆಗೆ ಅನುಕೂಲವ ಮಾಡಿದೆನು ಯೆಂದು | ಆ ಕ್ಷಣದಲ್ಲೇ ಆನೆ ೫೦೦ ಕುದುರೆ ೧೨೦೦೦ [3]ಕಾಲಾಳು[3] ೬೦೦೦೦ ಯಿವನ್ನೆಲ್ಲ ಸಮುಖಕ್ಕೆ ತಂದು | ಚಿತ್ತಬಂದವರ ವಶಕ್ಕೆ ಕೊಡಿ ಯೆನ್ನಲಾಗಿ | ನೋಡಿ | ಮುಂದೆ ತುರುಕಾಣ್ಯದ ಮೇಲೆ ಕಾರ್ಯವ ಮಾಡುವಂಥವರಾಗಿ | ಕರ್ನಾಟಕ ರಾವುತ ಮಾವುತರನ್ನೆ ಸಂತರಿಸಬೇಕು ಯೆಂಬ ದೃಷ್ಟಿಯಿಂದ ಕುರುಬ ರಾವುತರಿಗು | ಕಬ್ಬಿಲ ರಾವುತರಿಗು | ತುಳುವ ರಾವುತರಿಗು | ಮೊರಸ ನಾಡ ರಾವುತರಿಗು ಹನ್ನೆರಡು ಸಾವಿರ ಕುದುರೆಗಳನ್ನು ವೆಚ್ಚಮಾಡಿ | ಆನೆ ಕುದುರೆ ರಾವುತರಿಗು ಸಂಬಳ ಸಾರಿಗೆಯನ್ನೂ | ಆ ಲಾಯದ ಕುದುರೆ ಕಡಿವಳಗಳನ್ನೂ | ಪರಾಮರಿಸುವ ಹಾಗೆ ನಾಲ್ಕುಮಂದಿ ಪಾರುಪತ್ಯಗಾರರನ್ನು | ನಾಲ್ಕುಮಂದಿ ಕರಣಿಕರನ್ನು | ಹದಿನಾರುಮಂದಿ ಅಂಗಚಾಲರನ್ನು | ನಾಲ್ಕುಮಂದಿ [4]ಹಸ್ತಾಂತರದ[4] ಹಣವ ಕಟ್ಟುವವರನ್ನೂ | ಯೇರ್ಪಾಟುಮಾಡಿ | ಅಂದಂದಿಗೆ ಮುಟ್ಟದ ವೆಚ್ಚಕ್ಕೆ ರೊಕ್ಕವಾಗಿ ಕೊಡಿ ಯೆಂದು ಬೊಕ್ಕಸ[ದ]ಲ್ಲಿ ಸಿರಪ್ಪಣೆಯ ಮಾಡಿ|[5]ಆನೆಗಳ ತುಕುಡಿಯನ್ನು[5]| ಸ್ವದೇಶ ಮಾವುತರನ್ನು ಯೇರ್ಪಾಟು ಮಾಡಿ | ಅವರ ಸಂಬಳ ಸಾರಿಗೆಗಳು | ಆನೆ ದವಸ ಧಾನ್ಯ ಹುಲ್ಲು ಸೊಪ್ಪುಗಳಿಗೂ| ಯೆಣ್ಣೆ ತುಪ್ಪ ಕವಳಗಳಿಗೂ | ಗಜವೈದ್ಯ ಅಶ್ವವೈದ್ಯರಿಗೂ | ಕಡಮೆ ಯಿಲ್ಲದೆ

1 ತಬ್ಬಿಲ 2 ಚಲ 3 ಕುದುರೆ 4 ಹಸ್ತಾಂತ್ರ 5 ಆನೆಗಳು ತುಕುಂನ್ನು

ನಡೆಸುವ ಹಾಗೆ । ಆರುಮಂದಿ ಪಾರುಪತ್ಯಗಾರರನ್ನು । ಆರುಮಂದಿ ಕರಣಿಕರನ್ನು! ಹದಿನಾರುಮಂದಿ ಅಂಗಜಾಲರನ್ನೂ । ಅಂದಿಗಂದಿಗೆ ಮುಟ್ಟಿದ ವೆಚ್ಚಿಕ್ಕೆ ಬೊಕ್ಕಸ ದಲ್ಲಿ ಕೊಡಿ ಯೆಂದು ನಿರಪ್ಪಣೆ ಮಾಡಿದೆವು ಯೆಂದು । ಹಾಗೆ ಕಾಲಾಳು ಆರುವತ್ತು ಸಾವಿರಕ್ಕೆ ತಿಂಗಳು ತಿಂಗಳು ತಪ್ಪದೆ ಮಧ್ಯಾನ್ಹದ ಸಂಬಳ ಮೊದಲಾಗಿ ಎಂದು ವೊಬ್ಬ ಪಾರುಪತ್ತ್ಯೆಗಾರನ ಯೇರ್ಪಾಟು ಮಾಡಿದೆವು ಯೆಂದು ದೊರೆತನವನ್ನೂ ಪ್ರಭುತ್ವ ವನ್ನೂ। ಯೇರ್ಪಾಟು ಮಾಡಿ ಆಯಿತು । ಯೆಂದು ಅವರದವರು ಯಿಪ್ಪು ಆನೆ ಕುದುರೆಗಳನ್ನು ಕ್ರಯವ ಕಟ್ಟಿಕೊಡುವಾಗ ವೊಬ್ಬರಾದರೂ ಅನ್ಯಾಯವೆನ್ನದ ಹಾಗೆ । ಅವರವರ ಸನ್ನುತದ ಮೇಲೆ ಕ್ರಯವ ಕಟ್ಟಿ ಕೊಡುವಲ್ಲಿ । ವೊಂದು ಲಕ್ಷಕ್ಕೆ ಯಿಪ್ಪತ್ತರ ಲೆಕ್ಕದಲ್ಲೂ । ಐವತ್ತು ಘಟಿಗಳಿಗೆ ಮೂವತ್ತು ಲಕ್ಷವಾಯಿತು । ಕುದುರೆ ಕ್ರಯ ವೊಂದು ಸಾವಿರಕ್ಕೆ ಹತ್ತು ಕುದುರೆ ಲೆಕ್ಕ । ವೊಂದು ಲಕ್ಷಕ್ಕೆ ಸಾವಿರ ಕುದುರೆಯ ಲೆಕ್ಕದಲ್ಲೂ ಹನ್ನೆರಡು ಲಕ್ಷವಾಯಿತು । ಆನೆ ಕುದುರೆಗಳಿಂದ ಮುವತ್ತು ನಾಲ್ವತ್ತು ಲಕ್ಷ ಆದಾಯವಾಯಿತು । ಅನುವಾದ ಮನುಷ್ಯ ಉಂಟಾದರೆ ಸಕಲ ವನ್ನು ಸಂತರಿಸುವನು ಯೆಂದು ಅಪ್ಪಣೆ ಕೊಟ್ಟದ್ದಕ್ಕೆ । ಅಯ್ಯಪ್ಪರಸರು ಬಿನ್ನಹವ ಮಾಡಿದ್ದು । ಸಿಂಹಾಸನಸ್ತರಿಗೆ । ಸ್ತ್ರೀಯರನ್ನು । ರತ್ನಗಳನ್ನು ಉಂಟಾದುದು । ಅದಕ್ಕೆ ಅಂಥ ಅಧಿಕವು ಭೂಪತಿಗಳಿಗೆ ಯೆನ್ನಲಾಗಿ ನೀತಿ ಪದ್ಯ*

ಹೆಂಡತಿ ಭೂಮಿ ಪುರುಷರೆ ರತ್ನಗಳು ಯೆಂದು ನೀತಿಯಿದ್ದಿತಾದ ಕಾರಣ । ದೊರೆಗಳು ಆದಾರು ಅನುವಾದ ಪುರುಷ ರತ್ನವನ್ನು ಸಂತರಿಸಿದರೆ । ಆತನು ನವರತ್ನ ಗಳನ್ನು । ಪುರಂಧ್ರಿ ರತ್ನಗಳನ್ನು ಸಂತರಿಸಲಾಗುವನು । ಅಪ್ಪಾಜಿ ಸಾಧಾರಣ ನಿಯೋಗಿಯಲ್ಲ । ಅಘಟನಾ ಘಟನ ಸಾಮರ್ಥ್ಯವೂ ಉಂಟು । ಲೋಕದಲ್ಲಿ ಅಷ್ಟುಮಂದಿ ಮನುಷ್ಯರು ಯೆಲ್ಲರಿಗೂ ಅವಯವಗಳು ಸರಿ । ಯಿದರಲ್ಲಿ ಉತ್ತಮರು ಮಧ್ಯಮರು ಯೆಂದು ಯೇರ್ಪಾಟು ಮಾಡುವ[ದು]ಗುಣಾಧಿಕ್ಯದಿಂದ ಹೆಚ್ಚು । ಪಂಚ ಲೋಹಗಳೂ ಸರಿ । ಅವರೊಳಗೆ ಚಿನ್ನ ಹೆಚ್ಚಿನದು । ಯೆಂತದಕ್ಕೂ । ವೊಂದಕ್ಕೂ ಸರಿಬಾರದು । ಗುಣಾಧಿಕ್ಯವೇ ಅಧಿಕವೆಂದು ಯೆಣಿಸಿದ ಹಾಗೆ । ಮನುಷ್ಯರೊಳಗೂ ಅಧಿಕರು ತಿಳಿಯಬೇಕು । ಶ್ಲೋಕ।*

ನೂರು ಮಂದಿಯಲ್ಲಿ ಒಬ್ಬ ಶೂರನಿಹನು । ಸಾವಿರ ಮಂದಿಯಲ್ಲಿ ವೊಬ್ಬ ಪಂಡಿತನಿಹನು । ಲಕ್ಷ ಮಂದಿಯಲ್ಲಿ ವೊಬ್ಬ ಪ್ರಸಂಗಿಯಿಹನು । ಕೊಡುವಂಥ ತ್ಯಾಗಿಯು ಉಂಟೋ ಯಿಲ್ಲವೋ ಯೆಂಬ ನೀತಿ ಪ್ರಕಾರ ನಿರ್ವಾಹಕರು ವೊಬ್ಬ ರೊಬ್ಬರಲ್ಲದೆ । ಲಕ್ಷ ಮಂದಿಗೂ ಆ ಗುಣಗಳು ಯೇತಕ್ಕೆ ಬಂದಾವು ಯೆಂದು ।

---

* ಪದ್ಯವ, ಶ್ಲೋಕವ, ಉಲ್ಲೇಖವಿಲ್ಲ

ಆಪ್ತರಾಗಿ ಮಾತುಕತೆಗಳನಾಡುತಿರಲಾಗಿ ವಿಜಯಾಪುರದಲ್ಲಿ ಯಿರುವ ಮಾರೀಚ ರಾಮಯ್ಯ ಬಂದು ವಿಜಯಾಪುರಕ್ಕೆ ಹೋಗಿ ಪಟ್ಟಣವೂ ಹೊರಪಾಳ್ಯವೂ ಕೋಟಿ ಕೊತ್ತಳಗಳೂ । ರಾವುತ ಮಾವುತರನ್ನು । ಆನೆ ಕುದುರೆ ಕಾಲಾಳು । ಅಮರ ನಾಯಕ ಮೊದಲಾದವನ್ನು ನೋಡಿ । ಅರಮನೆ ಬಾಗಿಲಿಗೆ ಹೋಗಿ । ಮಹಲು ಮುಂದೆ ದಿವಾಣದಲ್ಲಿ । [1]ಆ ವಜೀರರು[1] । ದೊರೆಗಳು ದಂಡೋಪಂಡಿತ ಮೊದಲಾಗಿ ಯಿದ್ದ ನಿಯೋಗಿಗಳು । ಅವರ ಹತ್ತಿರ । ಕುರುಬನ ಮಲುಕ । ನಿಜಾಮ ಸಾಹೇಬ ರವರ ಹೊಜಿಬರು । ಮುದ್ದಾ ಪಂಡಿತರು । ದತ್ತೋ ಪಂಡಿತರು । ಬಾಹುಬಲೇಂದ್ರ ನವರು । ಬ್ರಹ್ಮಾಪಂಡಿತರು । ಮುಂತಾದವರು ಕುಳಿತು ಆಲೋಚನೆಯ ಮಾಡಿದ್ದು । ಕರ್ನಾಟಕ ಸಿಂ[ಹಾ]ಸನಕ್ಕೆ ನೂತನವಾಗಿ । ಕೃಷ್ಣರಾಯರ[ನ್ನು] । ಅಧಿಷ್ಠಾಸ ಕರ್ತರ ಮಾಡಿದಾರಭ್ಯ । ಅವರು ತುರುಕರ ಮೇಲೆ ಕಾರ್ಯವ ಮಾಡಬೇಕೆಂದು । ಆಲೋಚನೆಯ ಮಾಡಿ । ಅದಕ್ಕೆ ತಕ್ಕ ಯತ್ನಗಳನ್ನು ಮಾಡುತ್ತಯಿದ್ದಾರೆ ಯೆಂಬ ವಿವರಗಳಾಗಿ । ವಿಜಯನಗರದಿಂದ ಕಾಗಜಗಳು ಬರೆದು ಬಂದವು । ಅಶ್ವಪತಿ । ಗಜ ಪತಿ । ನರಪತಿಗಳೊಳಗೆ । ನರಪತಿಯು ಸಿಂಹಾಸನವಧಿಕ । ಕಡಮೆ ಯೆರಡು ಸಿಂಹಾಸನದವರು । ಅವರ ಬೆನ್ನ ಹಿಂದೆ ಯೆಂದು ಹಿರಿಯರು । ಕಿರಿಯರು । ಆಲೋಚನೆಯ ಮಾಡಿದುದಕ್ಕೆ । ಗೋಲಕೊಂಡೆಯವರ ಮುದ್ದಾ ಪಂಡಿತರು ತಾವು ಸುಮ್ಮನೆ ಯಿದ್ದರೆ ಕಡಮೆ ಯೆಂದು । ಯೆಣಿಸಿ ಸೀಮೆ ಸಂಬಂಧಗಳಿಂದ ಸರಿಯಲ್ಲವೋ । ಆನೆ ಕುದುರೆ । ರಾವುತ ಮಾವುತರು ಶೌರ್ಯ ಬಲುಮೆಯಿಂದ ಸಮಾನವಲ್ಲವೋ । ಸಾಮಗ್ರಿಯಲ್ಲಿ ದುರ್ಗದಲ್ಲಿ ಕಡಮೆ ಯೇನು ಯಿದ್ದೀತು ಯೆಂದುದಕ್ಕೆ । ದಂಡೋ ಪಂಡಿತರು । ಅಲ್ಲದೆ ಮತ್ತೇನು । ಯಿದರೊಳಗೆ । ಹೆಚ್ಚು ಕಡಮೆ ಯೆಣಿಸಲವಕಾಶ ಯೇನು ಯಿದ್ದೀತು । ಯೆಂದು ಮೂರನ್ನೂ ಯೇಕ ವಾಕ್ಯತೆಯಾಗಿ ಆಡಿದುದಕ್ಕೆ । ಬಾಹು ಬಲೇಂದ್ರರವರು । ಬ್ರಹ್ಮಾ ಪಂಡಿತರು ಅವರ ಕೂಡೆ । ಮೂರು ಸಿಂಹಾಸನ ಯೆಂಬುದು ಬ್ರಹ್ಮ ವಿಷ್ಣು ಮಹೇಶ್ವರರಾಗಿ ಯಿಹದು । ಅದರಲ್ಲಿ ತಾರತಮ್ಯಗಳು । ಆವ ರೀತಿಯಲ್ಲಿ । ಅಶ್ವಪತಿ ಕುದುರೆಗಳಿಗೆ ಅಧಿಪತಿ । ಆನೆಗಳಿಗೆ ಗಜಪತಿ ಅಧಿಪತಿ । ಕರ್ನಾಟಕ ಸಿಂಹಾಸನಾಧಿಪತಿ ಮನುಷ್ಯರಿಗೆಲ್ಲರಿಗೂ ಅಧಿಪತಿ । ಆಗಲಾಗಿ ಭಗವಾ ನನು । ವೊಬ್ಬ । ನರರೊಳಗೆ ನರಾಧಿಪನು ಯೆಂಬ ವಚನದಿಂದ । ಆ ರಾಜ್ಯದಲ್ಲಿ । ದೇವಾದಾಯ ಬ್ರಹ್ಮಾದಾಯ । ಪುಣ್ಯತೀರ್ಥಗಳು ಉಂಟಾಗಿ । ನದಿಗಳು ಕೊಳ ಗಳು ಉಂಟಾದ್ದು । ಆ ರಾಜ್ಯದಲ್ಲಿ ವಿಷ್ಣು ಪ್ರತ್ಯಕ್ಷವಾಗಿ । ವೆಂಕಟಾಚಲದಲ್ಲಿ ಯಿದ್ದಾರೆ । ಹಾಗೆ ಆಗಲಾಗಿ । ಕರ್ನಾಟಕ ಅಧಿಪತಿ ಪುಣ್ಯಶ್ಲೋಕರು । ಆ ತರು ವಾಯದಲ್ಲಿ । ಗಜಪತಿ ಸಿಂಹಾಸನ ಜಗನ್ನಾಥ ಭಕ್ತರಾದ ಕಾರಣ । ಯೆರಡನೆ

---

1 ಆವಜ್ಜಿರರು

ಪರಿಯಾಯ । ಆ ತರುವಾಯದಲ್ಲಿ । ಅಶ್ವಪತಿಯವರೂ । ಗಂಗಾತೀರದಲ್ಲಿ । ವಿಶ್ವ
ನಾಥರ ರಾಜ್ಯದೊಳಗೆ ಯಿರುತ್ತಾ ಯಿದ್ದಾರೆ । ಅವರ ಬಗೆಯವರಾಗಿ । ಯೆದುಲ
ಶಾಹ । ನಿಜಾಮುಶಾಹ । ಕುತುಬಶಾಹ । ಈ ಮೂರು ಬಗೆಯವರು । ಯಿವರು
ಕರ್ನಾಟಕಾಧಿಪತಿಯ ಕೂಡೆ ಸರಿಯನ್ನಬಹುದೆ ಯೆಂದು ಮಧ್ಯಸ್ತ ಭಾವರಾಗಿ
ಯೆಂದುದಕ್ಕೆ । ದಂಡೋ ಪಂಡಿತರು । ಮುಗೋ ಪಂಡಿತರು । ದಾಬೋಜಿ
ಪಂಡಿತರು । ಮೂ[ವ]ರು ನಿಯೋಗಿಗಳೂ ಯೇಕವಾಕ್ಯವಾಗಿ । ತಮ್ಮ ದೊರೆಗಳು
ಮದ್ಯಪಾನಿಗಳು । ಬ್ರಾಹ್ಮಣ ವಿಶ್ವಾಸವೂ ಯಿಲ್ಲ । ಮ್ಲೇಚ್ಛರು ಗೋಹಿಂಸಕರು ।
ಅವರೂ ವೋಲೈಸಿದವರಾಗಲಾಗಿ ದೂರುಗಳ ವಿಚಾರಿಸಿಕೊಳ್ಳಲವಕಾಶವೂ ಯಿಲ್ಲ ।
ಅಹಂಕಾರ ಗುಣಗಳಿಗೆ ಯೆನ್ನಬೇಕಾಗಿ ಯೆಂದೆವಲ್ಲದೆ । ಬ್ರಹ್ಮಪಂಡಿತರು ಹೇಳಿದ್ದೆ
ಯಥಾರ್ಥವಾಗಿ । ಯೆಣಿಸಿದವರಾಗಿ । ಆಮೇಲೆ ಮಂತ್ರಾಲೋಚನೆಯಾಗಿ ।
ಮಾತನಾಡಿದ್ದು । ಕರ್ನಾಟಕರಸರ ಹದ್ದನ್ನೂ ಮೀರಿಬಂದರೆ । ಗಜಪತಿಯವರಿಗೂ
ಅಸದಳ । ಆ ರೀತಿ ಬಾರದ ಹಾಗೆ ಅದಕ್ಕೆ ಆದಂಥ ಯತ್ನವ ಕಂಡು । ಸರಹದ್ದಿನ
ದುರ್ಗಗಳಿಗೆ ರಸ್ತು ಸಾಮುಗ್ರಿಯ ಹಾಕಿಸಬೇಕು । ಬಲವಂತವಾಗಿ । ಆನೆ ಕುದುರೆ
ಗಳು ಯಿರಬೇಕೆಂದು । ಆಲೋಚನೆಯ ಮಾಡಿದವರಾಗಿ ಯೆದುಲಶಾಹರ ಕೂಡೆಯೂ ।
ಅಭಿಪ್ರಾಯಗಳ । ಅರಿಕೆ ಮಾಡಲಾಗಿ । ಆಗ್ರಹ ಬಿದ್ದು । ಕರ್ನಾಟಕದವರು ।
ತುಂಗಭದ್ರೆಯ ದಾಟಿ ಬಂದರೆ ಯೀ ವರೆಗೂ । ಯೀಶ್ವರನಾಯಕ । ನರಸನಾಯಕ
ವೀರ ನೃಸಿಂಹರಾಯರು ಆಳಿದಂಥ । ಅದಕ್ಕಿಂತ ಕೃಷ್ಣರಾಯರು ಆಳುವಂಥದ್ದು
ಯೇನು ಯಿದ್ದೀತು ಯೆಂದು ಆಡಿದುದಕ್ಕೆ । ದತ್ತೋಪಂಡಿತರು ಮೊದಲಾದವರು
ಯೆಂದ ಮಾತು । ರಾಜನೀತಿ ಮೇರೆಯಲ್ಲಿ ಯಿದ್ದ ಯತ್ನಗಳಿಂದ ಯಿರಲಾಗಿ ।
ದೈವ ಸಹಾಯವೂ ತಿಳಿಯದಲ್ಲ । ನಿಜಾಮು ಶಾಹರೂ ಕುತುಬನ ಮುಲುಕನವರೂ ।
ವಿಜಯನಗರದಿಂದ ಕಾಗಜಗಳು ಬರೆದು ಬಂದ ಕಾರ್ಯಗಳ ಕೇಳಿ । ಆಲೋಚನಾ
ಪರರಾಗಿ । ಯಿಲ್ಲಿಗೆ ಕಾಗಜಗಳ ಕಳುಹಿಸಿ[ದ]ರಾಗಲಾಗಿ । ಯೀ ಮೂರು ಬಗೆ
ಯವರ ಗುರಿ ಮನುಷ್ಯರು ಆಲೋಚನೆಯ ಮಾಡಿ । ಬಾಹು ಬಲೇಂದ್ರನವರು ।
ಬ್ರಹ್ಮಾ ಪಂಡಿತರು । ಅವರವರ ಸರಹದ್ದು ದುರ್ಗಗಳ[ಲ್ಲಿ] ರಸ್ತು ಮುಸ್ತೈದೆಗಳ
ಹಾಕಿಸಿ । ಬಲವಂತವಾಗಿ ಯಿರುವ ಹಾಗೆ ಆನೆ ಕುದುರೆಗಳನ್ನು । ಮಾವುತರನ್ನು
ಕಳುಹಿಸುವವರಾಗಿ ಯಿದ್ದಾರೆ । ನಾವೂ । ಯಿಕ್ಕೇರಿ । ಬಸವಾಪಟ್ಟಣದ ಸಕಲ
ನಾಯಕ । ಕೆಂಗಿ ನಾಯಕ । ಹರಡಿ ಕುಮಾರರು ಬೇಡ ರಾಮಪ್ಪನವರ ಸರಹದ್ದು
ಸ್ಥಳಗಳಿಗೆ । ರಸ್ತು ಸಾಮುಗ್ರಿಗಳ ಹಾಕಿ ಯೆಂದು ಕಳುಹಿಸಬೇಕು ಯೆನ್ನಲಾಗಿ ।
ಆ ರೀತಿಯಲ್ಲೇ ವಿಜಯಾಪುರದ ಕೋಟೆ ಕೊತ್ತಳಗಳ ಚೆನ್ನಾಗಿ ಮಾಡಿ ರಸ್ತು
ಸಾಮುಗ್ರಿಗಳ ಹಾಕಿ ಯೆಂದು ಮಂದಲಿಸಲಾಗಿ । ಬಾಗಿಲ ಪಾರುಪತ್ಯಗಾರರು ಯೆಂಟು
ದಿನಗಳಿಂದಲೂ ನಿದ್ರಾಹಾರಗಳು ಯಿಲ್ಲದೆ । ಮೊದಲ ದೊರೆ ಯಾವಾಗ ಬಂದು

ೋಡಿಯಾನೋ ಯೆಂದು | ಭಯದಿಂದ | ಜಾಗರೂಕರಾಗಿ | ಕೋಟೆ ಕೊತ್ತಳಗಳ ೆನ್ನಾಗಿ ಮಾಡಿಸಿ | ಫಿರಂಗಿಗಳು ಜಬರಜಂಗಿಗಳು | ಕೈಗಲ್ಲುಗಳು | ಲಗ್ಗೆಯ ಗುರಡುಗಳು | ಹುಲಿತಲೆಗಳು | ಕೋಟೆಯ ಹೊರಗೆ ಕುದುರೆಗಳು | ನಿಲ್ಲುವಂಥ ಕಲ್ಲುಗಳು ಹಾಕಿಸುವುದನ್ನು ಹಾಕಿಸಿದೆ | ಬೇಹಿನವರನ್ನೂ ಕಳುಹಿಸಿ | ಆ ದಿಕ್ಕಿನಲ್ಲಿ ಆ ದಿವಸದ ಪ್ರವರ್ತಕಗಳ ತಮ್ಮ ಕೂಡೆ ಹೇಳಿ ಯೆಂದು ಅರುವತ್ತು ಮಂದಿ ಬೇಹಿನ ವರನ್ನು | ವಿದ್ಯಾನಗ[ರ]ಕ್ಕೆ ಕಳುಹಿಸಿದರು | ವಿಜಯಾಪುರದ ದೇಶದಲ್ಲಿ ಯಿದ್ದ ಪ್ರಜೆಗಳು | ಆಲೋಚನೆ ಪರರಾಗಿ ಯಿದ್ದಾರೆ ಯೆಂದನು | ಪಟ್ಟಣದಲ್ಲಿ ಅವರವರು ಆಡಿಕೊಂಬ ವಾರ್ತೆಗಳು | ಕಂಡು ಕೇಳಿದ್ದು ಯೆಲ್ಲವನ್ನೂ ಬಿನ್ನಹಂ ಮಾಡಲಾಗಿ | ರಾಯರವರು | ಅಪ್ಪಾಜಿ | ಅಯ್ಯಪ್ಪರಸರು | ಕೊಂಡಮರಸರವರನ್ನು ಕೇಳಿ | ವಿಜಯಾಪುರ ಅಹಮುದಾನಗರ ಗೋಲಕೊಂಡೆಯ ವರೆಗೆ ಯಿಲ್ಲಿ ಯಿರುವ ಸ್ಥಾನ ಪತಿಗಳು | ನಡೆದಂಥ ಸುದ್ದಿಗಳಿಗೆ ಬರೆದು ಕಳುಹಿಸಿ [1][ಅದರ][1] ಯೆಚ್ಚರಿಕೆಯುಂಟಾಗಿ ಯಿಪ್ಪರ ಆಲೋಚನೆಯ ಮಾಡಿ | ಎದುಲಶಾಹಗೆ ತಿಳುಹಿದ್ದರಿಂದ | ಆತನ ಸರಹದ್ದು ಸ್ಥಳಗಳಿಗೆ ರಸ್ತು ಸಾಮುಗ್ರಿಯಗಳ ಕಳುಹಿಸಿದರು | ಅದರ ಯೆಚ್ಚರಿಕೆಗಳಿಗೂ ಭಾಗ್ಯ ಬಲಗಳಿಗೂ ಸರಿಯುಂಟೆ ಯೆಂದು ಬೇಹಿನವರಿಗೆ ಉಡುಗೊರೆಗಳ ಕೊಟ್ಟು | ವಿಜಯ ಪುರದಲ್ಲಿಯೆ ಯಿದ್ದು | ಆ ದಿವಸದ ಸುದ್ದಿಗಳಿಗೆ ಚೆನ್ನಾಗಿ ತಿಳಿದು ಬರಹೇಳಿ ಕಳುಹಿಸಿ | ಸಮೀಪದಲ್ಲಿ ಯಿದ್ದ ಊಳಿಗದವರನ್ನು ಕಡೆಗೆ ಹೋಗು ಯೆಂದು ಸಾಮಾಧಿಕರೂ | ರಾಯರವರೂ ಆಲೋಚನೆಯಾಗಿ ಮಾತನಾಡಿಕೊಂಡ ವಿವರ |

ನಾವೂ ಅಪ್ಪಾಜಿ ಮೊದಲಾದ ಸಾಮಾದಿಕರೂ ವದಂತಿಯಾಗಿ ತುರುಕಾಣ್ಯದ ಮೇಲೆ | ಕಾರ್ಯವ ಮಾಡಬೇಕು ಯೆಂದು ಯೆಣಿಸಿದ ಆಲೋಚನೆಗಳಿಗೆ ಆ ಬಗೆಯ ಸ್ಥಾನಪತಿಗಳು ಬರೆದು ಕಳುಹಿಸುವುದು ನೀತಿ | ಆ ಸುದ್ದಿಗಳ ಕೇಳಿ ನಾವು ದಳವೆತ್ತಿ ನಡೆದು ಸರಹದ್ದಿಗೆ ಬಂದರೆ | ಆಗ ನಡೆಸುವಂಥ ಕಾರ್ಯಗಳನ್ನು | ಅವರು ಯೀಗಲೇ ನಡೆಸುತ್ತ ಯಿದ್ದಾರಲ್ಲಾ | ಯಿದು ಧೈರ್ಯದ ಮೇಲೆ ನಡೆಸುವುದೋ | ಭಯದ ಮೇಲೆ ಅಂಕೆ ಪಟ್ಟು ಯೆಚ್ಚರಿತುಕೊಂಬುದೋ ಯೆಂದು ಕೇಳಿದ್ದಕ್ಕೆ | ಅಪ್ಪಾಜಿ ಯೆಂದ ವಿವರ | ಪ್ರಭುವಾದಂಥವರು | ಕೇಳುವ ಸುದ್ದಿಗಳ ಕೇಳುವರು | ಸರಹದ್ದಿನಲ್ಲಿ ಸಮೀಪವಾಗಿ ಯುದ್ಧಕಾರ್ಯವಾದರೆ ಗಟ್ಟಿಯಾಗಿ ಠಾಣ್ಯವ ಯಿರಿಸಿ | ರಸ್ತು ಮುಸ್ತೈದೆಗಳ ಹಾಕಿಸಿ ಯಿರುವರಾಗಲಾಗಿ | ಯೀ ವೇಳೆಗೆ ಅಪ್ರಸಂಗಗಳ ನೆನೆಯದೆ ನಾಲ್ಕಾರು ದಿವಸದ ಹಿಂದೆ | ಸರಹದ್ದು ನೋಡುವುದಕ್ಕೆ ಆ ಸೀಮೆಯ ಅಧಿಪತಿ ಬರುತ್ತ ಯಿದಾನೆ ಯೆಂದು ವದಂತಿಯ ಹುಟ್ಟಿಸಿ | ಆ ಸ್ಥಳದವರು ತಮ್ಮ ದೊರೆ ಬರುತ್ತ ಯಿದಾನೆ ಯೆಂದು ವದಂತಿಯ ಹುಟ್ಟಿಸಿ | ಕೋಟೆ ಕೊತ್ತಳಗಳನ್ನು |

---

1 ಅದ

ರಸ್ತು ಮುಸ್ತೈದೆಗಳನ್ನು | ಅತಿ ಯೆಚ್ಚರಿಕೆಯಿಂದ ಯಿರಬೇಕು ಯೆಂದು ಸ್ಥಳದವರು
ಸಂತರಿಸಿ ಹಾಕುವ ಹಾಗೆ ನಡೆಸುವುದು ಗಂಹರವಲ್ಲದೆ ಯೀ ರೀತಿಯಲ್ಲಿ ನಡೆಸು
ವಂಥಾದ್ದು ಅಲ್ಲ | ಬುದ್ಧಿ ಚಂಚಲತ್ವದಿಂದ ನಡೆಸುವಂಥ ಪ್ರಯೋಜನಗಳು
ಯೆಂದಾಡಿದರೆ | ಅಯ್ಯಪ್ಪರಸರು | ಕೊಂಡಮರಸರು | ಮಂದಲಿಸಿದ್ದು | ತುರುಕ
ರೆಂಬುವರು ಮದ್ಯಪಾನಿಗಳು | ಮದ್ದು ತಿಂಬವರು | ಲಹರಿ ಪುರುಷರಾಗಲಾಗಿ |
ಅವರಿಗೆ ಭೀತಿ ಬಹಳ | ಮದ್ದಿನಿಂದ ಗುಂಡಿಗೆ ಹೊಡೆದು ಯಿಹುದು [1]ಅಪೀಮನ್ನು[1]
ಪಾನ ಮಾಡುತ್ತಲೆ ಹೊತ್ತು ತಂದ ಶರೀರವೂ ತಾವೂ ಅರಿಯದೆ ಯಿಹರು | ದೇಹ
ಸ್ಮರಣೆಯ ಅರಿಯರು | ಆ ಸಮಯದಲ್ಲಿ ಯಾರು ಅಡ್ಡಲಾದರೂ ಕಡಿವರು |
ಕಲಿಯುಗ ರಾಕ್ಷಸರ ಅಪ್ಪಂದಕ್ಕೆ ಯಿದು ದೇಹ ಸ್ಮರಣೆ ತಿಳಿದ ತರುವಾಯ |
ತಮ್ಮ ತಮ್ಮ ಅವಸ್ಥೆಗಳು ಯಿಂಥಾವು | ತಮ್ಮ ಜಾತಿಯವರು ಅಂಥಾವರು |
ಬ್ರಾಹ್ಮಣರು ಉಪ್ಪು ಹುಳಿ ಕೂಡಿ ಊಟ ಮಾಡುವರಾಗಲಾಗಿ ಅವರಿಗೆ ಮದ
ಮತ್ಸರಗಳು ಯಿಲ್ಲ ಯೆಂದು ಯೆಣಿಸಿ | ಪಾರುಪತ್ಯವನ್ನೆಲ್ಲ | ಅವರನ್ನೆ ಮಾಡಿ
ಯೆಂದು ತಮ್ಮ ಆಣೆ ಆಜ್ಞೆಯ ವೊಳಗೆ ನಡೆಸುತ್ತ | ಅವರ ಮಾತಿನ ಮೇಲೆ |
ನಾಮಚಾದು ಆಗುತ್ತ ಅನರು ತೆಗೆದು ಬಾಯೆಂದರೆ ತೆಗೆದು ಬಾಹಾಗೆ ಯೇರ್ಪಾಟು
ಮಾಡಿ | ತಾವೂ | ಅವರ ಬುದ್ಧಿಯ ವೊಳಗೆ ನಡೆವರು | ಹಾಗೆ ಆಗಲಾಗಿ
ನಿಯೋಗಿಗಳು | ಅವ ರೀತಿಯಲ್ಲಿ ನಡೆಸಿದರು ಆ ರೀತಿಗೆ ನಡೆವುದು | ನಿಯೋಗಿಗಳು
ಯೆರಡು ವಿಧವಾದರೆ | ದೊರೆಯಿಂದ ತಮ್ಮ ಪ್ರಾಣಗಳು ಹಾನಿ | ದೊರೆತನಕ್ಕು
ಚಲನವಹುದು | ಅದು ಕಾರಣ ಯೇಕಮುಖವಾಗಿ ಆ ಮೂರು ಬಗೆಯ ನಿಯೋಗಿ
ಗಳೂ | ಆಲೋಚನೆಯ ಮಾಡುತ್ತ ನಡೆಸುವ ಕಾರ್ಯ ಯೆಂದು ತಿಳುಹಲಾಗಿ |
ಅಪ್ಪಾಜಿ | ಆ ದೊರೆಗಳು ಸ್ವಾಧೀನರಲ್ಲ | ಪರಾಧೀನರು | ಸ್ವಾಮಿಯವರು ಉಭಯಾ
ಯತರು | ಅದು ಕಾರಣ ದೇವರವರ ಆಲೋಚನೆಗೆ ಸರಿಬಾರದು | ತುರುಕರು
ಮೂರು ಬಗೆಯವರೂ ಆಲೋಚನಾಪರರಾಗಿ | ಕಾರ್ಯಮುಖಕ್ಕೆ ನಡೆದರೆ | ಲಕ್ಷವೂ
ಅಯ್ವತ್ತು ಸಾವಿರ ಕುದುರೆಯೂ | ಸಾವಿರದ ಐನೂರು ಮದ್ದಾನೆಯೂ | ಮೂರು
ಪಾಯದಳವೂ | ತುರುಕರ ಜಯಿಸುವುದಕ್ಕೆ ಅದಕ್ಕಿಂತ ದ್ವಿಗುಣ ಬಲವಂತದಿಂದ
ಜಯಿಸಬೇಕು | ಕರ್ನಾಟಕದಲ್ಲಿ ಅಷ್ಟು ಕುದುರೆ ಮಂದಿ ಸಂತರಿಸುವ ಭೂಮಿಯಲ್ಲಿ |
ಚತುರಂಗ ಬಲವನ್ನು ಯಿರಿಸಬೇಕು | ಯಿಂದಿಗೆ ಕೈ ಸಂಬಳದ ಕುದುರೆ ಹನ್ನೆರಡು
ಸಾವಿರ | ಅಮರಗಾರರ ಕುದುರೆ ಯಿಪ್ಪತ್ತನಾಲ್ಕು ಸಾವಿರ | ಕೈಸಂಬಳದ ಆನೆ ನೂರು
ಘಟಿಗಳು | ಕಾಲುಬಲ ಐದು ಲಕ್ಷ ಕೂಡಿ | ಯೀ ವಿಧದಲ್ಲಿ ಜಗಳವ ಮಾಡಿಸುವುದ
ರಿಂದ ತುರುಕರ ಕಾರ್ಯ ಯೆಂಬುದೆಷ್ಟು ಯೆಂದು ಬಿನ್ನಹವ ಮಾಡಲಾಗಿ | ರಾಯರ

---

1 ಅಪಿನಿಯಂನು

ವರು ಸಾಮಾಜಿಕರ ಕೂಡೆ ಧೈರ್ಯದಿಂದ ಲಕ್ಷ್ಮೀಕಟಾಕ್ಷದಿಂದ | ದೈವ ಸಹಾಯದಿಂದ | ಧರ್ಮದಿಂದ ಜಯವಹುದು ಯೆಂದು ಅಪ್ಪಣೆ ಕೊಟ್ಟದ್ದಕ್ಕೆ | ನೀತಿಯ ಕೇಳಿದರೆ | ಅದು ಹೇಗೆ ಯೆಂದರೆ | ಶ್ಲೋಕ*

ಯೆಲ್ಲಿ ಧೈರ್ಯವಿಹುದೋ ಅಲ್ಲಿ ಲಕ್ಷ್ಮಿ ಯಿಹಳು | ಯೆಲ್ಲಿ ಲಕ್ಷ್ಮಿಯಿರುವಳೋ ಅಲ್ಲಿ ಹರಿಯಿಹನು | ಅಲ್ಲಿ ಧರ್ಮವೂ ಯಿಹುದು | ಅಲ್ಲಿ ಜಯವೂ ಯಿಹುದು ಯೆಂದು ಹಿರಿಯರು ಹೇಳುವರು | ಯೆಲ್ಲರಿಗೂ ಧೈರ್ಯವೇ ಪ್ರಧಾನವು | ನೀವು ಧೈರ್ಯಶಾಲಿಗಳು ಆಗಲಾಗಿ ನೀವು ಮಾಡಿದ ಕಾರ್ಯವೆಲ್ಲವೂ ಕೈಗೂಡುವುದು | ಆನೆ ಕುದುರೆಗಳ ಬಲವು ಕಾರಣವಲ್ಲ | ದೈವ ಸಹಾಯದಿಂದಲೆ ರಾಜ್ಯಗಳು ದ್ವೀಪಗಳು ಸಂಪಾದನೆಯ ಮಾಡಬೇಕು | ಆರು ಮಂದಿ ಚಕ್ರವರ್ತಿಗಳು ತಾವು ಯಿದ್ದ ಸ್ಥಳದಲ್ಲಿಯೇ ಯಿದ್ದು | ಆಜ್ಞಾಶಕ್ತಿಯಿಂದ | ಸಪ್ತ ದ್ವೀಪಗಳನ್ನು ಆಳಿದರು | ಆಮೇಲೆ ಹದಿನಾರುಮಂದಿ ರಾಯರು ಭೂಮಿಯನ್ನಾಳಿದರು | ಆ ರೀತಿಯಲ್ಲೆ ವೆಂಕಟೇಶ್ವರನ ಸಹಾಯ ಉಂಟುಯೆಂದು ತಿಳುಹಲಾಗಿ | ಕೇಳಿದವರಾಗಿ | ಮುಂದಣ ಕಾರ್ಯಕ್ಕೆ ಅನುಸಾರವಾಗಿ ನಡೆಸಿ ಯೆಂದು | ಅನ್ನಾ[ಜಿ]ಮೊದಲಾದಂಥವರ ಕೂಡೆ ಅಪ್ಪಣೆಯ ಕೊಟ್ಟಂಥವರಾಗಿ ದಿಕ್ಕುಗಳಿಂದ ಮೋಲೆಕಾ[1] [ರ][1]ಗಳು | ಬೇಹಿನವರು | ಆರಾದರೂ ಬಂದರೆ ಯೆಂದು ಪರಾಮರಿಸಲಾಗಿ | ಅಮುದಾನಗ[ರ]ದಿಂದ ಬೇಹಿನ ರಾಮನು | ಬೇಹಿನ ಗೋಪಾಜಿ ಯೆಂಬುವನು | ಬಂದು ಯಿದ್ದಾರೆಂದು ತಿಳುಹಲಾಗಿ | ಸಮೀಪದಲ್ಲಿ ಯಿದ್ದವರನೆಲ್ಲರನ್ನು ಕಡೆಗೆ ಕಳುಹಿಸಿ | ಬೇಹಿನವರನ್ನು ಕರೆಸಿ ಕೇಳಲಾಗಿ | ಅವರು ವಿಜಯನಗರದಿಂದ ಹೊರಟ ಆರಭ್ಯವೂ ಅಮುದಾನಗರ | ಗೋಲಕೊಂಡೆ ಪ್ರವೇಶವಾಗುವ ಪರ್ಯಂತರವೂ | ನಿತ್ಯ ಪಯಣ ಗತಿಗಳನ್ನೂ ಊರುಗಳನ್ನೂ ಪಟ್ಟಣಗಳನ್ನೂ | ಆ ಸರಹದ್ದಿನಲ್ಲಿ ಯಿರುವವರನ್ನು | ಪರಸ್ಥಳದ ಸೀಮೆಯವರನ್ನು | ಪರದೇಶಿಗಳನ್ನು ಶೋಧಿಸುವುದು | ಮೋಲೆ[2]ಕಾರ[2] ಕಾಗಜಗಳು ಯಿದ್ದರೆ ಹಿಡಿದು ಮೊದಲ ಸ್ಥಳಕ್ಕೆ ಕಳುಹಿಸುವುದನ್ನು | ಪಟ್ಟಣ ಪ್ರವೇಶವಾದ ಮೇಲೆ | ಹೊರಪಾಳ್ಯವ ನೋಡಿ | ಕೋಟೆವಳಯಿಂಕೆ ಹೋಗುವಾಗ ಅರಿಕೆ ಉಳ್ಳವರು ಬಂದು ಕರೆದುಕೊಂಡು ಹೋದರೆ ಹೋಗುವುದು | ಅಲ್ಲದೆ ಯಿದ್ದರೆ ಹೋಗಲೀಸರು | ಕೋಟೆಯೊಳಗಣಿಂದ ತಿಳಿದವರು ಬಂದರೆ | ತಮ್ಮ ತಮ್ಮವರೂ ಯೆಂದು ಯಿವರಿಂದ ವೈಷಮ್ಯಗಳು ಬಂದರೆ ತಾವೆ ತಪ್ಪು ಉಳ್ಳವರು ಯೆಂದು ಹೇಳಿದ ಮೇಲೆ ಕೈಮೇಲೆ ಮುದ್ರೆಯೊತ್ತಿ ಕೋಟೆಯೊಳಗಿಂದ ಕಳುಹಿಸುವರು | ಆ ಮುದ್ರೆಯ ತೋರಿಸಿದರೆ ಕಡಮೆ ಬಾಗಿಲವರು ಕೋಟೆಯೊಳಗಿಂದ ಕಳುಹಿಸುತ್ತಾರೆ| ತಳವಾರರಿಗೆ ಆ ಮುದ್ರೆಯ ತೋರಿಸಿ ಪಟ್ಟಣದಲ್ಲಿ ಸಂಚರಿಸಬೇಕು | ಕೋಟೆಯೊಳಗೆ ಯಿದ್ದವನ್ನು

*ಶ್ಲೋಕ ಉಲ್ಲೇಖವಿಲ್ಲ 1, 2·

ದಿವಸ ಯಿದ್ದು | ತಿರುಗಿ ಷೀಮೆಗೆ ಹೋಗುವಾಗ ಆ ಕೋಟೆಬಾಗಿಲವರಿಗೆ ಮುಪ್ರಿ
ತೋರಿಷಿದ ತರುವಾಯದಲ್ಲಿ ಮತ್ತೆ ಕಳುಹಿಸುವರು | ಯಿಂಥ ದುರ್ಘಟಯೆಲ್ಲವನ್ನು
ತಿಳಿದು | ಪಟ್ಟಣದಲ್ಲಿಯೂ | ಅರಮನೆ ಬಾಗಿಲಲ್ಲಿಯೂ| ದೊರೆಗಳ ಮನೆಗಳಲ್ಲಿಯೂ|
ರಾಜಬೀದಿಯ ಮಾರ್ಗದಲ್ಲಿಯೂ | ಅಲ್ಲಲ್ಲಿ ನಿಂತು ಆಶ್ಚರ್ಯಕರವಾದರೆ ನೋಡಿ
ಬಂದು | ತುರುಕರ ಪಟ್ಟಣವು ಯಮಪುರಿ | ಅವರ ವೋಲ್ಕೈಷಿದವರು ಯಮದೂತರು|
ತಳವಾರರ ಬಾಗಿಲಲ್ಲಿಯೆ ದಿನ ೧ಕ್ಕೆಗೆ (?) ಆಜ್ಞೆಮಾಡುವದು | ನಡುವಿಗೆ ಹರಿಯ
ಹುಯ್ಯುವುದು| ಗರಗಸದಲ್ಲಿ ಮನುಷ್ಯರ ಕುಯ್ಯುವುದು | ಗೋಣಿಯೊಳಗೆ ಮನುಷ್ಯರ
ಹಾಕುವದೂ | ಗುದಿಗೆಯಲ್ಲಿ ಕೊಲ್ಲುವುದು | ಕಾಲು ಕೈ ಕಿವಿ ಮೂಗುಗಳ ಕೊಯ್ಯು
ವುದು | ಯಿದಲ್ಲದೆ ಬಾಧೆಗಿಕ್ಕುವುದು | ಭಯಂಕರವಾಗಿ ಯಿಹುದು | ಯಿದಲ್ಲದೆ
ಮಣಿಹಗಾರರನ್ನು ಅನೇಕ ಬಾಧೆಗಳ ಮಾಡುವುದೂ | ಆನೆಕಾಲಿಗೆ ಕಟ್ಟಿ ಯೆಳೆಸು
ವುದು | ಅಷ್ಟರೊಳಗೆ ಅರಮನೆಗೆ ಹಣಗಳ ಕೊಟ್ಟರೆ ಪ್ರಾಣಸಹಿತ ಬಿಡುವರು |
ಗತಿಯಿಲ್ಲದೆ ಬೀದಿಯಲ್ಲಿ ಸತ್ತನಾದರೆ | ಅವನ ನೋಡುತ್ತಲೇ ಸಂಗಡಲೆ ಬಂದು |
ಆಧಿಪತ್ಯಕ್ಕೆ ವ್ಯಾಪಾರಿಗಳು ಬಂದು | ಉಡುಗೊರೆಯ ಹೋದವರು | ಮೊದಲು
ದೊರೆಯ ಬಲವಂತರನ್ನು ಸಾಯಕೊಲ್ಲು ಯೆಂದರೆ | ಕೊಂದು ಪೆಟ್ಟನಲ್ಲೆ ಸಾಯ
ಕುಟ್ಟುವರು | ಆ ಮೇಲೆ ಯೆಷ್ಟು ಪೆಟ್ಟು ಕುಟ್ಟು ಯೆಂದರೂ | ಕೊಲ್ಲುವರು |
ದಿವಾಣದ ಬಾಗಿಲಲ್ಲಿ ಬಿಚ್ಚುಕತ್ತಿಯವರು | ಬೆತ್ತದ ಕೋಲಿನವರು | ಗುದಿಗೆ
ಕೈಯವರು | ಹೊಸ ಮನುಷ್ಯರ ಕಂಡರೆ ಆ ಕ್ಷಣವೆ ಕೊಲ್ಲುವರು | ಅವರ ನೋಡಿದಾ
ಕ್ಷಣ ಮೈ ನಡುಗುವುದು | ಆ ರೀತಿಯ ಬಾಗಿಲಲ್ಲಿ ಹೋಗಿ ದೊರೆಗಳು ಮನ್ನೆಯರು |
ವಜೀರರು | ರಾವುತರು | ಮಾವುತರುಗಳು | ನಿಯೋಗಿಗಳು ಮೊದಲಾದ ಯೆಪ್ಪತ್ತ
ಯೆರಡು ದಿನ ಹೋಗದವರಿಗೂ | ಅವರವರು | ಯಿರುವುದಕ್ಕೆ ವೊಂದೊಂದು
ತಾಕು ಯೇರ್ಪಾಟುಮಾಡಿರುವರು | ಅಷ್ಟು ಚಾವಡಿಗಳನ್ನೂ ಅರಮನೆಗೆ ಯಿದಿರಾಗಿ
ಕಟ್ಟಿಯಿಹರು | ಆಗಲಾಗಿ ಮೊದಲ ದೊರೆ ಮಿತ ಪರಿಜನದಲ್ಲಿ ವೋಲಗವಿದ್ದು |
ವೋಲಗ ತೀರಿ ಅರಮನೆಯೊಳಗಿಂದ ಹೋಗುವಾಗ | ಉದ್ದವಾಗಿ ಯಿದ್ದ ಮಾರ್ಗ
ವಿಹುದಾಗಿ | ಅಲ್ಲಿ ಆ ಚಾವಡಿಯವರು | ಕೈಮುಗಿಯಲಾಗಿ | ನೋಡಿ | ಅವರ
ವರಿಗೆ ನಿತ್ಯಗಟ್ಟಲೆ ಬಹುಮಾನ | ಸನ್ಮಾನಗಳ ನಡೆಸುವ ಕ್ರಮಗಳಿಗೆ | ಆ ಕೆಲಸ
ದವರು | ರೊಕ್ಕ ಉಡುಗೊರೆಗಳು | ದಟ್ಟಿ ಕಬಾಯಿಗಳು | ಅದಕೆ ಯೆಲೆ ಮೊದ
ಲಾದದ್ದು | ಮೊದಲ ದೊರೆ ನೋಡಲಾಗಿ | ಅವರವರಿಗೆ ಕೊಡಲಾಗಿ ಸಕಲವಾದಂಥ
ವರನ್ನೂ ವೋಲಗವ ಮಾಡಿ ಮನೆಗೆ ಹೋಗುವರು | ಅರಮನೆ ಬಾಗಿಲಲ್ಲಿ ಫಕೀರ
ರಿಗು | ಅವಧೂತರಿಗು ಅಡ್ಡಿ ಅಂಕೆಯಿಲ್ಲದೆ ಯೇರ್ಪಾಟುಮಾಡಿ ಯಿರಲಾಗಿ |
ಯೆಷ್ಟು ಮಂದಿ ಯಿದ್ದರೂ ಅವರಿಗೆ ಗ್ರಾಸಗಳ ಕಟ್ಟುಮಾಡಿಯಿಹರು | ಅವರ ನೋಡಿ
ಅರಮನೆಯೊಳಕ್ಕೆ ಹೋಗುವರು | ನಿಯೋಗಿಗಳು | ದಿಕ್ಕುಗಳಿಂದ ಬಂದ ವೋಲೆ

ತಾಳಿಗಳ ನೋಡಿ | ಕಾಗಜಗಳ ವೋದಿ[ಸಿ] ಕೇಳಿ | ಆಲೋಚನೆಯ ಮಾಡಲಾಗಿ
ಹೇಳಿದ ಕಾರ್ಯ | ಅಕ್ಬ್ರಪುರಿ | ವಿಜಯಾಪುರ | ಅಮದಾನಗರ | ಗೋಲಕೊಂಡೆ
ಮೇಲೆ ಕಾರ್ಯವ ಮಾಡು ಯೆಂದು ಮೂರು ಲಕ್ಷ ಕುದುರೆ ನಾಮಜಾದು ಮಾಡಿ
ದರು | ಅವರು ಬಂದರೆ | ಅವರವರ ಕೂಡೆ | ಹೋರಿಯಾಡುವದಲ್ಲದೆ ಅದೆ ಕಠಿಣ
ವಾಗಿ ಯಿಹುದು | ಉತ್ತರದಲ್ಲಿ ಅಕ್ಬ್ರಪುರಿಯವರು | ದಕ್ಷಿಣದಲ್ಲಿ ಕರ್ನಾಟಕದ
ವರು | ಮೂಡಗಡೆಯಲ್ಲಿ ಗಜಪತಿಯವರು | ಕಾಣಿಸಿಕೊಂಬ ಹಾಗೆ ಯಿದ್ದಿತು |
ಅಶ್ವಪತಿ ಗಜಪತಿ ನರಪತಿಗಳ ಸಿಂಹಾಸನಗಳಿಗೆ ಮೂರಕ್ಕು | ವಿರೋಧವಾದವರು |
ಆರಿಗೂ ಕಂಡು ವೋಲೈಸುವಂಥವರಲ್ಲ | ಸಿಂಹಾಸನಗಳಿಗೆ ಗುರಿಯಿಲ್ಲದೆ ಯಿರಲಾಗಿ|
ಮೂರುಬಗೆ ರಾಜ್ಯದಲ್ಲೂ ಆಕ್ರಮಿಸಿ ಕೊರಳ ಬಲವಂತದಲ್ಲಿ | ದಿನಗಳ ಕ್ರಮಿಸುತ್ತ
ಯಿದ್ದಾರೆ । ಅವರ ಕೂಡೆ ಅವರು ಅನ್ಯೋನ್ಯವಾಗಿ ಕಾರ್ಯವ ಮಾಡು ಯೆಂದು |
ತಮ್ಮ ತಮ್ಮ ಸರಹದ್ದಿನಲ್ಲಿ ಇರುವಂಥವರನ್ನೇ ಕಾಣಿಸಿಕೊಳ್ಳಿಯೆಂದು | ನಾಮ
ಜಾದು ಕಳುಹಿಸಲಾಗಿ | ಅವರ ಕೂಡೆ ಹೋರಿಯಾಡ ಶಕ್ಯವಲ್ಲ । ತಾವು ಮಾಡಿದ
ಅದೃಷ್ಟದಿಂದ ತಮ್ಮ ದೊರೆಗಳ ಪಾಲಲ್ಲಿ ಯಿಹ ಕರ್ತರವರ ಕೃಪೆಯಿಂದ | ಅಂತರ
ಮನ್ನೆಯರಾಗಿ ಅರುವತ್ತೆಪ್ಪತ್ತು ವರುಷದಿಂದ | ಭೂಮಿಗೆ ಅಧಿಪತಿಯಿಲ್ಲದೆ ಯಿತ್ತಾದ
ಕಾರಣದಿಂದ ಯೆದುಲಶಾಹ । ಕುತುಮನ ಮುಲಕ । ನಿಜಾಮುಶಾಹ | ಯೆಂಬ
ಹೆಸರು ಉಂಟಾಗಿ ಯಿದ್ದಿತು | ಸಿಂಧು ದೇಶದಿಂದ ಗೋದಾವರಿ ಪರಿಯಂತರವೂ
ಅಕುಪರನು | ಕೇರಳ ಆರಭ್ಯವೂ ಕೃಷ್ಣವೇಣಿ ಪರ್ಯಂತರವೂ | ಕರ್ನಾಟಕದವರು
ಜಗನ್ನಾಥದಿಂದ ಜೆಡಂದ ಕೋಟಿ | ಕಟಕ ಪರಿಯಂತರವೂ | ಗಜಪತಿಯವರು
ಆಳುವರು | ಯೀ ಮೂರು ಸಿಂಹಾಸನದವರಿಗೂ ಸಲುವದಲ್ಲದೆ ಆಡವಿಗಸಾಧ್ಯವಾದ
ದುರ್ಗಗಳು ಕೈವಶವಾಗಿ ಯಿದ್ದಾವಾಗಲಾಗಿ | ತ್ರಿಪುರದ ಹಾಗೆ ಯಿದ್ದಾವೂ ಯೆಂದು
ತಮ್ಮೊಳಗೆ ತಾವು ಆಲೋಚನೆಯ ಮಾಡಿ | ತಾತ್ಮಲಕಮತ್ತಿ ಯೆಂಬ ಆತನು
ಅವರ ಕೂಡೆ | ನೀವು ಹೇಳಿದ್ದು ಯಥಾರ್ಥವಹುದು | ತ್ರಿಪುರದೊಳಗಿದ್ದ ಬಲ
ವಂತರು ಸ್ವೇಚ್ಛಾಗಮನ ಉಂಟಾಗಿ | ಆರಿಂದಲಾದರೂ ವೊಬ್ಬನಿಂದ ಲಯವಿಲ್ಲದ
ವರವ ತೆಗೆದುಕೊಂಡು | ಹನ್ನೆರಡು ಸಾವಿರ ವರುಷಕ್ಕೆ ವೊಂದು ಸಾರಿ | ಮೂರು
ಮುಕ್ಕಾಲು ಗಳಿಗೆ ಕೂಡದು | ಆ ಆಲೋಚನೆಯ ಮಾಡಿ | ಯೆಂದಿನ ಹಾಗೆ
ಯಥಾಯಥವಾಗಿ ಹೋಗುವರು | ಅಂಥ ತ್ರಿಪುರಾಧಿಪತಿಗಳಿಗೆ ಕಾಲ ಕೂಡುವಂದಿಗೆ |
ಭೂಮಿದೇವಿ | ಸರ್ವೇಶ್ವರರ [1]ಕೂಡನೂ[1] | ಬ್ರಹ್ಮಸಭೆ [2]ಯಲ್ಲೂನು[2] | ಧರ್ಮಪರ
ಮೊದಲಾದವರು ತಿಳುಹಲಾಗಿ | [3]ಬ್ರಾಹ್ಮ ರಿಪುಗಳವರ[3] ವೊಬ್ಬರೊಬ್ಬರಿಂದ
ನಿಗ್ರಹಿಸ ಶಕ್ಯವಲ್ಲ | ನೀನು ರಥವಾಗಿ | ವೇದಗಳು ಕುದುರೆಯಾಗಿ | ಮೇರು

1 ಕೂಡುಂಸ್ನು 2 ಯಲುಂಸ್ನು 3 ಬ್ರಾಂಹ್ಮ ರಿಪುರಗಳವರ

ಬಿಲ್ಲಾಗಿ | ಆದಿಶೇಷನು ಹೆದೆಯಾಗಿ | ಕ್ಷೀರಾಬ್ಧಿ ನಾರಾಯಣ ಅಸ್ತ್ರವಾಗಿ | ರುದ್ರ
ರಥಿಕರಾಗಿ | ತ್ರಿಪುರಗಳ ಹರಿ ಹಾಕುವಾಗ | ಆ ದಾನವರು ನಾಶವಾಗಿ ಹೋಗುವರ
ಯೆಂದು ಅನುಗ್ರಹಿಸಿ ಯಿದ್ದಿರಿ | ಆ ರೀತಿಯಲ್ಲೆ ವಿಜಯಾಪುರ | ಅಮದಾನಗರ
ಗೋಲಕಂಡೆ ಯೆಂಬ ಪುರಗಳಲ್ಲಿ | ಮೂರು ಸಿಂಹಾಸನದವರು ಆವಾಗ ಕಾಣಿಸಿಕೊಳ್ಳು
ತ್ತಾರೆಯೋ ಆಗ ಅವಾಂತರವಾಗುವುದು ಯೆಂದು ತಾತ್ತ್ರಲಕವಾತ್ತಿ ತಿಳುಹಲಾಗಿ
ನಿಯೋಗಿಗಳು ಯೆಲ್ಲರೂ ಆ ರೀತಿಯಹುದು | ಯುದ್ಧ ದಿನಕ್ಕೆ ರಾಜಲಕ್ಷಣವ
ನಮ್ಮನು ನಡೆಸಬೇಕಾಗಿ ಕರ್ನಾಟಕ ಸಿಂಹಾಸನಕ್ಕೆ ಕೃಷ್ಣರಾಯರವರು | ಅಧಿಷ್ಠಾನ
ಕರ್ತರಾದಾರಾಭ್ಯ | ತುರುಕಾಣ್ಯದ ಮೇಲೆ ದೃಷ್ಟಿ ಯಿರಿಸಿ | ಕಾರ್ಯವ ಮಾಡುವ
ಆಲೋಚನೆಯಾಗಿ ಅಲ್ಲಿ ಇದ್ದ ಮುಖಾಮಿಗಳು ಕಾಗದಗಳ ಕಳುಹಿದರು | ಅದ
ನಿಮಿತ್ತ ಆಲೋಚನಪರರಾಗಿ | ಹಾನಿ ವೃದ್ಧಿಗಳಿಗು ಪ್ರೊಳಗಾಗಿ ಯೆದುಲ ಶಾಹ
ರವರಿಗೆ | ಬರೆದು ಕಳುಹಿಸಿದೆವು | ಅವರು ತಮ್ಮ ತಮ್ಮ ಸರಹದ್ದಿನವರಿಗೆ | ರಷ್ಟ
ಸಾಮಗ್ರಿಯ ಕಳುಹಿಸಿ ಗಡಿ ಠಾಣ್ಯಗಳು ಬಲವಂತವಾಗಿ ಯಿರುವುದಕ್ಕೆ ನಾಮಜಾದ
ಕಳುಹಿಸಿ | ಮೊದಲ ಸಲಕ್ಕೆ ಅತಿ ಯೆಚ್ಚರಿಕೆಯುಂಟಾಗಿ ಯಿದ್ದಾರೆಂದು ಬರೆದ
ಬಂತು | ನಮ್ಮ ಯೆರಡು ಬಗೆಯುವರನ್ನು ಸೀಮೆ ಸರಹದ್ದಿನಲ್ಲಿ ಯಿದ್ದ ದುರ್ಗಗಳಿಗೂ
ಕೋಟೆ ಸ್ಥಳಗಳಿಗೂ ತಕ್ಕವರ ಕಳುಹಿಸಿ ಕರ್ನಾಟಕದವರ ಸೇನೆ ಸಾಮಂತ[ರ]
ಕೂಡಿ | ಸ್ಥಳವ ತೆರಳಿ | ಸರಹದ್ದಿಗೆ ಬರುವರಾಗಿ | ವೊಂದು ಪ್ರದೇಶದಲ್ಲಿ ವೋಲೆ ಕಾಗದ
ಬಂದರೆ | ಆಗ ಅದಕ್ಕೆ ತಕ್ಕ ಆಲೋಚನೆಯ ನಡೆಸಿಕೊಂಬ | ಅಂದಂದಿನ ಸುದ್ದಿಯ
ತಿಳಿದು ಬಂದು ಹೇಳು ಯೆಂದು ನೂರ ಯೆಪ್ಪತ್ತು ಮಂದಿ ಬೇಹಿನವರ ಪಯಣವ
ಮಾಡಿ[ಸಿ] | ಅಮದಾನಗರದವರು | ಗೋಲಕೊಂಡೆಯವರು ಕಳುಹಿಸಲಾಗಿ | ಅವರು
ವಿದ್ಯಾನಗರಕ್ಕೆ ನಾನಾ ವಿಧವಾಗಿ ಬಂದು ಯಿದ್ದಾರೆ ಯೆಂದು | ಕಾರ್ಯವಂಟೆದರೆ
ಜಯಾಪಜಯವು ಆವ ರೀತಿಯೋ ಯೆಂದು | ದೈವಜ್ಞರು ಜ್ಯೋತಿಷರು
ಬ್ರಾಹ್ಮರು | ಭೂತ ಭವಿಷ್ಯದ್ವರ್ತಮಾನಗಳ ಹೇಳುವ ಶಕುನಗಾರರನ್ನು ಕೇಳಿದರೆ |
ಅವರು | ಇವರು ಕರ್ನಾಟಕದಲ್ಲಿ ವಿಷ್ಣು ಅಂಶವಾಗಿ | ನರಪತಿ | ಯೀ ಗಜಪತಿಯ
ರಾಜ್ಯವೆಲ್ಲ | ಜಯಸ್ತಂಭವ ಹಾಕಿ | ತಿರುಗಿ ಹೋಗುವಾಗ | ಮದುವೆಯಾಗಿ ವೆಂಕ
ಟೇಶ್ವರನ ದರ್ಶನ ಮಾಡಿ | ನೂರೆಂಟು ತಿರುಪತಿಗಳಲ್ಲಿ ಯೆಪ್ಪತ್ತೇಳು ಶಿವಸ್ಥಾನಗಳಲ್ಲಿ
ಸೇವಿಸಿ ಸೇತುವಿನಲ್ಲಿ ಕತ್ತಿಯ ತೊಳೆದು ಕರ್ನಾಟಕದ ಸಿಂಹಾಸನದಲ್ಲಿ ಪರಾಮರಿಸಿ |
ಸ್ವಾಮಿಯವರ ಪ್ರತಾಪದಿಂದ | ಮ್ಲೇಚ್ಛರಾದವರು | ಅವರ ಅರಮನೆಯಲ್ಲು |
ರಾಜ್ಯದಲ್ಲು [1]ಮೂರು ಭಾಷೆ[1] ಭೂಮಿಯಲ್ಲು ಮಹಾಪ್ತ್ರ | ಗುಜ್ಜರಿ | ಗರಿಜ (?) |
ಗಾ[ನಾ?]ಯಕರ ಕೂಡೆ ಕಲಹ [2]ಕುಸ್ತಿ[2]ಯಾಗಿ | ಕಷ್ಟ ಬೀಳದೆ ಸಂಚರಿಸ

1 ಮೂರಭಾಷೆ 2 ಕಸ್ತಿ

ಪಟ್ಟಣಕ್ಕೆ ಬಂದಿರಷ್ಟೆ | ಅಲ್ಲಿದ್ದಂಥಾ ಶತ್ರು ಬಡ ಮನುಷ್ಯರಾದಂಥವರಿಗೆ ಹೋಗಿ
ಬರತಕ್ಕನೆ ಯೆಂದು | ಅರಮನೆ ಬೇಹಿನವರಿಗೆ ವೊಬ್ಬ ವೊಬ್ಬರಿಗೆ ನೂರು ಹೊನ್ನ
ಕೊಟ್ಟು ಯೆಂದಿನ ಹಾಗೆ ಆ ಪಟ್ಟಣದಲ್ಲಿ ಸಂಚರಿಸಿ | ನಾನಾ ಪ್ರವರ್ತಕಗಳನು
ತಿಳಿದು ಬಂದು ಬಿನ್ನಹಂ ಮಾಡಿ ಯೆಂದು ಕಳುಹಿಸಿ | ಸಮೀಪದಲ್ಲಿ ಯಿದ್ದವರ ಕಡೆಗೆ
ಹೋಗ ಹೇಳಿ | ರಾಯರವರು | ಸಾಮಾಧಿಕರ ಕೂಡೆ | ವಿಜಯಾಪುರದ ವರ್ತ
ಮಾನವನ್ನು | ಅಮದಾನಗರ ಗೋಲಕೊಂಡೆ ವರ್ತಮಾನವನ್ನು ಕೇಳಿದಿರಿಯಲ್ಲ |
ಆ ಯೆರಡು ಮನೆಯವರಿಗೂ ಬಹಳ ಆಲೋಚನೆ ಹುಟ್ಟಿ ಯಿಷ್ಟೊಂದು ವರ್ತಮಾನ
ಗಳಿಗೆ ಕಾರಣವೇನು ಯೆಂದು ಕೇಳಿದರೆ | ಯೀವರೆಗೆ ಯೆಲ್ಲಿಯೂ | ತುರುಕಾಣ್ಯದ
ಮೇಲೆ ಕಾರ್ಯವ ಮಾಡಬೇಕು ಯೆಂಬ ವದಂತಿ ಹುಟ್ಟಿದ್ದಿಲ್ಲವಾಗಲಾಗಿ | ಯೀ
ಸಿಂಹಾಸನದಿಂದ ತುರುಷ್ಕರ ವಿಚಾರವಿಲ್ಲದ ಹಾಗೆ ಸುಮ್ಮನೆ ಯಿದ್ದರಾಗಲಾಗಿ |
ನೀವು ಸಿಂಹಾಸನಕ್ಕೆ ಕರ್ತ[1]ರಾಗಿದ್ದಾಗಿನ[1] ಕ್ಷಾತ್ರಗಳ ಕಾಣಿಸಿ | ಮಾತುಗಳಾಗಿ
ಅಪ್ಪಣೆ ಕೊಟ್ಟರೆ | ಶತ್ರುಗಳಾದವ[2]ರಿಗೆ[2] ಆಲೋಚನೆ ಹುಟ್ಟಿದೆಯಿಹುದೆ | ನೀವು
ಆ ಮೂರೂ ಬಗೆಯವರ ಮುಖಾಮಿಗಳ ಕೂಡೆ | ವಿಶೇಷ ವಾರ್ತೆಗಳಾಗಿ ಅಪ್ಪಣೆ
ಕೊಟ್ಟರೆ | ಅವರು ಬುದ್ಧಿಶಾಲಿಗಳಾಗಲಾಗಿ | ತಮ್ಮ ಆಳಿದವರೆಂದೂ | ನೀವೆಂದೂ
ಭೇದವಿಲ್ಲ | ಅಂಥಾಪ[3]ತ್ತಿ[3]ನಲ್ಲಿ ಹಿಂದೆ ಸಿಂಹಾಸನಸ್ಥರಾದವರು ಮಾಡಿದ ಸಂಬಳ
ಸಾರಿಗೆಗಳ ಕೊಡಿಸಿ | ದಿಕ್ಕು ದಿಕ್ಕಿನ ಸ್ಥಾನಪತಿಗಳ ಕೂಡಿಕೊಂಡು | ವೋಲಗಕ್ಕೆ
ಬಂದರೆ | ವೋಲೆ ಕಾಗದಗಳು ಉಂಟಾದರೆ [4]ಮಾತುಕತೆಗಳು ನಡೆದಿದ್ದ ಹೊತ್ತಿನಲ್ಲೂ[4]
ಯೆಂದಿನ ಮರ್ಯಾದೆಯಲ್ಲಿ | ಅಡಕೆ ಯೆಲೆ ಕೊಟ್ಟು ಕಳುಹುವರು | ಈಗ ಆ
ರೀತಿಯಿಲ್ಲದೆ ಸ್ವಾಮಿಯವರು ಪಟ್ಟಾಭಿಷಿಕ್ತರಾದಾರಭ್ಯ ವೋಲೈಸಿದವರಿಗೂ | ರಾವುತ
ರಾಣುವೆಗೂ | ಬೊಕ್ಕಸದಿಂದ ರೊಕ್ಕ ರೂಪುಗಳ ಕೊಡಿ ಯೆಂದು ಕಟ್ಟಳೆಯ
ಮಾಡಿ | ಕೈಸಂಬಳವ ನಿಲಿಸಿ | ಮೊದಲು ಅಮರದೊರೆ | ಸೀಮೆ ಸಂಬಂಧಗಳನು
ನಡೆಸಿ | ಅರಮನೆ ನಿಯೋಗಿಗಳಿಗೂ ಪರಸ್ಥಳದ ನಿಯೋಗಿಗಳಿಗೂ | ಸನ್ಮಾನ ಬಹು
ಮಾನಗಳ | ಉಚಿತವಾಗಿ ರೊಕ್ಕ ರೂಪುಗಳ ಕೊಟ್ಟು | ಆ ಮೂರೂ ಬಗೆಯವರ
ವಿಷಯದಲ್ಲಿ | ಹಿತವಾಗಿ ಮಾತನಾಡುತ್ತಲಿದ್ದರಾದ ಕಾರಣ ಆ ಮೂರು ಬಗೆ[ಯ]
ನಿಯೋಗಿಗಳೂ | ಕರ್ನಾಟಕದಲ್ಲಿಯೆ ಬಹುಕಾಲದಿಂದ ಯಿದ್ದರಾಗಲಾಗಿ | ನೀತಿಗಳ
ಕೇಳಿ ವೋದಿಯಿರುವರಾಗಲಾಗಿ | ಆಲೋಚನಾಪರರಾಗಿ ಬರೆದು ಕಳುಹಿಸುತ್ತಾರೆ
ಯೆಂದುದಕ್ಕೆ | ರಾಯರವರು | ನಾವು ಅವರ ಕೂಡೆ | ಆಗ್ರಹ ಬಿದ್ದು ಆ ರೀತಿ
ಯೀ ರೀತಿ ಯೆಂದು ಅಪ್ಪಣೆ ಕೊಟ್ಟವರಲ್ಲ | ಅವರು ಆಳಿದವರ ಮರ್ಯಾದೆಯಾಗಿ |
ಅವರನ್ನು ಯೆಣಿಸಿ ಸನ್ಮಾನ ಬಹುಮಾನಗಳಾಗಿ ವಿನಯವಾದ | ಸರಸ ಸಲ್ಲಾಪ

---

1 ರಾಗಿದಾನ 2 ರು 3 ಟ್ಟ 4 ಮಾತುಕಥೆಗಳಿಗು ದಡದಿದ್ದ ಹೊತ್ತಿಗು

ಗಳಾಗಿ | ಅನ್ನುವೆಯಾ ಯೆಂದು ಅಪ್ಪಣೆ ಕೊಟ್ಟುದಕ್ಕೆ | ಅಯ್ಯಪ್ಪರಸರು | ಸ್ವಾಮಿ
ಯವರು ವಿನಯಪೂರ್ವಕವಾಗಿ ಅಪ್ಪಣೆ ಆವಾಗ ಆಡಿದರೋ | ಅದೇ ಯೀ ಪರಿ ತಾನ
ಯೆಂದು ಯೆಣಿಸಬಹುದು ! ಅದು ಹೇಗೆ ಯೆಂದರೆ ನೀತಿ ಪದ್ಯ* | "ಘನವಾದಂಥವನ
ವಿನಯವ ನುಡಿದರೆ | ಆ ಮೇಲೆ ವಿನಯವು ವಿಪರೀತವಾಗುವದು | ಬಿಲ್ಲು ಬಿಗ
ವಂಥಾದ್ದು | ಯಿದಿರಾದಂಥವರನ್ನು ಖಂಡಿಸುವುದು" ಯೆಂಬ ಅರ್ಥವಾಗಲಾಗಿ | ಅದ
ವಿಚಾರಿಸಿ | ತಮ್ಮ ಮೇಲೆ | ಅಷ್ಟು ಕ್ರೂರವಿಲ್ಲ ಯೆಂದು ತಮ್ಮ ದೊರೆಗಳ ಮೇಲ
ಅಷ್ಟು ದೃಷ್ಟಿ ಬಂದು ಯಿದ್ದಿತು ಯೆಂದು ಯೆಣಿಸತಕ್ಕಂಥದ್ದಾಗಲಾಗಿ | ಕಂಡ
ಕಾರ್ಯ ಕೇಳಿದ ಸುದ್ದಿಯು ಹೃದಯಾಲೋಚನೆಯನುಮಾನವಾಗಿ ಬರಲಾಗ
ಚಾಣಕ್ಯ ನೀತಿಯಾಗಲಾಗಿ ಅರಿತು ನಡೆವರು | ಅಲ್ಲಿಯವರು ಆ ಕಾಗದಗಳ ನೋಡಿ |
ಆಲೋಚನೆಯ ಮಾಡತಕ್ಕ ಸುದ್ದಿಗಳ ಪರಿಶೋಧಿಸಿ ಬಂದು ಹೇಳಿದರು ಯೆಂದು
ಸಾಮಾಧಿಕರು ಬಿನ್ನಹಂ ಮಾಡಿದರಾಗಲಾಗಿ | ರಾಯರವರು ಮುಂದೆ ನಾವು ನಡೆಸುವ
ಕಾರ್ಯಕ್ಕೆ ಕಾರಣವು ತೋರುತ್ತ ಯಿದ್ದಿತು | ಅಪ್ಪಾಜಿ ಮೊದಲಾದಂಥವರನ್ನು
ಮನೆಗೆ ಕಳುಹಿ | ಅಯ್ಯನ ಮೂಲಕ | ಅಂಕು ಶಂಖಾನ(?) ರಾಣಾ ಜಗದೇವ |
ಗನ್ನಿ ತಿಮ್ಮನಾಯಕ | ಪೆಮ್ಮಸಾನಿ | ರಾಮಲಿಂಗನಾಯಕ | ಶಂಕಳನಾಯಕ |
ಶಾಲಿನಾಯಕ | ಹಂಡೆ ದೇವಣ್ಣ | ಪ್ರತಾಪ ರಾವು | ಗುಜ್ಜರಿ ಬಸವಂತ ರಾವು ಪುರುಷ
ನಾಯಕ | ಕುಮಾರ ತಿಮ್ಮಪ್ಪ | ನಂಜಪ್ಪ | ಹುಚ್ಚಮಲ್ಲ ರಾವುತ | ಬೇಡರ ರಾಮಪ್ಪ |
ಹರಿವಾಣದ ಕುಮಾರರಾದ ಹದಿನೆಂಟು ಮಂದಿ ಕಂಪಣದವರು | ಡಣಾಯಕ |
ಅಪ್ಪರಸಪಿಳ್ಳೆ | ಕುಪ್ಪರಪಿಳ್ಳೆ | ಸಾಳುವ ನಾಯಕ | ಪ್ರಧಾನಿ ತಿಪ್ಪರಸ | ಸುಬ್ಬಯ್ಯ |
ಅಪ್ಪಿನಾಯಕ | ವಿಶ್ವನಾಥ ನಾಯಕರು | ಅರವ ಚವುಪ್ಪರೆಂತ್ಲದರು(?)
ಕಮ್ಮನಾಯಕರು | ಅಳಿಯಂದಿರು | ಕೊಮಾರ ಮೊದಲಾದ ಅಮರ ನಾಯಕರನ್ನು |
ಅವರವರ ಯೋಗಕ್ಷೇಮಗಳ ಕೇಳಿ | ಆ ರಾಯರ ಬಳಿಯಲ್ಲಿ ಯಿದ್ದ | ಆನೆ ಕುದುರೆ
ಕಾಲಾಳು ಆವ ಮಾತ್ರವೆಂದು ಕೇಳಿದ್ದಕ್ಕೆ | ಅಮರ ದೊರೆಗಳ ಸ್ಥಾನಪತಿಗಳ ಕೂಡೆ |
ಪುರುಷನಾಯಕನ ವೀರಪ್ಪ ಯೆಂಬಾತನು | ದಳಪತಿರಾಯನು | ರಾಯರವರ
ಕೂಡೆ | ಸ್ವಾಮಿಯವರು | ಕೈಸಂಬಳವ ಕಟ್ಟಿದ ಮೇಲೆ | ಅಮರದ ಸೀಮೆಗೆ |
ಅರಮನೆ ಲೆಕ್ಕಪ್ರಕಾರಕ್ಕೆ ಕಡಮೆ ಬೀಳದ ಹಾಗೆ | ಅವರವರಿಗೆ | ಆನೆ ಕುದುರೆ |
ರಾವುತ ಮಾವುತರು | ಕಾಲಾಳು ಪರಿಜನಂಗಳನ್ನು ಸಂತರಿಸಿಯಿದ್ದಾರೆ | ಯಿಷ್ಟು
ದಿವಸದೋಪಾದಿಯಲ್ಲಿ ಅಲ್ಲ | ಸ್ವಾಮಿಯವರು ಆವಾಗ ರಾಜಕಾರ್ಯಕ್ಕೆ ಉದ್ಯುಕ್ತ
ರಾಗಿ ಕದಲಿ ಯಾರೂ ಯೆಂದು | ಚಿತ್ತಕ್ಕೆ ಬರುವ ಹಾಗೆ | ಗಣಿತ ತೆಗೆದುಕೊಂಡು |
ಅರಮನೆ ಲೆಕ್ಕಕ್ಕಿಂತ | ಹತ್ತು ಆನೆಗಳನ್ನು | ನೂರು ಕುದುರೆಗಳನ್ನು ಸಾವಿರ

*ನೀತಿ ಪದ್ಯದ ಉಲ್ಲೇಖ ಇಲ್ಲ

ಕಾಲಾಳನ್ನು ಅಧಿಕವಾಗಿ ಯಿಡಬೇಕು ಯೆಂದು ಸಂತರಿಸಿದರು | ಯಿಷ್ಟು ದಿವಸವೂ
ಸ್ವಾಮಿಯವರ ಒಡವೆಯ ಊಟ ಮಾಡಿದುದಕ್ಕೆ | ಅರಮನೆ ಅವಸರಗಳನ್ನು | ಚಿತ್ತ
ಬರುವ ಹಾಗೆ ನಡೆ[ಸು]ವಂಥವರಾಗಿ ಯಿದ್ದಾರೆ ಯೆಂದು | ಬಿನ್ನಹಂ ಮಾಡಿದುದಕ್ಕೆ
ರಾಯರವರು ಬಹಳ ಸಂತೋಷವ ಮಾಡಿಕೊಂಡರು | ಯೆದುಲ ಶಾಹರವ[ರ]
ದೊರೆತನಕ್ಕಿಂತ ನಿಮ್ಮ ದೊರೆತನ [ಅ] ಪೂರ್ವವಾದುದು ಯೆಂದು ಕೇಳಿಯಿಹೆವು |
ಅವರ ಪೂರ್ವೋತ್ತರಗಳನ್ನು ನಿಜಾಮುಶಾಹ | [1]ಕುತುಬ[1]ನ ಮುಲುಕರವರ ವರ್ತಮಾನ
ಗಳನ್ನೂ | ಯಿವರಿಗೆ ದೊರೆತನ ಬಂದುದನ್ನೂ ಹೇಗೆ ಯೆಂದು ಕೇಳಿದುದಕ್ಕೆ | ಅಯ್ಯನ
ಮುಲುಕ ರಾಯರವರ ಕೂಡೆ | ಅಶ್ವಪತಿ ಗಜಪತಿ ನರಪತಿ ಸಿಂಹಾಸನಗಳಿಗೆ |
ಉಂಟಾದ ರಾಜ್ಯದೊಳಗೆ | ಮನ್ವಂತರದಲ್ಲಿ ಡಿಳ್ಳಿಸುರತಾಣ | ಓರುಗಲು ಪ್ರತಾಪ
ರುದ್ರ | ಬೆಡಂದು ಕೋಟೆಯ ಬರಿದು(ಬಂದು?) | ಯೀ ಮೂವರೂನೂ ಅಂತರಮುನ್ನೆ
ಯವರಾಗಿ ಇಹರು | ವೋರುಗಲ್ಲ ಪ್ರತಾಪರುದ್ರನಿಗು ಆಗದೆ ಡಿಳ್ಳಿಸುರತಾಳ(ಣ)
ವೋರುಗಲ್ಲಿಗೆ ಮುತ್ತಿಗೆ ಹಾಕಿಯಿರಲಾಗಿ ಪ್ರತಾಪರುದ್ರನು ಹನ್ನೆರಡು ವರುಷ
ಹೋರಿಆಡಿ[ದ]ನು | ಆಮೇಲೆ | ದುರ್ಗದಲ್ಲಿ ಯಿದ್ದ ರಸ್ತು ಸಾಮಗ್ರಿಯು ತೀರಿ
ಹೋಗಲಾಗಿ | ಪ್ರಜೆಗಳ ಸುಮ್ಮನೆ ಕೊಲ್ಲುವುದು ಧರ್ಮವಲ್ಲ ಯೆಂದು | ಹೊರ
ಹೊರಟು ಜಗಳವ ಮಾಡಲಾಗಿ | ದೈವಗತಿಯಿಂದ ಸುರತಾಣರ ಕೈಯ[ಲ್ಲಿ] ಪ್ರತಾಪ
ರುದ್ರನು ಸಿಕ್ಕಿದನಾಗಲಾಗಿ ಪ್ರತಾಪರುದ್ರನ ಜಯಿಸಿ ಡಿಳ್ಳಿಗೆ ಕರೆದುಕೊಂಡು |
ಹೋದನು | ಸುರತಾಳನ ತಾಯಿ ಪ್ರತಾಪರುದ್ರನ ನೋಡಬೇಕು ಯೆನ್ನಲಾಗಿ
ವೊಂದು ದಿನ | ನಿದ್ರೆ ಹೋಗುವಾಗ | ಆ ರೀತಿಯಲ್ಲೆ ನೋಡುವಾಗ ಪ್ರತಾಪ
ರುದ್ರನು | ಯೀಶ್ವರಾಂಶವಾಗಿ | ಆ ಚಿಹ್ನೆಗಳಿಂದ ಕಾಣಿಸಲಾಗಿ | ನೋಡಿ |
ಬೆಳಗಾಗೆ | ಸುರತಾಳನ ಕೂಡೆ | ವೋರುಗಲ್ಲ ಪ್ರತಾಪರುದ್ರನು | ಮನುಷ್ಯವೃತ್ತಿ
ಯ[ವ]ನಲ್ಲ | ನಿದ್ರೆ ಸಮಯದಲ್ಲಿ ನೋಡಲಿಕ್ಕಾಗಿ | ತ್ರಿಶೂಲ ಢಮರುಗಗಳಿಂದ
ಯಿದ್ದನು | ಅಂಥ ದೊರೆಯನ್ನು ನೀವು | ಹಿಡಿತಾಹರೆ ಯೆಂದುದಕ್ಕೆ ಸುಲ್ತಾನನು
ನಕ್ಕು | ಆತನು ನಿದ್ರೆ ಹೋಗುವಾಗ ಹಾಗೆ ಕಾಣಿಸಿತಲ್ಲ | ನಾನು ನಿದ್ರೆ ಹೋಗುವಾಗ
ನೋಡು ಯೆಂದು ಹೇಳಿ ಕಳುಹಿಸಿದನಾಗಲಾಗಿ | ಆ ರೀತಿಯಲ್ಲೆ ನಿದ್ರೆ ಸಮಯದಲ್ಲಿ
ನೋಡಲಿಕ್ಕಾಗಿ | ಶೇಷಶಾಯಿಯಾಗಿ ಶಂಖ [2]ಚಕ್ರ ಗದಾ[2]ಯುಧಗಳಿಂದ | ವಿಷ್ಣು
ಸ್ವರೂಪವಾಗ್ಯಕಾಣಿಸಲಾಗಿ | ಆಕೆ ಕಂಡು ಆಶ್ಚರ್ಯಪಟ್ಟು | ಯಿಷ್ಟರವರಲ್ಲದೆ ಯಿದ್ದರೆ
ಕರೆದುಕೊಂಡು ಬಹನೆ ಯೆಂದು ಯೆಣಿಸಿ | ಮರುದಿವಸ ಸುರತಾಳನ ಕೂಡೆ ನಿಮ್ಮ
ಮಹಿಮೆ ನಿಮಗೇ ತಿಳಿವುದು | ಪ್ರತಾಪರುದ್ರ[ರ]ನ್ನು | ಪಂಙ್ಕ್ತಿಯಲ್ಲಿ ಯಿಟ್ಟು
ಕೊಂಡು ಊಟವ ಮಾಡಿ | ಸನ್ಮಾನ ಬಹುಮಾನಗಳ ಮಾಡಿ ವೋರುಗಲ್ಲಿಗೆ

---

1 ಕೊತ್ತುಮು 2 ಚತ್ಕಾರ್ಯಧಾ

ಕಳುಹಿಸಿದರೆ ಕೀರ್ತಿ ಶಾಶ್ವತವಾಗಿ ನಿಲುವುದು ಯೆಂದು ಹೇಳಲಾಗಿ | ಆ ರೀತಿಯಲ್ಲಿ ಕಳುಹಿಸಿದರು | ಆ ವರ್ತಮಾನವನ್ನು ನೀವು ಕೇಳಿಯಿಹಿರಿಯಲ್ಲ | ಬೆಡಂದು ಕೋಟಿ ಬರಿದು (ಬಂದು?) ಯೆಂಬಾತನು | ಕೆಲವು ರಾಜ್ಯವನ್ನು ಕೆಲವು ದುರ್ಗಗಳನ್ನು ಆಕ್ರಮಿಸಿ ಬಲವಂತನಾಗಿ ಯಿದ್ದನು | ಆತನ ಬಳಿಯಲ್ಲಿ ಗಿಂಡಿ ಹಿಡಿದುಕೊಂಡು ಯಿರಲಾಗಿ ಆತನಿಗೆ ಯೆದುಲ ಶಾಹಸೆಂಬ ಹೆಸರ ಕೊಟ್ಟನು | ಗಿಡುಗನ ಹಿಡಿದು ಕೊಂಡು ಯಿದ್ದು ಜೊರೆತನವ ಮಾಡಲಾಗಿ | ಆತನಿಗೆ ನಿಜಾಮು ಶಾಹ ಯೆಂಬ ಹೆಸರ ಕೊಟ್ಟನು | ನಾಯಿಗಳ ಸೇನೆಗೆರುವೆ(?) ಗುರಿಯಾಗಿಯಿರಲಾಗಿ ಗೋಲಕೊಂಡೆಗೆ ಕರ್ತನ ಮಾಡಿ ಮಲುಕನೆಂಬ ಹೆಸರ ಕೊಟ್ಟನು | ಯೀ ಮಂದಿಗೂ ಬೆಡಂದು ಕೋಟಿ ಊಳಿಗದವರು | ಯಿವರ ದೊರೆತನ ವೆನ್ನಲಾಗಿ | ನೂರು ವರುಷವಾದುದು | ಅವರೊಳಗೆ ಹಿರಿಯರು ನಿಜಾಮು ಮಲುಕ | ಆನೇಲೆ ಯೆದುಲ ಶಾಹಿ | ಆ ಹಿಂದೆ ಕುತುಬನ ಮಲುಕ | ಈ ಕ್ರಮದಿಂದ ಸಿಂಹಾಸನದಲ್ಲಿ ಉಡುಗೊರೆ ಉತ್ಸಾಹಗಳು ಆಡಕೆಲೆಯುವರಿಗೆ ನಡೆವುದು | ಯೀ ಮೂರೂ ಮನೆಯಲ್ಲೂ ಒಳ ಕುದುರೆಗಳಾಗಿ ಎಂಬತ್ತು ತೊಂಬತ್ತುಸಾವಿರ | ಆನೆಘಟೆ ನೂರು ಉಂಟು | ಕಾಲು ಬಲವನಾಳುವ ರಾಜ್ಯವಲ್ಲ | ಕರ್ನಾಟಕದಲ್ಲಿ ಚತುರಂಗ ಬಲವೂ ಉಂಟು | ಯಿಲ್ಲಿ[ಯ] ಜಗಳದ ಕುಶಲವ ಆ ದೇಶದಲ್ಲಿ ಅರಿಯರು | ಹಾಗೆ ಆಗಲಾಗಿ ಕರ್ನಾಟಕದವರೆ ಮುಂದೆ ಕಡಮೆ ದೊರೆಗಳು ನಿಲಲರಿಯರು ಯೆಂದು ಕಂಡ ಕಾರ್ಯವ ತಿಳುಹಿದುದಕ್ಕೆ ಅಂಕುಶ ರಾವು | ಜಗದೇಕ ರಾವುನವರು | ಮಲುಕನವರು ಹೇಳಿದ್ದು ಯಥಾರ್ಥವಹುದು ಯೆಂದು ಕಲಸಿದ ಜಗಳದಲ್ಲಿ ಯಿದಿರು ಬಲ ತಮ್ಮ ಬಲವ ನೋಡಿ | ಜಗಳ ಮಾಡಿದುದು ಯಿಲ್ಲ | ಮುಮ್ಮರದಿಂದ ನಡೆಯಲಾಗಿ | ಆ ಯೆದುರಿಗೆ ಯಿದಿರಾದಂಥವರು ಮುರಿದು ಪೋಡಿದರಾದರೆ ಯೆಲ್ಲಿ ಹೋದರೂ ಬಿಡದೆ ಕಡಿವರು ಯೆದುರಾದವರು ಆ ಹುರುಮತಿಗೆ ನಿಂತರಾದರೆ ಹಿಂದಕ್ಕೆ ತಿರುಗುವರು | ಆ ಸುದ್ದಿಯ ತಿಳಿದು | ಅವರ ಹಿರಿಯರು ನಿಯೋಗಿಗಳು ಜಗಳ ಮಾಡುವುದು ಕಾರ್ಯವಲ್ಲ | ತೆಗೆದು ಬನ್ನಿ ಯೆಂದರೆ ತೆಗೆದು ಬರುವುದಲ್ಲದೆ | ಮೊನೆಗೆ ಬಂದು ತೆಗೆದು ಹೋದರೆ ಪ್ರಭುತ್ವಕ್ಕೆ ಕಡಮೆ ಯೆಂದು ಅಭಿಮಾನವೆಣಿಸಿ ನಿಲ್ಲುವಂಥವರು ಯಾರೂ ಯಿಲ್ಲ | ಅದುಕಾರಣ ಕರ್ನಾಟಕದವರು | ವಿಚಕ್ಷಣವಾಗಿ ಕಾರ್ಯಾಕಾರ್ಯಗಳ ತಿಳಿದು ಜಗಳ ಕೊಟ್ಟು ಹೋಗಬಾರದ ಕಾರ್ಯವಾದರೆ ನಡೆದು ಉತ್ತರಿಸುವರು | ಆಗಲಾಗಿ ಪ್ರಭು ಶಕ್ತಿ ಉಂಟಾಗಲಾಗಿ ಕಾಲಾಳೆಲ್ಲವು ಕೆಲಸಕ್ಕೆ ಬರುವರು | [2]ಹತ್ತಿರದಲ್ಲಿದ್ದ[2] ಅಮರ ನಾಯಕರೆಲ್ಲರೂ ಆ ರೀತಿಯದುದು ಯೆಂದು ಬಿನ್ನಹಂ ಮಾಡಿದರಾಗಲಾಗಿ ರಾಯರವರು ಮುಂದೆ ಹಿಂದೆ ಜಗಳವಮಾಡಿ ಜಯಾಪಜಯಗಳ ಕಂಡರೆ | ತಿಳಿವುದಲ್ಲ | ತುರುಕರ ಮೇಲೆ

2 ಹತ್ತರಲ್ಲಿದ್ದ

ಕಾರ್ಯವ ಮಾಡಬೇಕಾಗಿ ಯಿದ್ದೀತು | ಯೆಲ್ಲರೂ ತಲೆಗೆ ನೀರನೆರೆದುಕೊಂಡು ಪಯಣವಾಗಿಯಿರಿ ಯೆಂದು | ಉಡುಗೊರೆ ವೀಳ್ಯವ ಕೊಟ್ಟು ಕಳುಹಿಸಿದಂಥವರಾಗಿ | ತಮ್ಮ ಆಪ್ತರ ಕೂಡೆ ಮಾತನಾಡುತ್ತ ಯಿರಲಾಗಿ | ಗಜಪತಿ ರಾಜ್ಯ[1]ದ[1] ಶ್ರೀ ಪುರುಷೋತ್ತಮದಿಂದ | ಬೇಹಿನ ವಾಯು ವೆನಿ[ಪ] ಹನುಮಂತಯ್ಯನು [2]ಮನೋವೇಗವೆನಿಪ ಪುರುಷಾಮೃಗಯ್ಯನು[2] | ಬಂದು | ರಾಯರಿಗೆ ಅಡ್ಡಬಿದ್ದು | ನಿಂತುಕೊಂಡು ಬಿನ್ನಹಂ ಮಾಡಿದ ವಿವರ |

ವಿದ್ಯಾನಗರದಿಂದ ಪಯಣ ಗತಿಯಲ್ಲಿ ಗಜಪತಿ ರಾಜ್ಯವ ಹೊಕ್ಕು ಆ ಆ ದುರ್ಗಗಳನ್ನು ಪಟ್ಟಣಗಳನ್ನು ನೋಡುತ್ತ ರಾಜಮಹೇಂದ್ರ ಕಟಕ ಮೊದಲಾದವನ್ನು ನೋಡಿ| ಮುಕುಂದ ಬಾಹುಬಲೇಂದ್ರನು | ಜಗನ್ನಾಥದಲ್ಲಿ ಯಿರಲಾಗಿ ಪುರುಷೋತ್ತಮಕ್ಕೆ ಹೋದೆವು | ಶ್ರೀ ಕೃಷ್ಣದೇವರ ಪಟ್ಟಣ ನೋಡುವ ಹೊತ್ತಿಗೆ | ಆವಲ್ಲಿ ನೋಡಿದರೂ ಸುವರ್ಣ ಕುಂಭ ಪ್ರಭಾಮಂಡಿತೋಜ್ವಲ ಸಭಾಮಂಟಪಗಳು | ಆವ ಬೀದಿಯಲ್ಲಿ ನೋಡಿದರು | ಯಿಕ್ಷುರಂಭಾಸ್ತಂಭವರ್ಪಣಾಂಚಿತ ಗೃಹದ್ವಾರ ಭೂಮಿಗಳು | ಯಾವ ಬಳಿಯಲ್ಲಿ ನೋಡಿದರೂ | ಇಭತುರಂಗ ಮಾನಿತ ರಾವುತ ಸುಭಟವಿರಾಜಿತರು | [3]ವಿಮಾನನೇತ್ರೀ[3] ಕುಚ ಘನಸಾರ ಮೃಗಮದ ಖಂಡಲಹರಿಯು | ಯೆಲ್ಲಿ ಯೀಕ್ಷಿಸಿದರೂ | ಮಣಿಖಚಿತ ರಚಿತ ಹೇಮೋನ್ನತ ಸುಭಟ ವಿರಾಜಿತರು | ವಿವಿಧ ಶೃಂಗಾರಗಳು | ಉಂಟಾಗಿ ನೋಡಲ್ಪಡುವ ಸಾಮ್ರಾಜ್ಯ ಕಲಿತವಾಗಿ | ಶುಭಕರವಾದಂಥ ಪಟ್ಟಣದ ಶಾಖೆಯು | ಯಿಂಥ ಪಟ್ಟಣದಲ್ಲಿ | ಜಗನ್ನಾಥರ ಮಹೋತ್ಸವಕ್ಕೆ | ದಿಗ್ದೇಶದಿಂದ ಬಂದ ಬ್ರಾಹ್ಮಣ ವಿದ್ವಾಂಸರು | ಕವೀಶ್ವರರು | ಬಹ್ಮಚಾರಿಗಳು | ವಾನಪ್ರಸ್ಥರು | ಪು(ಪ?)ಣ್ಯಾಂಗನೆಯರು | ಕ್ಷತ್ರಿಯರು | ವೈಶ್ಯರು | ಶೂದ್ರರು | ಮಿಕ್ಕಂಥ ಸಮಸ್ತ ಜಾತಿಯವರೂ ಬಂದು | ಸ್ವಾಮಿಯ ದರ್ಶನವನ್ನು ಮಾಡಿ | ಸ್ವಾಮಿ ಮಹಾಪ್ರಸಾದವ | ಯಿವರವರೆನ್ನದೆ | ಆ ಗುಡಿಯಲ್ಲಿ ಸೃಷ್ಟಿದೋಪಗಳು | ವರ್ಣಾಶ್ರಮ ಧರ್ಮಗಳು | ಶುಚಿ | ಅಶುಚಿಯೆನ್ನಬಾರದು | ಕಲಿಯುಗ ವೈಕುಂಠವಾಗಿಯಿಹುದು | ಜಗನ್ನಾಥರ ಮಹಿಮೆಯಿಂದ | ಆ ಸ್ಥಳದ ವರ್ತಮಾನಗಳನ್ನು | ಮಹಾಪ್ರಭಾವ | ಪ್ರಸಾದವನ್ನು ವರ್ಣಿಸಲು ಸಾವಿರ ತಲೆಗಳು | ಯೆರಡು ಸಾವಿರ ಜಿಹ್ವೆಗಳು ಉಳ್ಳ ಶೇಷನಿಗೂ ಶಕ್ಯವಲ್ಲ | ಯೆಂಬ ಹಾಗೆ ತೋರುವುದು | ಮುಕುಂದ ಜಗದೇವನು ಬ್ರಾಹ್ಮೀಮುಹೂರ್ತದಲ್ಲಿ ಯೆದ್ದು ಷೋಡಶಪಾತ್ರರೂನೂ ತಾನೂ ಸರಿಯಾಗಿ | ಗಾವುದ ಯಿಗ್ಗಾವುದ ಹೋಗಿ | ತಿರುಗಿಬಂದು | ಮಜ್ಜನ ನಾಮತೀರ್ಥರಾಗಿ ಗೃಹಾರಾಧನಾ ಜಗನ್ನಾಥರನ್ನು ವಿಧ್ಯುಕ್ತವಾಗಿ ಷೋಡಶೋಪಚಾರ ಪೂಜೆ ನೈವೇದ್ಯಗಳ ಮಾಡುವ ಸಮಯಕ್ಕೆ ಪರದುನ್ನೆದಾರರ ಸ್ಥಾನಪತಿಗಳನ್ನು |

1 ಪೂ 2 ಮನೊವೆನಿಪುರುಷಾಮ್ರುಗೈಯ್ಯನು 3 ಮೆನೂನೆತ್ರಿ

ಕರ್ನಾಟಕ ಸಿಂಹಾಸನದವರ ಕಮ[ಲ]ನಾಭಯ್ಯನು | ಅಕ್ಬರಿಯವರ ಆನಂದೋಜಿ | ಮಾನಸಿಂಗನವರ ಮಾಧವಯ್ಯ | ಡಿಳ್ಳಿಸುರತಾಳನವರ ಘಾಕೋಜಿ ಪಂಡಿತ[1]ರು[1] |[ಪೆನ್ನು]ಗೊಂಡೆ[2]ಯು[2] ಗುಂಡಮರಾಜನು | ಅಮದಾನಗರ ವಿಜಯಾಪುರ | ಗೋಲಕೊಂಡೆ | ಬುರಾಣಾಪುರದವರ ಮುಖಾಮಿಗಳು ಮೊದಲಾದವರು ದೇವತಾರ್ಚನೆ ಸಮಯಕ್ಕೆ ಯೆಲ್ಲರೂ ಪ್ರಾತಃಕಾಲದಲ್ಲಿ ಸ್ನಾನ ಸಂಧ್ಯಾವಂದನೆಯ ಮಾಡಿ ಪಟ್ಟೆಯ ಧೋತ್ರಗಳನ್ನುಟ್ಟು ಬಹಿರ್ವಾಸ ಸಹಿತರಾಗಿ ದೇವಪೂಜಾ ಗೃಹದಲ್ಲಿ ವೊಂದು ಚಾವಡಿಯ ವೊಳಗೆ ಕುಳ್ಳಿರಲಾಗಿ ಅವರವರನ್ನು | ಪಾ[ಪು?]ರಾಣಿಕರನ್ನು ಗಜಪತಿ ಕರೆಸಿ | ಪುಣ್ಯಶ್ರವಣವಾದ ಮೇಲೆ | ಆಶ್ರಿತರಾದವರು | ಆಶೀರ್ವಾದ ಮಂತ್ರಾಕ್ಷತೆ ಪೂರ್ವಕವಾಗಿ ಕೊಟ್ಟಂಥದ್ದನ್ನು ತೆಗೆದುಕೊಂಡು ಶಿರಸಾವಹಿಸಿ ಸಭೆಯವರೆಲ್ಲರಿಗೂ ಜಗನ್ನಾಥ ಪ್ರಸಾದವನ್ನು ತಾಂಬೂಲಗಳನ್ನು ಕೊಡಿಸಿ | ಬ್ರಾಹ್ಮರ ಕಳುಹಿ | ಅವರ ಪಾದರೇಣುವ ತೆಗೆದುಕೊಂಡು | ಶಿರಸ್ಸಿನಲ್ಲಿ ಧರಿಸಿ | ಊಟಕ್ಕೆ ಕುಳಿತುಕೊಂಬ ಠಾವಿನಲ್ಲಿ ತೆರೆಯುಕಟ್ಟಿ ಸಕಲ[3] ಭೋಜ್ಯ[3]ಗಳನ್ನು ಚಿನ್ನದ ತಳಿಗೆಯಲ್ಲಿ ಬಡಿಸಿ | ವೊಂದು ತುತ್ತು ಕಲಸಿಕೊಂಡ ಮೇಲೊಗರವ ಮತ್ತೊಂದು ತುತ್ತಿಗೆ ಕಲಸಿಕೊಳ್ಳದ ಹಾಗೆ | ಭಕ್ಷ್ಯಗಳೊಳಗೆ ವೊಂದು ಸಾರಿ ತೆಗೆದ[ಮೇಲೆ]ಯೆರಡನೆ ಸಾರಿ ಮುಟ್ಟದ ಹಾಗೆ | ಮನುಷ್ಯ ಬೆತ್ತದ ಕೋಲ ಕೈಯಲ್ಲಿ ಹಿಡಿದು ಕೊಂಡು | ಪರಾಕಿಸಿಂದ ಮುಟ್ಟದ ಹೊತ್ತಿಗೆ ಕೈಮೇಲೆ ಬೆತ್ತದ ಕೋಲಲ್ಲಿ ಮುಟ್ಟಬೇಡ ಯೆಂದನಾಗಲಾಗಿ | ಆ ರೀತಿಯಲ್ಲಿ ಮುಟ್ಟದೆ | ಆರೋಗಣೆಯ ಮಾಡಿದ ಹಿಂದೆ ಶತಪಥಗಳ ನಡೆದು | ಸಂಕ್ಷೇಪ ರಾಮಾಯಣ ಸಮಾಪ್ತವಾದ ಮೇಲೆ | ದೊಡ್ಡ ವೋಲಗವಾಗಿ | ಸಕಲವಾದವರೂ ಅರಮನೆಯ ಬಾಗಿಲಲ್ಲಿ ಕುಳಿತುಕೊಂಡು ಯಿರಲಾಗಿ | ಗಜಪತಿ ವೋಲಗದ ಶೃಂಗಾರವಾಗಿ | ವೊಂದು ಅಂತಸ್ತು ಚಾವಡಿಗೆ ಬಂದು ಕುಳಿತುಕೊಂಡು | ಯೆಪ್ಪತ್ತೆರಡು ವಿನಿಯೋಗದವರನ್ನು ಕರೆಯ ಕಳುಹಿ ಅವರವರ ಉಚಿತ ಸ್ಥಳಗಳಲ್ಲಿ | ಕುಳ್ಳಿರ ಹೇಳಿ ನಿಯಮಿಸಿ | ಷೋಡಶ ಪಾತ್ರಗಳೊಳಗೂ | ಪರಸ್ಥಳದ ನಿಯೋಗಿಗಳೊಳಗೂ | ಸಂಭಾಷಣೆಯ ಮಾಡಲಾಗಿ | ನಿಜಾಮುಶಾಹರವರ | ನೀಲಾದ್ರಿ ಪಂಡಿತರು | ಯೆದುಲಶಾಹ | ಕುತುಬನ ಮುಲುಕನವರ ಕಾಗದಗಳು | ಕರ್ನಾಟಕಾಧೀಶ್ವರರ ಕಾರ್ಯ ಮುಖಕ್ಕೆ ನಡೆವರಾಗಿ | ಚತುರಂಗ ಬಲವನ್ನು ಬಹಳ ಕೈಕಟ್ಟಿ | ಸರಹದ್ದಿನಲ್ಲಿ ಕಾಣಿಸಿಕೊಂಬವರಾಗಿ ಯಿದ್ದಾರೆ | ಯೀ ವರೆಗೆ ಉತ್ತರ ದಕ್ಷಿಣದ ದೊರೆಗಳ ಕಾರ್ಯಗಳಿಗು| ಹಾನಿ ವೃದ್ಧಿಗಳಿಗು | ಸಹಾಯ ಸಂಪತ್ತಾಗಿ ನಡೆಸಿದಿರಿ | ಬಹುಕಾರ್ಯವಾದರೆ | ಯೆಲ್ಲರೂ ಯೇಕ ಗ್ರೀವರಾಗಿ | ಉತ್ತರದಲ್ಲಿ ಅಕುಬರಿಯವರ ಕಾರ್ಯಗಳಿಗೂ

1 ರ 2 ವ 3 ಭಾಗ,

ನಿರ್ವಹಿಸುವಿರಲ್ಲ | ಯೀಗ ಅಷ್ಟು ಕಾರ್ಯಗಳು ಯೇನು ಯಿದ್ದಾವು | ಸರಹದ್ದಿನಲ್ಲಿ ಸ್ತ್ರೋಮ ಶುದ್ಧಿಯಾಗಿರಲಾಗಿ | ಮಿಂಚಿಬಂದ ಕಾರ್ಯವಾದರೆ | ಅಮದಾನಗರ ಪರ್ಯಂತರವೂ ಬರುವರು ಯೆಂದು ಘನವಾಗಿ ಬರೆದು ಕಳುಹಿಸಿದರು | ಮನುಷ್ಯ ಯತ್ನದಲ್ಲಿ ಅಪಜಯ ಯೆಂದೂ ಯೆಣಿಸಬಾರದು | ಜಯ ನಿಶ್ಚಯವಾದ ಹೊತ್ತಿಗೆ | ಆ ಸರಹದ್ದಿನಲ್ಲಿ ಮೂರು ಬಗೆಯವರು ಮುರಿದು ಪ್ರೋಡಿದರಾದರೆ| ಸೀಮೆಯೆಲ್ಲವೂ ಕೊಳ್ಳೆ ಹೋಗಿ| ನೀವು ಅವಧಿ [1]ಪಡೆಯುವಿರಿ[1]| ದೂರದಲ್ಲಿ ವಿಚಾರಿಸಿಕೊಂಡು | ಅತಿ ಯೆಚ್ಚರದಲ್ಲಿ ನಡೆದು ಕೊಳ್ಳಬೇಕು ಯೆಂದು ಯೆಂಬುದಕ್ಕೆ ಗಜಪತಿ ಅಷ್ಟಕ್ಕೂನೂ ಜಗನ್ನಾಯಕರು ಇದ್ದಾರೆ ಯೆಂದು ಅಂದುದಕ್ಕೆ ಆ ಮೂರು ಬಗೆಯವರು ನಿಯೋಗಿಗಳು | ನಿಮಗೆ ಜಗನ್ನಾಯಕರೂ | ತಮ್ಮ ದೊರೆಗಳಿಗೆ ಕರ್ತರೂ ಯಿದ್ದಾರೆಯಲ್ಲ | ಕರ್ನಾಟಕದವರು ಹೊಳೆಯ ದಾಟಬಾರದೆ ತಮ್ಮ ಮೂರು ಬಗೆಯವರ ದಲ ಬಲಗಳನ್ನು | ಕೃಷ್ಣಾನದಿಯ ದಾಟಿ ಯಿರುವ ಹಾಗೆ ಕಳುಹುತ್ತೆಯಿದ್ದಾರೆ| ನಿಮ್ಮ ಬಗೆಯ ನಾಮಜಾದು[ವ]ನ್ನು ಸರಹದ್ದಿನಲ್ಲಿ ಬಲವಂತನಾಗಿ ಯಿರುವ ಹಾಗೆ ಕಟ್ಟಳೆಯಮಾಡಿ ಯೆಂದು ತಿಳುಹಲಾಗಿ | ಗಜಪತಿಯವರು ಆ ರೀತಿಯಲ್ಲಿ ಅಮರಿಕೆಯ ಮಾಡುವೆವು ಯೆಂದು | ಕೊಂಡವೀಡು | [2]ಪೆನು[2]ಕೊಂಡ | ಉದಯಗಿರಿ | ಬೆಲ್ಲಮುಕೊಂಡ | ಕಂದುಕೂರು | ಮೊದಲಾದ ಸ್ಥಳಕ್ಕೆ ನಾಮಜಾದು ಕಳುಹಿಸಿದರು | ಷೋಡಶ ಪಾತ್ರರನ್ನು ಅವರವರ ದುರ್ಗಗಳಲ್ಲಿ | ಅತಿ ಯೆಚ್ಚರಿಕೆ ಯುಂಟಾಗಿ ಯಿರಲಿ ಯೆಂದು ಹೇಳಲಾಗಿ | ಅವರವರ ಸೀಮೆಗಳಿಗೂ ಸರಹದ್ದಿಗೂ | ರಸ್ತು ಸಾಮಗ್ರಿಯ ಹಾಕಿಸಿದರು | ಮುಕುಂದ ಜಗದೇವನು | ಷೋಡಶ ಪಾತ್ರರೂ | ತಾವೂ | ಪ್ರೊಂದು ದಿನ ಗೋದಾವರಿಯ ಸ್ನಾನಕ್ಕೆ ಹೋಗಿ ನದಿಯ ಪ್ರೊಳಗೆ | ಗಜಪತಿಯವರು | ಸ್ನಾನಮಾಡಿ | ಜಗನ್ನಾಯಕರ ಪೂಜೆಯ ಮಾಡಲು | ಹೊತ್ತು ಹನ್ನೆರಡು ಘಳಿಗೆ ಹಿಡಿವುದಾಗಲಾಗಿ | ಸುತ್ತಲು ಅಷ್ಟು ಘಳಿಗೆ ದಾರಿ[ಯಲ್ಲಿ] ಮನುಷ್ಯಸಂಚಾರವೂನೂ | ಕೇಳಿ ಬರದ ಹಾಗೆ ಮಾಡಿ ಯೆಂದು ಪಾತ್ರರ ಕೂಡೆ ಹೇಳಿ ಯಿರುವರಾಗಲಾಗಿ | ಪ್ರೊಕ್ಕಲು ಸಕ್ಕಲು | ಆ ಪ್ರಾಂತ್ಯದಲ್ಲಿ [4]ಗಲ[ಭೆ][4] ಮಾಡದ ಹಾಗೆ ಗೋದಾವರಿಗೆ ಉತ್ತರ ಭಾಗದಲ್ಲಿ ಯೆಂಟು ಕುದುರೆಯವರು ಗೋಂಡಾರಣ್ಯವಾಗಲಾಗಿ ಆ ದಿಕ್ಕಿನಲ್ಲಿ ಆರಾದರು ಕುದುರೆಯವರು ಬರುವರು ಮೊಗಲರು | ಅಪರಿವರು ಯೆಂದು ಅರಿಯರು ಯೆಂದು ಅಡವಿಯ ಮುಖಕ್ಕೆ ನಾಲ್ಕು ಕುದುರೆಯವರು | ಗಾವುದ ದಾರಿ ಸಾಗಿಹೋದರಾಗಲಾಗಿ | ಗೊಂಡೆಯಿಂದ | ದೊರೆಗಳಿಗೆ ಬೇಹು ಸಂಧಿಸಿ ಗಜಪತಿ ಹದಿನಾರು ಕುದುರೆಯಲ್ಲಿ ನದಿಯ ಸ್ನಾನಕ್ಕೆ ಬಂದರು | ಯೀ ಸಮಯದಲ್ಲಿ ಸುತ್ತಿಕೊಂಡು ಹಿಡಿದು ಕೊಳ್ಳಬೇಕು

---

1 ಪಡುವಿರಿ 2 ಪಿನು 3 ಸಂಚಾರಉಂನ್ನು | ಕೇಳಬಾರದ 4 ಗಲಗು

ಯೆಂದು ನಾಲ್ಕು ಐದು ಸಾವಿರ ಕುದುರೆ ಥಾಳು [1]ಡಮಾ[ಯಿ][1] ಹೊರಿಸಿ ಕೊಂಡು । ಕಳ್ಳಮಾರ್ಗದಲ್ಲಿ ಕುದುರೆಯವರು ಬರುವ ರಭಸ ಕೇಳಿ ಷೋಡಶ ಪಾತ್ರರೊಳಗೆ ನಾಲ್ಕು ಕುದುರೆಯವರು ಯಿದಿರಾಗಿ ಹೋಗಿ ಜಗಳವ ಕೊಟ್ಟರಾಗಲಾಗಿ । ನಾಲ್ಕು ಸಾವಿರ ಕುದುರೆಯವರೂ । ನಾಲ್ಕು ಕುದುರೆಯ ಸುತ್ತಿಕೊಳ್ಳಲಾಗಿ ನಾಲ್ಕು ದಿಕ್ಕಿನಲ್ಲಿ । ನಾಲ್ಕು ಕುದುರೆಯವರು ನಾಲ್ಕು ಪಥವಾಗಿ ವೋಡಿಸಿ ಯೆರಡು ಕೈಯಾರ ಕಡಿಯುತ್ತ ಹೋಗಲಾಗಿ । ತುಂಡು ತುಂಡಾಗಿ ಕುದುರೆಯೂ ರಾವುತರೂ। ಯೆರಡು ಸಾವಿರ ಕುದುರೆ ರಾವುತರೂ ಬೀಳಲಾಗಿ। ಆ ಮೇಲೆ । ಮೊಗಲರು ಅಷ್ಟುಮಂದಿಯೂ ವೊತ್ತಟ್ಟಾಗಿ ನಿಲ್ಲಲಾಗಿ । ಯೀ ನಾಲ್ಕು ಕುದುರೆಯವರು ಆಳಿಸಿದರು । ಯೀ ವೊಳಗೆ । ಯೆಂಟು ಕುದುರೆಯವರು ಸಾರಿಹೋಗಿ ಯಿದ್ದವರು ಬರಲಿಲ್ಲ । ಯೆರಡು ಕುದುರೆಯವರನ್ನು ಅಲ್ಲಿಯೆ ಯಿರಿಸಿ ಆರು ಕುದುರೆಯವರು ಬಂದರಾಗಲಾಗಿ । ಆ ಆರು ಕುದುರೆಯವರ ಮೇಲೆ ಕಾಣಿಸಿಕೊಳ್ಳಲಾಗಿ । ಅವರು ತಮ್ಮ ಕೈಯಾರೆ ಕಡಿದು ಬೇಸತ್ತಂಥವರಾಗಿ । ಮೊದಲ ನಾಲ್ಕು ಕುದುರೆಯವರು ತಾವೂ ಕೂಡ ಹತ್ತು ಕುದುರೆಯವರಾಗಿ ।ನದಿ ಸಮೀಪದಲ್ಲಿ ಯಿದ್ದ ಕುದುರೆಗಳನ್ನು ಕೂಡ ಹನ್ನೆರಡು ಕುದುರೆಯವರನ್ನೂ । ಜಾವಹೊತ್ತು ಜಗಳವ ಮಾಡಿ । ಮೊಗಲರು ಬಹ[ಳ] ಧ್ವನಿಯನ್ನು । ಅರ್ಭಟವನ್ನು ಮಾಡಿ । ಡಮಾನ ಟೂಕಿಸಲಾಗಿ (?) ಗೋದಾವರಿಯಲ್ಲಿ । ಯಿದ್ದ ಗಜಪತಿಯವರು । ಷೋಡಶ ಪಾತ್ರರಳೊಳಗೆ ನಾಲ್ಕು ಕುದುರೆಯವರನ್ನು ಕೇಳಿ । ತಮ್ಮ ಕುದುರೆಯವರನ್ನು ತೆಗೆದು ಬರಹೇಳಿ । ಹನ್ನೆರಡು ಕುದುರೆಯವರು । ನದಿಯ ವೊಳಗಿಂದ ತೆಗೆದು ಬಂದರು । ಅದು ಕಾರಣ ಯೆರಡು ಮೂರು ಸಾವಿರ ಕುದುರೆಯವರು ಬೆಂಬಳಿಯಾಗಿ ಬರಲಾಗಿ । ಗಜಪತಿಯವರು ಕುದುರೆ ಮೇಲಣ ದೃಷ್ಟಿಯಿಂದ । ಜಗನ್ನಾಯಕರ ಯೆತ್ತುವುದ ಮರೆತು । ಕುದುರೆಯ ಮೇಲೆ ಕುಳಿತುಕೊಂಡು ಹೊಳೆಯದಾಟಿ ಕೆಲವುದೂರ ಬಂದರು । ಅಷ್ಟರೊಳಗೆ ಆ ಕುದುರೆಯವರು ಉತ್ತರದ ತಡಿಗೆ ಬಂದು । ಕುದುರೆಗಳಿಗೆ ನೀರ ತೋರುತ್ತ । ನದಿಯಲ್ಲಿ ವೋಡಿಯಾಡುತ್ತ ಯಿದ್ದರು । ಅವರ ನೋಡಿ ದೇವ ಪೂಜೆಯ ಪೆಟ್ಟಿಗೆಯ ವೊಳಗೆ ಸ್ವಾಮಿಯವರ ತೆಗೆದುಕೊಳ್ಳದೆ ಬರಿಯ ಪೆಟ್ಟಿಗೆಯ ತೆಗೆದು ಕೊಂಡು ಬಂದರು ಯೆಂದು । ಅಲ್ಲಿ ನಿಂತುಕೊಳ್ಳಲಾಗಿ ಯೀ ಕಡೆಯ ನಾಲ್ಕು ಕುದುರೆಯ ವೊಳಗೆ ವೊಬ್ಬ ಪಾತ್ರನು ತಾನು ವೋಡಿಹೋಗಿ ಜಗನ್ನಾಯಕರ ತೆಗೆದುಕೊಂಡು ಬಂದೇನು ಯೆಂದು ಹೊಳೆಗೆ ಹೋಗಿ । ದೇವ ಪೂಜೆಯ ಮಾಡಿದ ತಿಟ್ಟಿನ ದಿಕ್ಕಿನಲ್ಲಿ ಯಿಳಿದು । ಜಗನ್ನಾಯಕರ ಯೆತ್ತಿಕೊಂಡು ಬರಲಾಗಿ । ಕಂಡು ಕುದುರೆಯವರು

---

1 ಡಮಾವಿ

ರಾವುತರು ಬೆನ್ನಹತ್ತಲಾಗಿ। ಅವರನ್ನು ಕಡಿದು ಹೊಳೆಯ ದಾಟಿ ಬಂದನು।ಗಜಪತಿರಾಯರವರು ಯಿಂದು ಯೆದ್ದ ಹೊತ್ತು ಯೆಂಥದೂ। ವ್ಯರ್ಥ ಕಲಹವಾಯಿತು ಯೆಂದು। ಜಗಳವ ಮಾಡುವವರು ತಮ್ಮ ಕೂಡೆ ಅರಿಕೆಯ ಮಾಡದೆ ಜಗಳವ ಮಾಡಿ ಬಹುಮಂದಿಯ। ನೋಯಿಸಿದರು ಯೆಂದು। ಆ ಹನ್ನೆರಡು ಕುದುರೆಯವರಿಗೂ। ಜಗನ್ನಾಥರ ತಂದ ಕುದುರೆಯವರಿಗೂ। ಉಡುಗೊರೆಯನ್ನು ಕೊಟ್ಟರು। ಕಡಮೆ ಮೂರು ಕುದುರೆಯವರು ತಮಗೆ ಜಗಳ ಸಿಕ್ಕದೆ ಹೋಯಿತು ಯೆಂದು ವಿಚಾರದಿಂದ ಬರುತ್ತಿರಲಾಗಿ। ಅದರೊಳಗೆ ವೊಬ್ಬ ಪಾತ್ರನು ಗಜಪತಿಯ ಮುಂದುಗಡೆಯಲ್ಲಿ ವೊಂದು ಮರದ ನೆಳಲು ಬರುವಾಗ ಕುದುರೆಯ ಮೇಲೆ ಹೋಗುವ ರಾವುತಗೆ ಅಡ್ಡಲಾಗಿ ಯಿತ್ತಾಗಲಾಗಿ ಆ ಮರದ ಕೊಂಬೆಯನ್ನು ತನ್ನ [1]ಹಸ್ತಕ[1]ದಿಂದ ಕಡಿದು ಹಾಕಿದನು। ಗಜಪತಿಯವರು ನೋಡಿ ಸಂತೋಷವ ಮಾಡಿ। ಆ ಪಾತ್ರನಿಗೆ ಉಡುಗೊರೆಯನ್ನು ಕೊಟ್ಟರು। ಕಡಮೆಯ ಯೆರಡು ಕುದುರೆಯವರು ಬರುವಾಗ ಮಧ್ಯದಲ್ಲಿ ಯೆರಡಾಳು ಉದ್ದಕ್ಕೆ ವೊಂದು ಹುಣುಸೆ ಕೊಂಬೆ ಅಡ್ಡಲಾಗಿ ಯಿರಲಾಗಿ ತನ್ನ ಕುದುರೆಯನ್ನು। ಕಾಲಾಡಿ ಹುಲ್ಲೆಯ ಹಾಗೆ ನೆಗೆದು। ಆ ಕ್ಷಣದಲ್ಲೆ ಹುಣುಸೆ ಮರದ ಕೊಂಬೆ[ಯ]ನ್ನು ಯೆರಡು ಕೈಯಲ್ಲಿ ಹಿಡಿದು। ವೋಡುವ ಕುದುರೆಯನ್ನು ಯೆರಡು ತೊಡೆಯ ಸಂದಿಯಲ್ಲಿ ಅವುಕಿಕೊಂಡು। ಕುದುರೆಯೂ ಸಹ ಅಂತರಿಕ್ಷದಲ್ಲಿ ನೇತಾಡುತ್ತಯಿದ್ದರು। ಆ ವರ್ತಮಾನವ ಗಜಪತಿ ನೋಡಿ ಆ ಸಮೀಪದಲ್ಲಿ। ಹತ್ತಿ[ಯ] ಹೇರುಗಳು ಯಿರಲಾಗಿ। ಯಿಪ್ಪತ್ತು ಮೂವತ್ತು ಹೊರಳಿಸಿಕೊಂಡು ಬಂದು। ಕುದುರೆಯನ್ನು। ರಾವುತ[ನ]ನ್ನೂ ಯಿಳುಹಿಕೊಂಡು। ಉಡುಗೊರೆಯನ್ನು ಕೊಟ್ಟರು। ವೊಬ್ಬ ಕುದುರೆಯ ಪಾತ್ರನಿಗೆ ಬಹುಮಾನ ಯಿಲ್ಲದೆ ಯಿರಲಾಗಿ। ಗೋದಾವರಿ ಕಟ್ಟು ಕಾಲುವೆ ಆಳು ಉದ್ದದಲ್ಲಿ। ಐವತ್ತು ಹೆಜ್ಜೆ ಅಡ್ಡಗಲದಲ್ಲಿ ಅಡ್ಡಲಾಗಿ ಯಿರಲಾಗಿ। ಆ ರಾವುತನು ತನ್ನ ಕುದುರೆಯ ವೋಡಿಸಿ ಆ ಕಾಲುವೆಯ ನೆಗೆಯಿಸಲಾಗಿ ನೋಡಿ। ಆತನಿಗೂ ಉಡುಗೊರೆಯ ಕೊಟ್ಟರು। ಅದೆಲ್ಲವನ್ನು ನಾವು ಯಿಬ್ಬರು ನೋಡಿದವರಾಗಿ ಪಟ್ಟಣದ ವೊಳಕ್ಕೆ ಬಂದು ಷೋಡಶ ಪಾತ್ರರ ಮನೆಯನ್ನೂ। ಗರುಡಿಯನ್ನೂ। ಸಾಮುಮಾಡುವುದನ್ನೂ ನೋಡಿದೆವು। ಆ ಗರುಡಿಯೊಳಗೆ ಸಾಮನ್ನು ದೇವ ಮಾನವರುಗಳು ಮಾಡಲರಿಯರು। ಸೀಮೆಯಪ್ಪಂಥ ಜಟ್ಟಿಗಳು ಮಾಡುವ ಸಾಮಿನ ಗರುಡಿಗಳ ನೋಡಿ ಯಿರುವೆವು। ಆ ರೀತಿಯಲ್ಲ। ಅವರು ಯೆತ್ತುವ ಸಂಗಡಗಳನ್ನು ನಾಲ್ಕು ಮಂದಿ ಯೆತ್ತಲರಿಯರು। ಅಂಥ ಸಂಗಡಗಳನ್ನು ನೆಟ್ಟಗೆ ಯೆತ್ತುವದು ಅಲ್ಲ। ಅಡ್ಡಲಾಗಿ ಯೆತ್ತುತ ಯಿದ್ದ ವೊಂಬತ್ತು ಪಟ್ಟಿಯ [2]ಕೊಂತಸ[2] ಆಳ ಎತ್ತುಗೈ ಉಂಟಾದ ಕೊಂತವ ಯೆತ್ತು

---

1 ಮುತ್ತಕ 2 ಗೋಂತವ

ವುದೂ। ಮೈಮೇಲೆ ದಬ್ಬಿ ಕೊಂಬುವುದೂ। ಯಿದಲ್ಲದೆ। ಆ ಕೊಂತ ಗಳಲ್ಲಿ ತೊಡೆಗಳ ನೀಡಿಕೊಂಡು। ಅಡ್ಡಲಾಗಿ ಹಾಕಿಕೊಂಡು ನೇತಾಡುತ್ತ ಯಿದ್ದರು। ಅದಾವ ರೀತಿ ಯೆಂದರೆ। ಜಗಳದಲ್ಲಿ ರಾವುತನನ್ನು ಕಂಕುಳಲ್ಲಿಕ್ಕಿಕೊಂಡು।ಅವಮಾಂತ (?) ಕೊಂಡು ಹೋಗುವರು। ಆ ರೀತಿ ಆಗುವಹಾಗೆ ಕುದುರೆಯನ್ನೂ ಬಿಡದೆ ಹೋರಿರಿಯಾಡಿದರೆ। ಶಕ್ಯವಲ್ಲಯೆಂದು ಬಿಟ್ಟುಹೋಗುವರು। ಬೇರಾ ಮುಸ್ತೈದ ಯವರಿಗೆ। ಯಿರಿತದಲಗಡಿತಾಕುಗಳಿಗೂ ಅಂಜರು। ಅಂಥ ರಾವುತ[ರ]ನ್ನು ಕಂಕು ಳಲ್ಲಿ ಹಾಕಿಕೊಂಡು ಹೋಗುವರು। ಆ ಸಮಯದಲ್ಲಿ ತೇಜಿಯ ಬಿಡದೆ। ತೊಡೆ ಬಲುಮೆ ಯುಂಟಾಗಿ ಯಿದ್ದುದಕ್ಕೆ ಯೀ ರೀತಿ ಸಾಧಕ ಯೆಂದು ಯೆಂಬರು। ರುಮ್ಮ್ರಿಯ (?) ರಕ್ತಖಂಡವೊಂದು ಮನುಷ್ಯನ ತಲೆ ಹೊರೆಯುಂಟು। ಆ [1]ರಕ್ತ[1] ಖಂಡವ ತೆಗೆದುಕೊಂಡು। ನೂರು ಆನೆಗಳ ಕೂಡೆ ಯೇನೂನೂ ಯಿಲ್ಲದ ಹಾಗೆ ಕಡಿಯುತ್ತ ಯಿದ್ದಾರೆ। ಆ ಖಂಡದಿಂದ ಹುಣುಸೆಯ ಕಂಬಗಳು ಬಾಳೆಯ ಕಂಬಗಳ ಹಾಗೆ। ತುಂಡಾಗಿ ಕಡಿವ ರೀತಿಯಲ್ಲಿ ಕಡಿದು ಹಾಕುವರು। [2]ಗಡಹಾರೆ[2]ಗಳು ಯೆರಡು ಮೂರು ಗುದಿಯಾಗಿ ಸೆಟ್ಟು ಯೆರಡಾಗಿ ಖಂಡಿಸುತ್ತ ಯಿದ್ದಾರೆ। ಲಾಳದ ಬಿಲ್ಲೆಗಳನ್ನು ಗೂಡೆ ತುಂಬ ತಂದು ಯಿರಿಸಿದರೆ। ನಾಲ್ಕು ಬಿಲ್ಲೆಗಳ ವೊಂದಾಗಿ ಹಿಡಿದು। ನುರಿ ಯಿಕ್ಕಿ ಹಾಕಿದರೆ। ಕಮ್ಮಾರರು ತಿರುಗಿ ಬಿಡಿಸಲಾರದೆ ಅಷ್ಟನ್ನೂ ಕರಗಿ[ಸಿ]ಬೆಳಗಾಗಿ ಲಾಳವ ಮಾಡಿ ತಂದುಕೊಡುತ್ತ ಯಿಹರು। ಅವರು ಸನ್ನೆಯಲ್ಲಿ ಹಾಕಿದರು। ಅಲ್ಲಿ [ಯೂ] ಮುರಿದು ಹಾಕುವರು। ಈ ಸೀಮೆಯ ಜಟ್ಟಿಗಳು। ಅಲ್ಲಿಗೆ ಬಂದು ನೋಡಿ। ಯೀ ಸಾಧಕ ತಮಗೆ ಅಸಾಧ್ಯ ಯೆಂದು ಬರುವರೂ ಯೆಂದು। ಅಲ್ಲಿಯ ಬಲಾಬಲಗಳನ್ನು। ಗಜಪತಿ ಉಡುಗೊರೆ ಉತ್ಸಾಹ ತ್ಯಾಗಗಳ ಕೊಡುವಾಗ। ಆನೆ ಕುದುರೆ। ತಾಳಿಚಾಕುಳಿ (?)। ಕುಲಾಯಿ ಕಬಾಯಿ ದಟ್ಟಿ। ಅಡಕೆ ಯೆಲೆ ಕೊಡುವುದಲ್ಲದೆ। ಯೀ ದೇಶದಹಾಗೆ। ಉಡುಗೊರೆ ಅಡಕೆಯೆಲೆ ಕೊಟ್ಟು ಕಳುಹುವ ಕಟ್ಟಳೆಯಿಲ್ಲ। ಯೆಂದು ಮತ್ತೂ ಕಂಡ ಕಾರ್ಯ। ಕೇಳಿದ ಕಾರ್ಯ। ಆಲೋಚನೆಗಳು ಮುಂತಾಗಿ ಬಿನ್ನಹಂ ಮಾಡಿದುದಕ್ಕೆ ರಾಯರವರು। ಅಪ್ಪಾಜಿ ಮೊದಲಾದವರ ಕರೆಯ ಕಳುಹಿಸಿ ಈ ಪರ್ಯಾಯಗಳನ್ನೆಲ್ಲ ಹೇಳಿಸಲಾಗಿ। ಅವರು ಬಿನ್ನಹಂ ಮಾಡಿದ್ದು।

ಗಜಪತಿ ಪುಣ್ಯಶ್ಲೋಕನು। ತುರುಕರ ಹಾಗೆ ಅಲ್ಲ। ದೇವ ಬ್ರಾಹ್ಮಣ[ರಲ್ಲಿ] ವಿಶ್ವಾಸ ಉಂಟು। ಅದು ಹೇಗೆ ಯೆಂದರೆ। ಮುಕುಂದ ಜಗದೇವ[ನಿ]ಗೂ। ಶತ್ರುಗಳಾದ ದೊರೆಗಳು। ಜಗನ್ನಾಯಕರ ಪೂಜಿಸುವವರ ವೊಳಗು ಮಾಡಿಕೊಂಡು ನಿತ್ಯಕೃತ್ಯವೂ। ಜಗನ್ನಾಯಕರ ಸೇವಿಸಿ। ತೀರ್ಥವ ತೆಗೆದುಕೊಳ್ಳಲಾಗಿ। ಆ

---

1 ಮತ್ತ 2 ಗದ್ಯಕಾರಿ

ತೀರ್ಥದಲ್ಲಿ ವತ್ಸನಾಭಿಯು ಕಲಸಿಕೊಡು ಯೆಂದು ನೇಮಕವ ಮಾಡಲಾಗಿ | ಆ ದ್ರೋಹಿ | ಅದಕ್ಕೆ ವೊಳಗಾಗಿ ಸ್ವಾಮಿಯ ತೀರ್ಥದಲ್ಲಿ ವತ್ಸನಾಭಿಯು ಕಲಸಿ | ಸ್ವಾಮಿಯ ಸನ್ನಿಧಿಯಲ್ಲಿ ಗಜಪತಿಯವರಿಗೆ ಕೊಡಲಾಗಿ| ಆ ಪೂಜಾರಿಯ ಕೈ ನಡುಗಿ ಸಾಗಿತು | ಆಗ ಗಜಪತಿಯವರು ಕೈಯಿ ಯೇಕೆ ನಡುಗುತ್ತಾ ಯಿದೆ ಯೆಂದು ಕೇಳ ಲಾಗಿ | ಭಯಸ್ಥನಾಗಿಸಿಕೊಳ್ಳುವುದಕ್ಕೆ ಅಂಜಿ ಯಿದ್ದನಾದ ಕಾರಣ | ಅಂಜಬೇಡ ಹೇಳೂ ಯೆನ್ನಲಾಗಿ| ಶತ್ರುಗಳು ಮಾಡಿಸಿದ ಕಾರ್ಯವ ಹೇಳಿದನಾದ ಕಾರಣ | ಆ ವಿಷೋದಕವ ತಾ ಯೆಂದು ಕೈಲಿ ಹಿಡಿದುಕೊಂಡು ಸ್ವಾಮಿಯ ಸನ್ನಿಧಿಯಲ್ಲಿ| ಶ್ಲೋಕಾರ್ಥ |

"ಜಗದೀಶ್ವರನ ದಯವಿದ್ದರೆ | ಶತ್ರುವಾದರೂ ಮಿತ್ರನಹನು | ವಿಷವಾದರೂ ಪಥ್ಯವಹುದು | ಯೀಶ್ವರನ ದಯವಿಲ್ಲದಿದ್ದರೆ | ಯಿದೆಲ್ಲವೂ ವಿಪರೀತವಹುದು" | ಯೆಂದು ಶ್ಲೋಕವ ವೋದಿ | ಆ ತೀರ್ಥನ ತೆಗೆದುಕೊಳ್ಳಲಾಗಿ | ವಿಷ ಜೀರ್ಣಕ್ಕೆ ಬಂತು | ಯಿದು ಲೋಕಪ್ರಸಿದ್ಧ | ಹಾಗೆ ದೈವಜ್ಞರು ಯೆಂದು ಗಜಪತಿಯವರು ಗುಣಕಥನಗಳ ಯೆಣಿಸಿದವರಾಗಿ ಬೇಹಿನವರಿಗೆ ಉಡುಗೊರೆಯನ್ನು | ವೆಚ್ಚಕ್ಕೆ ಯಿನ್ನೂರು ವರಹವನ್ನೂ ಕೊಟ್ಟು ಆ ದೇಶಗಳಿಗೆ ಹೋಗಿ | ಅಲ್ಲಿಯ ಸುದ್ದಿಗಳನ್ನು ತಿಳಿದು ಬಂದು ಹೇಳಿ ಯೆಂದು | ವಾಯುವೇಗಿ ಹನುಮಂತಯ್ಯನನ್ನು | ಮನೋವೇಗಿ ಪುರುಷಾಮೃಗಯ್ಯನನ್ನೂ | ಕಳುಹಿಸಿ | ರಾಯರವರು | ಅಪ್ಪಾಜಿಯವರ ಕೂಡೆ| ದಿಕ್ಕಿನ ಸುದ್ದಿಗಳ ಕೇಳಿದಿರಿಯಲ್ಲಾ | ಮುಂದೆ ಕದಲಿ ಹೋಗುವ ಕಾರ್ಯಕ್ಕೆ ಆಲೋಚನೆಯೇನು | ಅಮರದ ದೊರೆ ಮನ್ನೆಯರಿಗೆಲ್ಲರಿಗೂ | ತಲೆಯ ತೊಳೆದುಕೊಂಡು ಪಯಣವಾಗಿ ಯಿರಹೇಳಿ | ಆವರವರಿಗೆ | ಉಡುಗೊರೆ | ಅಡಕೆ ಯೆಲೆಗಳ ಕೊಟ್ಟು ಯಿದ್ದೆವಾಗಲಾಗಿ | ಆಯತವಾಗಿ ಯಿದ್ದಾರೆ| ದಂಡಯಾತ್ರೆಗೆ ವೊಳ್ಳೆಯ ಮುಹೂರ್ತ ದಲ್ಲಿ ಹೋಗುವುದಕ್ಕೂ |ಪ್ರದೇಶಕ್ಕೂ | ಲಗ್ನವ ಯೇರ್ಪಡಿಸಿ ಹೊರ ಗುಡಾರವ ಹಾಕಿಸ ಹೇಳಿ ಅಪ್ಪಣೆಯ ಕೊಡಲಾಗಿ | ಅಪ್ಪಾಜಿ ರಾಯರ ಕೂಡೆ ತಿಳುಹಿ ಕೊಂಡದ್ದು|

ತುರುಕಾಣ್ಯದ ಮೇಲೆ ದಂಡೆತ್ತುವಾಗ | ಬೇಡನಾಯಕರನ್ನು ಕರೆಸಿ | ಹದಿನೆಂಟು ಕಂಪಣದವರಿಗೂ | ಅರಮನೆಯಲ್ಲಿ ಊಟಕ್ಕೆ ಯಿಕ್ಕಿ ಹರಿವಾಣದ ಕುಮಾರರು ಕೂಡಿ | ಕಾರ್ಯಮುಖಕ್ಕೆ ಕದಲಿ ಬರುತ್ತಾ ಯಿದ್ದೇವೆ | ತುರುಕಾಣ್ಯದ ಸೀಮೆಯೊಳಗೆ ಮೊದಲಾಗಿ | ಮೂರುಗಾವುದದೊಳಗಾಗಿ | ದನಕರುವು ಕುದುರೆಗಳು ಯಿರದ ಹಾಗೆ | [1]ಯಿವ[ಇ] ರಿಸಿದವರ[1]ನಡುವಿಗೆ ಹುಯ್ಯಿರಿ ಯೆಂದು| ಪಿಡಿದ

1 ಯಿವಿರಿಸಿದೆವರ

ಕೊಳ್ಳೈ ಸೂರೆ ನಿಮ್ಮ್ರದೂ ಯೆಂದು ಊಟಕ್ಕೆ ಯಿಕ್ಕಿದ ದಿವಸ | ಹದಿನೆಂಟು ಸಾವಿರ ಚಿನ್ನದ ತಳಿಗೆಯಲ್ಲಿ ಊಟವ ಮಾಡಿ | ಆ ತಳಿಗೆಯಲ್ಲಿ ಕುಮಾರರೆಲ್ಲರೂ ಕುಳಿತು ಊಟವ **ಮಾಡಿ** | ಹದಿನೆಂಟಾಗಿ ಕಡಿದು| ಪೊ[ಬ್ಬೊ]ಬ್ಬರು ಪೊಂದೊಂದು ತುಣುಕ ತೆಗೆದುಕೊಂಡು ಅದೆ ನಿರಪ್ಸ್ರುಣೆಯಾಗಿ ಶತ್ರುಗಳನ್ನು ಖಂಡಿಸುವರು | ಪೂರ್ವ ಮರಿಯಾದೆಯಲ್ಲಿ ಊಟಕ್ಕೆ ಯಿಕ್ಕಿಸಿ ಬೇಡ ದೊರೆಗಳ ಮುಂದಾಗಿ ಸರಹದ್ದಿಗೆ ಹೋಗಿ ಯೆಂದು ಆ ಬೆಂಬಳಿಯಲ್ಲೀ ಸ್ವಾಮಿಯವರು ಕದಲಿ ಹೋಗಬೇಕು ಯೆಂದು | ಬಿನ್ನಹಂ ಮಾಡಲಾಗಿ | ಆ ರೀತಿಯಲ್ಲಿ ಅರಮನೆಯಲ್ಲಿ ಊಟಕ್ಕೆ ಯಿಕ್ಕಿಸಿ | ಉಡುಗೊರೆ ಅಡಕೆ ಯೆಲೆ | ಕೊಟ್ಟು ಕಳುಹಲಾಗಿ | ಅವರು ನಮ್ಮ ಬಲ ಸಹಿತವಾಗಿ ಸರಹದ್ದಿಗೆ ಹೋದರಾಗಲಾಗಿ | ಅಪ್ಪಾಜಿಯವರು | ಉಮ್ಮತ್ತೂರು | ಶಿವನ ಸಮುದ್ರವ ಸಾಧಿಸಿ | ಶ್ರೀರಂಗಪಟ್ಟಣದ ಮಾರ್ಗವಾಗಿ | ಯಿಕ್ಕೇರಿಗೆ ನಡೆಯಬೇಕು ಯೆಂದು ಹೊರಗುಡಾರವ ಹಾಕಿಸಿ | ಪೊಳ್ಳೆ ಮುಹೂರ್ತದಲ್ಲಿ ಪಟ್ಟಣವ ಹೊರಡುವುದಕ್ಕೆ ಬ್ರಾಹ್ಮರಿಗೆ ಯಾತ್ರಾದಾನಗಳ ಕೊಟ್ಟು | ಅರಮನೆಯ ಹೊರಟು ರಾಜಮಾರ್ಗದಲ್ಲಿ ಬರುವಾಗ ಗರುಡ ದರ್ಶನವನ್ನು | ವಾಯಸ ತಿದ್ದಿಕೊಡುವುದನ್ನು ಯಿದಿರಾಗಿ ಕನ್ನಿಕಾ ಸಮೂಹವನ್ನೂ | ಭೇರಿ ಶಂಖನಾದ | ಯಿಬ್ಬರು ಬ್ರಾಹ್ಮರು| ದಧಿ ಕ್ಷೀರ ಫಲಕುಸುಮಗಳನ್ನು | ಪಾವಕನ ಉರಿಯನ್ನು| ಘನಕುಂಬ ಜಲಚರ ಯುಗಳಗಳನ್ನು | ಮಾಂಸಖಂಡವನ್ನು | ಗಜ ತುರಗ ವೃಷಭ ವೇಶ್ಯಾ ಸ್ತ್ರೀಯರನ್ನು | ಶುಭ ವಾರ್ತೆಗಳು ಮೊದಲಾದ ಶಕುನಗಳಿಂದ ಹೊರಗುಡಾರಕ್ಕೆ ಬಂದು ನಿಂತು | ದೊರೆ ಮನ್ನೆಯರು ರಾವುತ ಮಾವುತರು | ವಿನಿಯೋಗದವರು ಯೆಡಬಲದವರು ಯೆಲ್ಲರನ್ನು ಕರೆಸಿ ಅವರವರ ಕೂಡೆ ಮಾತನಾಡಿ | ಸ್ತ್ರೀಮಃ ಸಹಿತವಾಗಿ | ಬನ್ನಿಯೆಂದು ಅಮರನಾಯಕರ ಕೂಡ | ಅರಮನೆ ಕೈಸಂಬಳದವರ ಕೂಡ | ಅಪ್ಪಣೆಕೊಟ್ಟು ಪ್ರೆಂಬತ್ತು ಸಂಪ್ರತಿಯ ಕರಣಿಕರನ್ನು ಕರೆಯ ಕಳುಹಿಸಿ| ಅರಮನೆ ಲಿಕ್ಕ ಪ್ರಕಾರಕ್ಕೆ ಯೆಲ್ಲರನ್ನು ಬರಹೇಳಿ | ಆನೆ ಕುದುರೆ | ರಾವುತ | ರಾಣಾವೆ[ಯೆ]ಂಬಂಟು ನಂಟನು ಗಣಿತಿಯ ತೆಗೆದುಕೊಂಡು ಕರ್ನಾಟಕ ಸಿಂಹಾಸನ ಕುಳಸ್ವತಂತ್ರ ಸ್ವಾಮ್ಯ ಕಾಲುಗಾರರನ್ನು ಗುಂಪಲವರನ್ನು | ಪಾಳ್ಯಗಾರರನ್ನು | ಯೆಲ್ಲರನ್ನು | ಲಿಕ್ಕ ಪ್ರಕಾರಕ್ಕೆ ಬರಹೇಳಿ ನೀವು ಕೂಡ ಬನ್ನಿಯೆಂದು | ಕರಣಿಕರ ಕೂಡ | ಅವರವರ ಸ್ಥಾನಪತಿಗಳ ಕೂಡೆ | ವಿನಿಯೋಗ ಪೈಕದವರ ಕೂಡೆ ಅಪ್ಪಣೆ ಕೊಟ್ಟು | ದಂಡಯಾತ್ರೆಗೆ | ಜಯಧ್ವನಿ | ಭೇರೀತಾಡನ ಡಮಾಮಿಯನ್ನು ಟೂಕಿಸ ಹೇಳಿ | ಅಲ್ಲಿಂದ ಕದಲಿ ಪಯಣಾಗತಿಯಲ್ಲಿ | ಉಮ್ಮತ್ತೂರು ಶಿವನಸಮುದ್ರಕ್ಕೆ ಬಂದು | ಗಂಗರಾಜ ಪೊಡೆಯರ ಮೇಲೆ ಕಾರ್ಯವ ಮಾಡಿ | ಆ ಸ್ಥಳವ ಪೊಂದು ದಿನದಲ್ಲಿಯೆ ಸಾಧಿಸಿ | ಅಲ್ಲಿಗೆ ಊಳಿಗದವರ ಯಿರಿಸಿ ಶ್ರೀರಂಗಪಟ್ಟಣದ ಕೋಟೆಯ ನೋಡಿ | ಯಿಕ್ಕೇರಿ ಆಗರಕ್ಕೆ ಬಂದು | ಸಂಕುಳನಾಯಕ | ತೆಂಗಿ

ನಾಯಕರ ಕರೆಸಿ ಸೇನೆಯ ನೋಡಿ | ವಿಜಯಾಪುರದ ಸರಹದ್ದಿನ ಸ್ಥಳಕ್ಕೆ ನಡೆಯ
ಲಾಗಿ | ಸರಹದ್ದು ಕೋಟೆಯವರಾದರು | ದುರ್ಗದ ಕೋಟೆಯವರಾದರು | ಸ್ಥಳ
ಗಳ ಬಿಟ್ಟು ಹೋದರಾಗಲಾಗಿ | ಅಲ್ಲಿಂದ | ರಾಚೂರು | ಮುಡಿಗಲ್ಲು | ಆದವಾನಿ|
ಅದ್ವಂಕಿ ಸ್ಥಳಗಳ ವೊಂದು ವೊಂದು ದಿನಕ್ಕೆ ಸಾಧಿಸಿ | ಆ ಸ್ಥಳಗಳಲ್ಲಿ ತಾಣ್ಯ
ವಿರಿಸಿ | ಗೋಲಕೊಂಡೆಯವರ ಸರಹದ್ದಿನ ಸ್ಥಳಕ್ಕೆ ನಡೆಯಲಾಗಿ | ಅಲ್ಲಿಯ
ಮೂರುಬಗೆಯ ತುರುಕರನ್ನು ಯೆದಿರಿಸಿ | ಹೊಳೆಯ ದಾಟಿ | ಜಗಳಕ್ಕೆ ಬಂದು
ಡೆರಿಜಹಾಕಿ ಪಾಳ್ಯದ[ಲ್ಲಿ]ಯಿಳಿದರಾಗಲಾಗಿ | ಆವರ್ತಮಾನವ ಬೇಹಿನವರು ಬಂದು
ತುರುಕರ ಸರಹದ್ದು ದಾಟಿ | ಲಕ್ಷ ಕುದುರೆಯಿಂದ | ಸಾವಿರ ಆನೆಯಿಂದ | ಕೃಷ್ಣ
ವೇಣಿಯ ದಾಟಿ | ಬಂದು ಪಾಳ್ಯ[1]ದಲ್ಲಿಳಿದರು ಯೆಂದು | ಅವರವರ ದಲಬಲ
ಗಳನ್ನು | ಅವರಿರುವ ಉಧೃತ್ಯಗಳನ್ನು | ಅವರ ಸೀಮೆಯೊಳಗೆ ನಮ್ಮ ಬಗೆಯವರು
ವೊಳಹೊಕ್ಕು ಹೋಗಿ | ಸೀಮೆಯಾದ್ಯಂತ | ಮೂರುಗಾವುದ[2]ವಪಕಾರ[2]ವ
ಮಾಡಿ ಹೋಗುತ್ತಾ ಯಿದ್ದಾರೆ ದುರ್ಗದಲ್ಲಿ ಯಿದ್ದವರು ಜತನವಾಗಿ ಯಿದ್ದಾರೆ
ಯೆಂದು ಬಿನ್ನಹಂ ಮಾಡಲಾಗಿ | ರಾಯರವರು ಕೇಳಿ | ತುರುಕರು | ಯಿದಿರಾಗಿ
ಬಂದು ಯಿಳಿದು ಕೊಂಬುದಾಯಿತೆ ಯೆಂದು ಆಗ್ರಹಿಸಿ | ಅಮರನಾಯಕರ ವೊಳಗೆ
ಪೆಮ್ಮಸಾನಿ ಲಿಂಗನಾಯಕನ ತುರುಕ ಕಾರ್ಯ ವೆಂಬುದೆಷ್ಟು ಯಿದ್ದಿತು ಯೆಂದು
ಕರೆಯ ಕಳುಹಿಸಿ | ತುರುಕರು ಕೃಷ್ಣವೇಣಿಯ ದಾಟಿ ಬಂದು ಡೆರಿಜವ ಹಾಕಿ ಪಾಳ್ಯವ
ಯಿಳಿದರಂತೆ | ಯಿದಕ್ಕೆ ಹೇಗೆ ನಡೆಯಬೇಕು ಯೆಂದು ಕೇಳಿದುದಕ್ಕೆ | ರಾಮಲಿಂಗ
ನಾಯಕ | ತುರುಕ ಕಾರ್ಯವೆಂಬುದೆಷ್ಟು ಯಿದ್ದಿತು | ಡೆರಿಜ ಹಗ್ಗಗಳ ಕೊಯ್ದು
ಗುಡಾರವ ದಬ್ಬಿಸುತ್ತ ಯಿದ್ದೇನೆ | ಆವಾಗ ಡೆರಿಜ ಬೀಳುತ್ತಯಿದೆಯೋ | ಆಗ
ಭೇರಿ ತಾಡನವ ಮಾಡಿಸಿ ಸ್ವಾಮಿಯವರು ನಡೆದರೆ | ತುರುಕರು ದಿಕ್ಕು ದಿಕ್ಕಿಗೆ
ವೋಡಿ | ಮೂರುಬಗೆ ದೊರೆಗಳೂ | ಯಥಾ ಯಥವಾಗಿ ತಮ್ಮ ತಮ್ಮ ಸ್ಥಳಕ್ಕೆ
ಹೋದಾರು [3]ಕ್ಷಿಪ್ರ[3] ಕಾಲದಲ್ಲಿ ಹಸಿವು ತೃಷೆ ತಾಳಿ ಅವರೇನು ನಿಂತಾರು ಯೆಂದು
ಬಿನ್ನಹಂ ಮಾಡಿ | ತನಗೆ ಅಪ್ಪಣೆ ಕೊಡಿ ಯೆನ್ನಲಾಗಿ | ರಾಯರವರು ಬಹಳ
ಸಂತೋಷ ಬಿದ್ದು | ರಾಮಲಿಂಗನಾಯಕಗೆ ವೀಳ್ಯವ ಕೊಟ್ಟು ಕಳುಹಿಸಲಾಗಿ ರಾಮ
ಲಿಂಗನಾಯಕನು | ತನ್ನ ಬ[ಳಿ]ಗೆ ತಮ್ಮ ದೊರೆತನದವರೆಲ್ಲರನ್ನು ಕರೆಸಿಕೊಂಡು |
ತಮ್ಮ ಸ್ವಾಮಿಕ್ಕೆಲ್ಲಕ್ಕು ಯಿಷ್ಟು ದಿವಸವೂ ರಾಯಉಂಬಳಿಯ ಊಟವ ಮಾಡಿ
ಬದುಕಿದೆವು | ಯೀಗ ಆಳಿದವರಿಗೆ ಕಾರ್ಯ ಉಂಟಾಗಿ | ಆಣಿ ಮೊನೆಗೆ | ಯಿದಿರಾದ
ವರ ಮೇಲೆ ನಡೆಯೆಂದು | ಬಹುಮಾನವಾಗಿ ವೀಳ್ಯವ ಕೊಟ್ಟು ಕಳುಹಿಸಲಾಗಿ
ಬಂದೆನು | ಆ ಬಹುಮಾನ ನಿಮ್ಮದು | ನಿಮ್ಮಿಂದ | ಮಾತಿನ ವಾಸಿ[ಯೂ] | ಅಭಿ

1 ದಿ 2 ವಕಪಾರ 3 ಕ್ಷಿಪ್ಪ

ಮೋಕ್ಷವೂ | ಮುಂದಕ್ಕೆ ತಮ್ಮ ಕುಲದವರಿಗೆ ಬದುಕೂ | ಸ್ವರ್ಗಾದಿಭೋಗವೂ ಉಂಟಾಗಿ ನಡೆದುಕೊಂಬುದಕ್ಕೆ ಯಿದು ಸಮಯ|ತನ್ನ ಸಂಗಡ ಬಾಹವರೆಲ್ಲರು ನಡೆಯಿರಿ ಯೆಂದು ಮೊದಲು ತಾನೆ ನಡೆಯಲಾಗಿ ಆತ ಸಂತರಿಸಿದ ಅರುವತ್ತು ಸಾವಿರ ಗಡೆ (?) ಯವರೊಳಗೆ ಆರುಸಾವಿರ ಗಡೆಯನರು ರಣಕ್ಕೆ [1]ಮದುವಳಿಗ[1]ರಾಗಿ ಯಿಲ್ಲಿ [ಯೆ] ಆಸೆಪಾಸೆಯನ್ನು ಬಿಟ್ಟು | ಅನಿಮಿಷ ದೃಷ್ಟಿಯಿಂದ ರಾಮಲಿಂಗನಾಯಕನ ಸಂಗಡ ನಡೆಯಲಾಗಿ | ತುರುಕರು ಯೀ ವಾರ್ತೆಯ ಕೇಳಿ | ಡೆರಿಜುಬೀಳಲಿ | ಭೇರಿ ಸಹಿತವಾದ ಬಿಚ್ಚುಗತ್ತಿಯ ರಾವುತರು ಯೆರಡು ಸಾವಿರಕ್ಕೂ | ಅವರ ಸುತ್ತ ತುಂಬ ಮುಸ್ತೈದೆ ಕುದುರೆಗಳ | ಆರು ಸಾವಿರಕ್ಕೂ | ಅವರ ಬಳಸಿಯಿರುವ ಮದ್ದಾನೆ ಸಾವಿರಕ್ಕೂ ಯೀ ರೀತಿಯಲ್ಲಿ ಡೆರಿಜಿನ ಬಳಿಯಲ್ಲಿ ಯಿರಿಸಿ | ಆ ಮೂರು ಬಗೆ ತುರುಕರು ತಮ್ಮ ಪಾಳ್ಯದೊಳ[1][ಗೆ ಆ][1]ಯತವಾಗಿ ಯಿರಲಾಗಿ| ರಾಮಲಿಂಗನಾಯಕನು| ಕುದುರೆಯ ಯಿಳಿದು | ತನ್ನ ಸೋಡಿಕೊಂಡು ನಡೆ[ಯಿರಿ]ಯೆಂದು ಆನೆ ಮೇಲೆ ನಡೆದು ಮದ್ದಾನೆಗಳ ತುಂಡುಗಳಾಗಿ ಕಡಿದು ಮಾವುತರನ್ನು ತಿವಿಯಲಾಗಿ | ಆನೆಗಳ ಬಾರಿ ತೊಲಗಿತು | ಆ ದಿಕ್ಕಿನಲ್ಲಿ ಸಾವಿರಕ್ಕೆ ಬಿತ್ತು ಕುದುರೆಯ ಬಾರಿಯ ಮೇಲೆ ನಡೆಯಲಾಗಿ | ಕುದುರೆಗಳ ಕುರು[2]ಬಿ[2]ಟ್ಟಿಗಳಿಂದ ಸೋಯಿಸಲಾಗಿ | ಕುದುರೆಗಳ ಬಾರಿ | ಹಿಂದು ಮುಂದಾಗಿ ಸಾವಿರಕ್ಕೆ ಬಿತ್ತು | ಕೈಸಂಬಳದ ಬಿಚ್ಚುಗತ್ತಿ ರಾವುತರ ಮೇಲೆ ಜಗಳವ ಮಾಡಲಾಗಿ ಸಮಾನವಾಗಿ ನಾಲ್ಕು ಸಾವಿರಕ್ಕೆ ಯೆರಡು ಸಾವಿರಕ್ಕೆ ಬಿತ್ತು | ಅಷ್ಟರಲ್ಲಿ ಡೆರಿಜ ಹಗ್ಗಗಳ ಬೀಳಹಾಕಿದಾಕ್ಷಣದಲೆ ಕೃಷ್ಣರಾಯರು ಭೇರಿತಾಡನವ ಮಾಡಿಸಿ ಮದ್ದಾನೆಯ ಹತ್ತಿಕೊಂಡು | ಉಭಯ ಚಿಹ್ನೆ ಮಕರ ರೆಕ್ಕೆಯಿಂದ ನೂರು ಘಟ ಆನೆಯೂ | ನಾಲ್ವತ್ತು ಸಾವಿರ ಕುದುರೆಯೂ | ಆಯ್ದು ಲಕ್ಷ ಕಾಲ್ಬಲವೂ ಸಹ ನಡೆದರು | ಆ ಕ್ಷಣದಲ್ಲೆ ಕೃಷ್ಣವೇಣಿ ಯೆರಡು ದಡ ತುಂಬಿ ಹೊಳೆ ಬಿರುಸಾಗಿತ್ತು | ಜಗಳಮುಖಕ್ಕೆ ಆನೆಯ ಮೊನೆ ಮಾಡಿದರೆ [3]ಕ್ಷಿಪ್ರ[3] ಕಾಲದಲ್ಲಿ ಬಿಸಲಲ್ಲಿ ಪೆಟ್ಟುಬಿದ್ದು ಕಂಗೆಟ್ಟು ನೀರಿಗೆ ಆನೆಗಳು ಮುಖವಾಗಲಾಗಿ ತಣ್ಣನೆ ಗಾಳಿಯೆತ್ತಿ ಕಾಲುಮೀರಿ ಕೃಷ್ಣವೇಣಿಯೊಳಗೆ ಹೋಗಿ ಬಿದ್ದವು | ಕುದುರೆಗಳೂ ರಾವುತರೂ ಹೊಳೆ ನೀರಿಗೆ ಬಿದ್ದರು | [4]ಯಿದ್ದಲ್ಲೆ[4]ಯಿದ್ದರೆ ಕಾರ್ಯವಲ್ಲ ಯೆಂದು ಆನೆಯ ಸಂಗಡಲೆ ತಿರುಗಿದರು | ಮೊದಲ ದೊರೆಗಳು | ಮೂವರು ತುರುಕರು | ದೈವಿಕವಾಗಿ ಹಿಂದುಗಡೆಯಲ್ಲಿ ಹೊಳೆ ಬಂದು ಯಿದೆ | ಯಿಲ್ಲಿ ಪಾಳ್ಯವಿಳಿದು ಜಗಳವ ಕೊಟ್ಟೆವೆಂದರೆ | ರಸ್ತು ಸಾಮಗ್ರಿಯು ನಡೆಯವು ಯೆಂದು | ನಿಯೋಗಿಗಳ ಕೂಡೆ ಆಲೋಚನೆಯನ್ನು ಮಾಡಿದರೆ | ಅವರು ಯೆಲ್ಲವಕ್ಕೂ ಹೊಳೆಯ ದಾಟ[5]ಯಾದಲ್ಲಿ[5] ನಿಂತರೆ ಸರಿಬಂದ ಹಾಗೆ ನಡೆದುಕೊಂಬಾ

---

1 × × 2 ಬಿ 3 ಕ್ಷಿಪ್ರ 4 ಯೀದಲೆ 5 ಆದೆಯಲ್ಲಿ

ಯೆಂದು | ಸೀಮೆಗೆ ತಿರುಗಲಾಗಿ ಯೆಲ್ಲರೂ ಹೊಳೆಯು ತುಂಬು ಬಂತು | ರಾಯರ ವರು ಬೆಂಬಳಿಯಿಂದ ನಡೆದು ಜಗಳವ ಮಾಡಲಾಗಿ | ಯೆಲ್ಲರೂ ಹೊಳೆ[ಯು]ಲಿ ಬಿದ್ದರಾಗಲಾಗಿ | ಯೆರಡು ಪಾಲು ಹೊಳೆ[ಯು] ಲಿ ಹೋದರು | ವೊಂದು ಪಾಲು ದಕ್ಷಿಣದಲ್ಲಿ [1]ಗಟ್ಟದಲ್ಲಿ[1] ನಿಂತರು | ಆನೆಯೆಲ್ಲವೂ ನೀರಬಿಟ್ಟು ಹೊರಡಲಿಲ್ಲವಾಗ ಲಾಗಿ | ಮಾವುತರು ಯಿಳಿದು ಹೋದರು | ಆಮೇಲೆ ಮೂರು ಬಗೆಯ ತುರುಕರೂ ವೋಡೆಯ ಮೇಲೆ ಹೊಳೆಯ ದಾಟಿ | ಆಲೋಚನೆ ಪರರಾಗಿ ಯೀ ಸಮಯದಲ್ಲಿ ನಿಲ್ಲುವುದು ಕಾರ್ಯಗತಿಯಲ್ಲ | ತಮ್ಮ ಸ್ಥಳಕ್ಕೆ ಹತ ಶೇಷರನ್ನು ಕೂಡಿಕೊಂಡು [2]ಗ[2]ಟ್ಟ ಹತ್ತಿದ ಆನೆಗಳು ಕೂಡಿ | ವಿಜಯಾಪುರ | ಅಮದಾನಗರ | ಗೋಲ ಕೊಂಡೆ ಸ್ಥಳಕ್ಕೆ ಹೋದರು ಆಗಲಾಗಿ | ರಾಯರವರು ಕೃಷ್ಣಾನದಿಯ ತಡಿಗೆ ಬಂದು ನಿಂತು | ಆ ಮೂರು ಬಗೆಯವರ ಆನೆ ಕುದುರೆಯನು ಅರಮನೆಯಲ್ಲಿ ಕಟ್ಟಿ ಯೆಂದು ಅಪ್ಪಾಜಿ ಮೊದಲಾದ ನಿಯೋಗಿಗಳ ಕೂಡೆ | ಅಲ್ಲಸಾನಿ ಪೆದ್ದಿರಾಜ | ಮುಕ್ಕು ತಿಮ್ಮಯ್ಯ ಮೊದಲಾದ ಕವೀಶ್ವರರ ದಿಕ್ಕ ನೋಡಿ ಯಿಂದಿನ ಜಯ ಹೇಗೆ ಯೆಂದು ಕೇಳಿದುದಕ್ಕೆ ಮುಕ್ಕು ತಿಮ್ಮಯ್ಯ ಹೇಳಿದ ಪದ್ಯ*

ಕೃಷ್ಣರಾಯ ನಿನ್ನ ಹೆಸರ ಹೊಳೆ | ತುರುಕರ ವೋಡಿಸಲಾಗಿ | ಆನೆಗಳು [3]ಕರಿ[3]ರಾಜವರದನು ಬಂದನು ಯೆಂದು | ತಿರುಗಿ ಹೋದವು ಯೆಂದು | ಕೊಂಡ ಮರಸರು | ಮುಕ್ಕು ತಿಮ್ಮಯ್ಯ | ಅಲ್ಲಸಾನಿ ಪೆದ್ದಯ್ಯ ಮಾಡಯ್ಯನವರ ಮಲ್ಲಯ್ಯ ಮೊದಲಾದವರು ಬಿನ್ನಹಂ ಮಾಡಲಾಗಿ | ಅಪ್ಪಾಜಿ | ಅಯ್ಯಪ್ಪರಸರು | ಕೊಂಡ ಮರಸರು | ಅನೇಕ [4]ಸ್ತೋತ್ರ[4] ವನ್ನು ಮಾಡುವುದಕ್ಕೆ | ಕೃಷ್ಣವೇಣಿ ಯೀ ಸಮಯದಲ್ಲಿ ತುಂಬು ಹೊಳೆಯಾಗಿ ಬಂದುದರಿಂದ | ಮ್ಲೇಚ್ಛರು ಅಪಜಯವಾಗಿ ನಿಲಲರಿಯದೆ ಹೋದಹಾಗೆ ಆಯಿತು ಹೊಳೆ ಕಾಲುನಡೆಯಾದರೂ | ಸಂಗಡಲೆ ಮುಂದೆ ಕಾರ್ಯಮುಖಕ್ಕೆ ನಡೆಯಬೇಕು | ಆಷಾಢ ಶ್ರಾವಣ | ಯೀ ಯೆರಡು ತಿಂಗಳ ವೊಳಗೆ ಹೊಳೆಗೆ ದಕ್ಷಿಣವಾಗಿ ಯಿದ್ದ ತುರುಕರ ದುರ್ಗಗಳನ್ನು ಸ್ಥಳಗಳನ್ನು| ಕೈವಶವ ಮಾಡಿ | ಆಮೇಲೆ ಅಮದಾನಗರ ಪರಿಯಂತರವೂ ಹೋಗಿ ಬರಬೇಕೆಂದು ಬಿನ್ನಹಂ ಮಾಡಿದುದಕ್ಕೆ ಕೃಷ್ಣರಾಯರು | ನೀವು ಹೇಳಿದ್ದು ಕಾರ್ಯಗತಿಯಹುದು | ಮೊದಲಾಗಿ ಹೊಳೆಯ ದಾಟಿ ತುರುಕರ ರಾಜ್ಯದ ವೊಳಕ್ಕೆ ಹೋದರೆಗ ಜಪತಿಯವರ ಸೀಮೆಯಲ್ಲಿ ಯಿದ್ದ | ಉದಯಗಿರಿ | ಕಂದಕೂರು | ಕೊಂಡವೀಡು | ವಿನಿಕೊಂಡೆ | ಬೆಲ್ಲಕೊಂಡೆ | ನಾಗಾರ್ಜುನ ಕೊಂಡೆ ಮೊದಲಾದ ದುರ್ಗದಲ್ಲಿ ಯಿದ್ದವರು ರಸ್ತು

1 ಗಟ್ಟಸಲ್ಲಿ 2 × 3 ಕವಿ 4 ಸ್ತೊತ್ರ

*ಪದ್ಯದ ಉಲ್ಲೇಖವಿಲ್ಲ

ಸಾಮಗ್ರಿಯು ಬಾರದ ಹಾಗೆ ಮಾರ್ಗ ನಡೆಯದ ಹಾಗು [1]ಕಟ್ಟುವರು[1]। ಹಾಗಾಗದ ಹಾಗೆ ಮೊದಲ ಹಾಗೆ ಆ ಸ್ಥಳಗಳ ಸಾಧಿಸಿ। ದುರ್ಗಗಳಿಗೆ ನಮ್ಮ ಬಗೆ ಠಾಣ್ಯವಿರಿಸಿದರೆ ರಸ್ತು ಸಾಮಗ್ರಿಯು ನಡವುದೂ ಯೆಂದು ಅಪ್ಪಣೆ ಕೊಟ್ಟರಾಗಲಾಗಿ। ಹತ್ತಿರಿದ್ದ। ಹಿರಿಯರು। ಕಿರಿಯರು। ಕಾರ್ಯವಾಗಿ ಯೆಣಿಸಿ ಮುಂದಕ್ಕೆ ಹೋಗುವ ಯತ್ನ ಕಾಣಬೇಕು ಯೆಂದರಾಗಲಾಗಿ। ರಾಯರವರು ರಾವುತ ರಾಣುವೆ ದೊರೆ ಮನ್ನೆಯರೆಲ್ಲರಿಗೂ ಪಯಣವ ಹೇಳಿಸಿ। ಭೇರಿ ಡಮಾಮಿ ಕಹಳೆಗಳವರನ್ನು ಕರೆಸಿ ಕೂಚಿಮಾಡಿ ಯೆನ್ನಲಾಗಿ ಅವರು ಭೇರಿಯ ಪೂಜೆ ಮಾಡಿಸಿ ಟೂಕಿಸಿದ ಜಯಧ್ವನಿ। ಪದ್ಯ*

ಯೀ ರೀತಿಯಲ್ಲಿ ಕೂಚಿ ಮಾಡಿ। ಗುತ್ತಿ। ಗಂಡಿಕೋಟೆ ಮಾರ್ಗವಾಗಿ ಉದಯಗಿರಿಗೆ ಬಂದು ಲಿಗ್ಗೆಹತ್ತಿ। ದುರ್ಗದೊಳಗೆ ಯಿದ್ದವರು। ತಮ್ಮ ಕೈಲಾಪಪ್ಪು ಜಗಳವ ಮಾಡಿ। ನಿರ್ವಹಿಸಲಾರದೆ ಕವಲ ಕೇಳಲಾಗಿ। ಕೊಡಿಸಿ। ಶೌತ್ರವರು ದುರ್ಗವಿಳಿದು ಬಂದಮೇಲೆ। ರಾಯರು ದುರ್ಗವ ಹತ್ತಿನೋಡಿ। ಅಲ್ಲಿ ಊಳಿಗದ ಕೆಂಪಣ್ಣನ ಠಾಣ್ಯವಿರಿಸಿ। ಕಂದುಕೂರಿಗೆ ಹೋಗಲಾಗಿ ಭೇರಿಯ ಧ್ವನಿಯ ಕೇಳಿ। ಕೋಟೆಯ ವೊಳಗಣವರು ಹೊರಟು ಹೋದರಾಗಲಾಗಿ ಆ ಸ್ಥಳದಲ್ಲಿ ಠಾಣ್ಯವಿರಿಸಿ। ಕೊಂಡವೀಡಿಗೆ ಕದಲಿ ಹೋಗುವಾಗ। ಮಾರ್ಗದಲ್ಲಿ ಹೂಡೆಯ(?)ದವರು। ಸೇನಾಸಮುದ್ರ ಕದಲಿ ಬಾಹಾಗ। ಧೂಳಿ। ಆಕಾಶವ ಮುಟ್ಟಿತಾಗ ಲಾಗಿ। ಸ್ಥಳಗಳ ಬಿಟ್ಟು ಹೋಗುವವರು। ಕಹಳೆ ಧ್ವನಿಯ ಕೇಳಿ ಪರಸ್ಥಳಕ್ಕೆ ಹೋಗುವರು। ಈ ರೀತಿಯಲ್ಲಿ ಕೋಟೆ(ಟೆ?)ದುರ್ಗಗಳಲ್ಲಿ ಯಿದ್ದವರು ಸ್ಥಳಭ್ರಷ್ಟರಾಗಿ। ತಮ್ಮ ದೊರೆಗಳಿದ್ದ [2]ಠಾ[2]ವಿಗೆ ಹೋದರು। ಬೇಡರು ಹದಿನೆಂಟು ಮಂದಿ ಕಂಪಣದವರು। ಲಕ್ಷ ಪಾಯಿದಳವ ಕೂಡಿಕೊಂಡು ಕೊಂಡವೀಡು। ಬೆಲ್ಲಂಕೊಂಡೆ। ವಿನಿಕೊಂಡೆ ಮೊದಲಾದ ಸೀಮೆಯಾದ್ಯಂತವ ಕಪೂರವ ಮಾಡಿದರಾಗ ಲಾಗಿ ಸೀಮೆಯೊಳಗುಳ್ಳ ಪ್ರಜೆಗಳೆಲ್ಲರು ಸೇರತಕ್ಕ ದುರ್ಗಗಳನ್ನು ಸೇರಿದರು। ಕೊಂಡವೀಡಿಗೆ ಹೋಗಿ ಜಗಳವ ಕೊಡಲಾಗಿ ಚೂಣಿಯ ಬಲದವರಿಗೆ ಮುರಿದು। ಕೊಂಡವೀಡನ್ನು ಬಿಟ್ಟು ಹೋದರಾಗಲಾಗಿ। ರಾಯರು ದುರ್ಗವೇರಿ ನೋಡಿ। ಸಿದ್ದರಾಜರ ವಶವ ಮಾಡಿ ಕೊಂಡಪಲ್ಲಿಗೆ ಹೋದರಾಗಲಾಗಿ। ದುರ್ಗದೊಳಗಣವರು। ತಮ್ಮ ಕೈಲಾದ ಹಾಗೆ ವೊಂದು ದಿನವೆಲ್ಲ ಹೋರಿಯಾಡಿ। ರಾತ್ರಿಯಲ್ಲಿ ದುರ್ಗವ ಬಿಟ್ಟು ಹೋಗಲಾಗಿ। ದುರ್ಗವ ಕೊಂಡಯ್ಯನ ಹವಾಲ ಮಾಡಿ। ವಿನಿಕೊಂಡೆಗೆ ನಡೆದು ಜಗಳವ ಮಾಡಲಾಗಿ। ಫಿರಂಗಿ ದನಿಯ ಕೇಳಿ। ವಿನಿಕೊಂಡೆಯವರು

1 ಕಟ್ಟೂರು 2 ಥಾ
*ಪದ್ಯದ ಉಲ್ಲೇಖವಿಲ್ಲ.

ಬಿಟ್ಟುಹೋದರು | ಆ ಸ್ಥಳದಲ್ಲಿ ಅಲ್ಲಯ್ಯನವರನಿರಿಸಿ | ಅನುದಾನಗಳಕ್ಕೆ ಹೋಗಿ | ಚೂಣಿಯವರು ಹೊರಪಾಳ್ಯವನ್ನೆಲ್ಲ ಕಪೂರವ ಮಾಡಲಾಗಿ | ಕೋಟೆಯ ಮೊಳಗಣವರು ಹೊರಟು ಬಂದು ಜಗಳವ ಮಾಡಲಾಗಿ | ರಾವುತ ರಾಣುವೆಯವರು | ಕಾಣಿಸಿಕೊಳ್ಳಲಾಗಿ | ಯಿದಿರಾದವರ ತೆಗೆದು ಹೋಗಲಾಗಿ | ಅವರ ಬೆನ್ನಹತ್ತಿ ಹೋಗದೆ| ಅಲ್ಲಿ ಸಿಂತು ಹೊರಪಾಳ್ಯವನೆಲ್ಲ ಉಳಿಸಿ ಹರಳ ಬಿತ್ತಿಸಿ| ಅಲ್ಲಿಂದ ಗಜಪತಿ ರಾಜ್ಯಕ್ಕೆ | ನಡೆಯಲಾಗಿ | ಅಪ್ಪಜಿ ರಾಯರವರ ಕೂಡೆ ಮೂರುಬಗೆ ತುರುಕರ ರಾಜ್ಯವನೆಲ್ಲ ಕಪೂರವ ಮಾಡಿ | ದುರ್ಗಗಳನ್ನು ಸ್ಥಳಗಳನ್ನು | ಗಜಪತಿಯವರ ದುರ್ಗಗಳನ್ನು | ಆಕ್ರಮಿಸಿದಹಾಗೆ ಆಯಿತು | ಮುಂದೆ ಕದಲಿಹೋಗುವುದು ಕಾರ್ಯವಲ್ಲ | ಕಣಿವೆಗಳ ದಾಟಿ ಹೋಗಬೇಕು | ಕಣಿವೆಯಲ್ಲಿ ಯಿದ್ದ ಗಜಪತಿಯ ರಾಜ್ಯದವರು | ರಸ್ತ್ತ ಸಾಮಗ್ರಿಯವ ಬರಲೀಸರು [1]ದಳವ[1]ಹೋಗಲೀಸರು ಯೆಂಬ ಆಲೋಚನೆಯ ಬಿನ್ನಹಂ ಮಾಡಿದುದಕ್ಕೆ | ರಾಯರವರು ಚಿತ್ತದಲ್ಲಿ ಯೆಣಿಸದೆ ಮುಂದಕ್ಕೆ ಕದಲಿ ಹೋಗಬೇಕು ಯೆಂಬ ದೃಷ್ಟಿಯಲ್ಲಿ | ಅಪ್ಪಾಜಿ ಬಿನ್ನಹಂ ಮಾಡಿದುದಕ್ಕೆ ಅಹುದಲ್ಲ ಯೆನ್ನದೆ ಕದಲಿ ಹೋಗಲಾಗಿ | ಕಣಿವೆಯಲ್ಲಿ ಬೆತ್ತಾಬುಖಾನನೆಂಬುವನು | ಅರುವತ್ತು ಸಾವಿರ ಪಿಂಗಾಡಿಯ ರಾವುತರ ಕೂಡಿಕೊಂಡು | ಉಭಯ ಪಾರ್ಶ್ವದಲ್ಲಿ ನಿಂತು | ಮಾರ್ಗದಲ್ಲಿ ಹೋಹ ರಾವುತ ರಾಣುವೆಯ ಮೇಲೆ ಚಿತ್ತೆ ಮಳೆಯಪ್ಪಂದಕ್ಕೆ ಅಂಬುಗಳ ಸುರಿಯಲಾಗಿ | ನಿಂತು | ಅಲ್ಲಿ ತಪ್ಪಿಸಿಕೊಂಬವರು | ಅಂಬುಗಳಿಗೆ ಯಿದಿರಾಗಿ | ನಿಲುವವರು | ಹಿಂದುಮುಂದಾಗುವವರು | ಅಲ್ಲಲ್ಲಿಯೆ ನಿಂತಂಥವರು | ಯೀ ರೀತಿಯಲ್ಲಿ | ಜಗಳವ ಮಾಡುವ ಸಮಯದಲ್ಲಿ | ಕರ್ನಾಟಕದ ಕೈಸಂಬಳದ ಕುದುರೆಗಳು ಬೆತ್ತಾಬುಖಾನನನ್ನು | ಹೆಡತಲೆಯ ಪೆಟ್ಟಾಗಿ | ಉಭಯ ಪಾರ್ಶ್ವದಲ್ಲೂ ನಿಂತು ಜಗಳವ ಮಾಡಲಾಗಿ | ಅವರಿಗೆ ಕಣಿವೆಗಳಲ್ಲಿ ನಿಲಕೊಡದೆ ತೆಗೆದುಹೋದರು | ಅದು ಕಾರಣ ಬೆನ್ನಹತ್ತಿ ಸಂಗಡ ಹೋಹವರನ್ನು | ದುರ್ಗವ ಹೋಗಲೀಸಿ ತಿರುಗಿ ಬಂದು ಆಮೇಲೆ ಬಲವೆಲ್ಲವೂ ಮುಂದಕ್ಕೆ ಕದಲಿ ಹೋದರಾಗಲಾಗಿ | ಕಣಿವೆಯಲ್ಲಿ ಯಿಪ್ಪತ್ತು ಸಾವಿರಕ್ಕೆ ಠಾಣ್ಯವಿರಿಸಿ | ಪಟ್ಟೂರಿಗೆ ಹೋಗಿ | ಸಿಂಹಾದ್ರಿಯ ಬಳಿಯಲ್ಲಿ ಪಾಳ್ಯವಿಳಿದು ಯಿರಲಾಗಿ | ಯೀ ವರ್ತಮಾನವ ಗಜಪತಿ ಕೇಳಿ | ಯೆದುಲಶಾಹ | ಕುತುಬನ ಮಲುಕ | ನಿಜಾಮುಶಾಹರವರು ಮುರಿದು ಮೋಡಿ ಸ್ಥಳಕ್ಕೆ ಬಂದರು | ಮೂರು ದುನ್ನೆದಾರರನ್ನು ಮೋಡಿಸಿದಂಥ ಬಲವಂತರಿಗೆ| ತಾವು ಯೇಕದೇಶವಾಗಿ | ಹೋರಿಯಾಡುವುದು | ಆವ ರೀತಿಯೆಂದು | ಆಪ್ತಾಲೋಚನೆಯ ಮಾಡಲಾಗಿ | ಅವರು ಗಜಪತಿಯ ಕೂಡೆ | ಸಮ್ಮ ಸಿಂಹಾಸನಕ್ಕೆ ಉಂಟಾದವರು | ಷೋಡಶ ಪಾತ್ರರು | ಅವರ ಭುಜಬಲ ಪರಾಕ್ರಮದಿಂದ |

---

1 ಸದಳವ (ಸಬವ ?)

ಕ್ಷೋಣಿಮಂಡಲ ಆಳಿಬಂತು | ಯೀವರೆಗೆ ಯೆಂದುದನ್ನು | ಕರ್ನಾಟಕದವರು ನಮ್ಮ ಸೀಮೆಗೆ ಬಾರದವರಲ್ಲ | ದೊತ್ತ ಗಜಪತಿಯವರು | ತಮ್ಮ ದಿನದಲ್ಲಿ [1]ಸೇತು[1] ದರ್ಶನಾರ್ಥವಾಗಿ | ಕಾಳಹಸ್ತಿಗೆ ಬಂದು | ಕುಂಭಕೋಣೆ ಮಾರ್ಗವಾಗಿ | ಸೇತುವಿಗೆ ಹೋಗಿ ಬರುವಾಗ | ಸಂಗಡ ಬಂದ ಮ್ಲೇಚ್ಛರು | ಅವರ ಸೀಮೆಯೊಳಗುಳ್ಳ | ದೇವರುಗಳಿಗೂ | ಕೆರೆಗಳಿಗೂ | ಹಾನಿಮಾಡಿ ಯಿಹರು | ಅದಲ್ಲದೆ ಅವರ ಸೀಮೆಯೊಳಗೆ | ಕೆಲವು ಸ್ಥಳಗಳನ್ನೂ ಆಕ್ರಮಿಸಿಯಿಹರು | ಅದು ಮನಸ್ಸಿನಲ್ಲಿ ಇರಿಸಿ ಕೃಷ್ಣರಾಯರವರು ಕಾರಣಜನರಾದ ಕಾರಣ | ಪಾಡು ತಿರುಗಿಸಿ ಕೊಂಬುದಕ್ಕೋಸ್ಕರ | ತುರುಕರಾದಂಥಾವರ ಮುರಿ ಹೊಯ್ದು ನಮ್ಮ ಸೀಮೆಗೆ ಬಂದು ಗಿರಿದುರ್ಗ | ವನದುರ್ಗ | ಜಲದುರ್ಗಗಳ ವರುಷ ಬೆಂಬಳಿಯಲ್ಲಿ ಹೋರಿಯಾಡಿ | ಸಾಧಿಸಬಾರದ ಸ್ಥಳಗಳ ವೊಂದೊಂದು ದಿವಸಕ್ಕೆ ಸಾಧಿಸಿದರು | ಮಿಕ್ಕಾದ ಕೋಟೆಗಳು ಧೂಳಿದರ್ಶನವಾಗಿ ಹೋಗುವಲ್ಲು | ಕೃಷ್ಣರಾಯರು ಮನುಷ್ಯ ವ್ಯಕ್ತಿಯಲ್ಲ | ವಿಷ್ಣು ಅಂಶ ಯೆಂದುದಕ್ಕೆ ಗಜಪತಿ | ಆ ರೀತಿಯಹುದು | ತಮ್ಮ ಹಿರಿಯರು ಕರ್ನಾಟಕಕ್ಕೆ ಅವರೋಧ ಮಾಡಿದುದರಿಂದ ಅವರೂನು ಬಲವಂತವಾಗಿ ನಮ್ಮ ರಾಜ್ಯದ ಮೇಲೆ ದಂಡೆತ್ತಿ ಬಂದರು | ಅವರ ಜಯಿಸುವುದಕ್ಕೆ ಜಯೋಪಾಯವ ಕಾಣಬೇಕು | ಅದಕ್ಕೆ ಷೋಡಶ ಪಾತ್ರರನ್ನು ಕರೆಸಲಾಗಿ | ಬಲಭದ್ರ ಪಾತ್ರರು|ದುರ್ಗಾ ಪಾತ್ರರು | ಭೀಮ ಪಾತ್ರರು | ಮುಕುಂದ ಪಾತ್ರರು | ಭೀಕರ ಪಾತ್ರರು | ಬೀರ ಪಾತ್ರರು | ರಣರಂಗ ಪಾತ್ರರು | ಖಡ್ಗ ಪಾತ್ರರು | ಮುರಾರಿಪಾತ್ರರು| ವಜ್ರಮುಷ್ಟಿ ಪಾತ್ರರು | ತುರಂಗ ರೇವಂತ ಪಾತ್ರರು| ಗಜಾಂಕುಶ ಪಾತ್ರರು| ಅಸಹಾಯ ಪಾತ್ರರು| ಅಶನಿ ಪಾತ್ರರು| ಮೃಗೇಂದ್ರ ಪಾತ್ರರು*| ಯೀ ಹದಿನಾರು ಮಂದಿ ಪಾತ್ರರುಗಳು ಕಾಣಿಸಿಕೊಳ್ಳಲಾಗಿ | ಕುಳಿತುಕೊಳ್ಳಿಯೆಂದು| ನೇಮಕವ ಮಾಡಿ | ಅವರ ಕೂಡೆ ಈ ವರೆಗೆ ನಡೆದ ಕಾರ್ಯಂಗಳನ್ನು | ಕೇಳಿದಿರಿಯಲ್ಲ | ಕರ್ನಾಟಕದವರು | ಕಣಿವೆಗಳ | ದುರ್ಗಗಳ ದಾಟಿ | ಅಮದಾನಗರಕ್ಕೆ ಬಂದು ಅಲ್ಲಿಂದ ಪೆಟ್ಟನೂರು ಸಿಂಹಾದ್ರಿಗೆ ಬಂದು ಪಾಳ್ಯ ಯಿಳಿದು ಯಿದ್ದಾರೆ | ಯಿಲ್ಲಿಗೆ ನಾಲ್ಕು ಹರಿದಾರಿಯಲ್ಲಿ ಯಿದ್ದಾರೆ | ನಾಳೆ ನಾಳಿದ್ದು ದಾಳಿಮಾರ್ಗವಾಗಿ ಕುದುರೆ ರಾವುತರು ಬರುವರು| ಆಗಲಾದರು ಕಾಣಿಸಿಕೊಳ್ಳಬೇಕು| ಮೊದಲ ಸ್ಥಳವ ಬಿಡಬಾರದಲ್ಲಾ ಯೆಂದು ಆಲೋಚನೆಯ ಮಾಡಲಾಗಿ | ಅದಕ್ಕೆ ಷೋಡಶ ಪಾತ್ರರು | ಯೀ ಆಲೋಚನೆ ಮೂರು ಬಗೆ ದುನ್ನೆದಾರರಿಗೂ | ನಮಗೂ ಸಂಗಡ | ಆಲೋಚಿಸುವ ಕಾರ್ಯ |

---

1 ಶೆತು

*15 ಪಾತ್ರರ ಉಲ್ಲೇಖ ಮಾತ್ರ ಇದೆ.

ಆ ಮೂರು ಬಗೆಯವರು | ಕರ್ನಾಟಕದವರಿಗೆ ವಿಮುಖರಾಗಿ | ನಿಲಲಾರದೆ | ಸ್ಥಳಗಳಿಗೆ ಹೋದುದರಿಂದ | ಆದನ್ನು ಯೆಣಿಸದೆ | ತುರುಕಾಣ್ಯದ ಸೀಮೆಯನ್ನು ದಾಂಟಿ | ನಮ್ಮ ಗಡಿ ಕಣಿವೆಗಳನ್ನೂ ಹೊಕ್ಕು ಬಂದು | ಪಟ್ಟಣದ ಸಮೀಪಕ್ಕೆ ಬಂದು ಯಿದ್ದಾರೆ | ಯೀ ಸಮಯದಲ್ಲಿ ನಾವು ಆ ಮೂರು ಬಗೆಯವರಿಗೂ ಹೇಳಿ ಕಳುಹಿಸಿ | ಅವರ ಸರಹದ್ದುಗಳಲ್ಲಿ ಬಾನಂತರಾಗಿಯಿರಿ ಯೆಂದು | ನಮ್ಮ ಮೇಲೆ ಕಾಣಿಸಿಕೊಂಡರೆ | ಯೆಲ್ಲಿ ಹೋದಿರಿಯಾಗಲಾಗಿ | ಕಾಳಹಸ್ತಿ ಜಗನ್ನಾಥ ಪರಿಯಂತರವೂ | ನಮ್ಮ ಸೀಮೆ ಯೆದಿರಿಸದೆ | ವೊಳಹೊಕ್ಕು ಬಂದಿರಾಗಲಾಗಿ | ಮಂತ್ರಾಲೋಚನೆ ಮೇಲಣ ಕಾರ್ಯವಲ್ಲ | ಅಹಂಮಿಕೆ ಮೇಲೆ ಬಂದ ಕಾರ್ಯವಾಗಿ | ಅವರಿಗೆ ಕಾರ್ಯ ಕೊನೆಸಾಗಲರಿಯದು | ನಮ್ಮ ಕಾರ್ಯ ಜಯವಾಗಿ| ಅವರು ಹೊರಟುಹೋಗುವರು | ನಾವು ಸ್ಥಾಯಿಗಳಾಗಿ ಕಾಣಿಸಿಕೊಂಡರೆ | ಕರ್ನಾಟಕದ ಬಲ ಸೀಮೆಯ ಹೋಗು ದೃಷ್ಟಿಯಾಗಲಾಗಿ | ನಮ್ಮ ಸೀಮೆ ಪ್ರಜೆಗಳಿಗೆ | ಅವರ ಮುರಿಹೊಯ್ದು ಸ್ಥಳಗಳಲ್ಲಿ ನಿಲಬೇಕು ಯೆಂದು ಉತ್ಸಾಹ ದೃಷ್ಟಿಯಿಂದ | ಅವರು ನಿಲಲರಿಯರು | ನಾಳೆ ಉದಯಕ್ಕೆ | ಸ್ವಾಮಿಯವರು ರಾವುತ ರಾಣುವೆಗೆ ವೀಳ್ಯವ ಕೊಟ್ಟು | ಎಲ್ಲರನ್ನು ಸಜ್ಜಾಗಿ ಬರಹೇಳಿ ಯೆಂದು ನೀವು ವೊಂದು ಪ್ರದೇಶದಲ್ಲಿ ಸಿಂಹಾಸನದ ಬಿರಿದುಗಳನ್ನು ಹಿಡಿಸಿಕೊಂಡು | ಯಿದ್ದ ಸ್ಥಳದಲ್ಲೆ ಯಿದ್ದು | ಅರ್ಥಿಯ ನೋಡಿದರೆ ಸಾಕು | ನಾವು ಹದಿನಾರು ಮಂದಿಯು ಜಗಳವ ಕೊಟ್ಟು | ಕರ್ನಾಟಕದವರನ್ನು ವೋಡಿಸಿ ಬಿಟ್ಟು | ಅವರ ಬೊಕ್ಕಸ ಭಂಡಾರಗಳನ್ನು ಆನೆ ಕುದುರೆಗಳನ್ನು ಹಸ್ತಗತವ ಮಾಡಿಕೊಂಡು ಬಂದು | ಸಮ್ಮುಖದಲ್ಲಿ ಯಿರಿಸೇವು ಯೆಂದು | ಅವರಿಗು | ತಮಗು | ಯಿದ್ದಷ್ಟು ಸಾಹಸ ಪರಾಕ್ರಮಗಳನ್ನು ಹೇಳಿದರು | ಯುದ್ಧರಂಗದಲ್ಲಿ ಹುಯಿದರೆ | ಆರು ತುಂಡಾಗಿ ಕಡಿದೇವು ಯೆಂದು | ಮದ್ದಾನೆಯ ಕೊಂಬುಗಳಿಂದ ಸೊಂಡಿಲುಗಳ ಖಂಡಿಸೇವು ಯೆಂದು | ಕಬ್ಬ ಖಂಡಿಸಿದ ಹಾಗೆ ಕಾಲ್ಬಲಗಳ ಕಡಿದೇವು ಯೆಂದು | ಮುರಿದು ಸೀಮೆಯ ದಾರಿಯ ಹಿಡಿದರೆ | ಸೆರೆಯ ಹಿಡಿದುಕೊಂಡು ಬಂದೇವು ಯೆಂದು | ಆಣೆ ಪೂರ್ವಕವಾಗಿ ಹೇಳಿದರಾಗಲಾಗಿ | ಗಜಪತಿ ಕೇಳಿ | ಬಹಳ ಸಂತೋಷ ಬಿದ್ದು ನೀವು ವೊಬ್ಬರೆ ವೊಂದೊಂದು ಸೇನೆಗೆ ಹರುವ ಹೇಳಲಾದಿರಿ | ಯುದ್ಧದಲ್ಲಿ ಹದಿನಾರು ಮಂದಿಯು ಹತ್ತು ದಿಕ್ಕಿನಲ್ಲಿ ಕಾಣಿಸಿಕೊಂಡು | ಕಾರ್ಯವ ಮಾಡಿದರೆ | ಗಾಳಿಯು ಮಳೆಯು ಗುಡುಗು ಸಿಡಿಲು ಬಿದ್ದಹಾಗೆ | ವಿಪರೀತವಾಗುವುದು | ಅರ್ಜುನನು | ಗೋಗ್ರಹಣದಲ್ಲಿ ದುರಿಯೋಧನನ ಮೇಲೆ ನಡೆದ ಹಾಗೆ ತುರುಗಳ ತಿರುಗಿಸಿ| ಯೆಲ್ಲರ ತಲೆ ಪಾಗುಗಳ ತೆಗೆದುಕೊಂಡು ಬಂದ ಹಾಗೆ ಬರಲಾಪಿರಿ | ನಿಮ್ಮ ರಣಭಯಂಕರವು | ಕರ್ನಾಟಕದವರು ರಣಭಯದಿಂದ ಆರಿಗುಂ ಕೈಕಾಲಾಡದೆ | ಅಲ್ಲಿಯವರಲ್ಲಿಯೆ ಭಯಪಟ್ಟು ಯಿಹರು | ಕಾರ್ಯವ ಮಾಡಬೇಕು | ತಾವು ವೊಂದು

ಮಾನ ಆಕ್ಕಿಯವರು| ಮಿಕ್ಕಾದ ಭಾಗ್ಯವೆಲ್ಲ ನಿಮ್ಮದು|ರಾವುತ ರಾಣಿವೆ[ಯ]ದು| ಹಾಗಾಗಲಾಗಿ | ಕೀರ್ತಿಯಪಕೀರ್ತಿಗಳ ವಿಚಾರಿಸಿಕೊಂಡು | ಅಜಿಮೊನೆಗೆ ಆವ ರೀತಿಯಲ್ಲಿ ನಡೆಸಿಕೊಳ್ಳಬೇಕೊ|ಆ ರೀತಿಯಲ್ಲಿ ನಡೆಸಿಕೊಳ್ಳಿ ಯೆಂದು ಷೋಡಶ ಪಾತ್ರರಿಗು | ಉಚಿತ ಸಪ್ತಾಂಗ ತಾಳಿಚಾಕಳಿ ತಲೆಪಾಗು ಗಂಧ ಕಸ್ತೂರಿ ತಾಂಬೂಲ ಗಳ ಕೊಟ್ಟು | ಪ್ರಿಯ ಪೂರ್ವಕವಾಗಿ | ಯೀ ವರೆಗು ತಮ್ಮಿಂದ ಅರಿತು ಅರಿಯದ ಹಾಗೆ ಆಗ್ರಹಾನುಗ್ರಹದಿಂದ | ವಾಗ್ದೋಷಗಳು ಯೇನುಂಟಾದರೂ | ಅವ ಮನಸ್ಸಿ ನಲ್ಲಿ ಯಿರಿಸಿಸದೆ ಆವರೀತಿಯಲ್ಲು ಜಯೋಪಾಯವ ಕಂಡು ಕರ್ನಾಟಕದವರ ಮುರಿ ಹುಯ್ದು | ಗಜಪತಿಯ ರಾಜ್ಯವ ನಿಲಿಸಬೇಕೂ ಯೆಂದುದಕ್ಕೆ ಷೋಡಶಪಾತ್ರರು | ಯೆಲ್ಲವಕ್ಕು ಜಗನ್ನಾಯಕರೆ ಯಿದ್ದಾರೆ | ನಾಳೆ ಯೆಲ್ಲವನೂ ನೋಡಿಯಾರು ಯೆಂದು ಸಂಬುದ್ಧಿಯಾಗಿ ಹೇಳಿ | ಉದಯದಲ್ಲಿ ಸನ್ನದ್ಧರಾಗಿ ಬರುತ್ತಾಯಿದ್ದೇವೆ | ನೀವು ಸಜ್ಜಾಗಿ ಬರಬೇಕು ಯೆಂದು | ಯೆಲ್ಲರೂ ವೊಂದೆ ಮಾತಾಗಿ ತಿಳುಹಿ ಕಳುಹಿಸಿ ಕೊಂಡು ಹೋದರು | ಆ ವಿವರವ ಕರ್ನಾಟಕದವರ ಸ್ಥಾನಪತಿ ಕಮಲನಾಭಯ್ಯ | ರಾಯರವರಿಗೆ | ವಿವರವಾಗಿ ಕಾಗದವ ಬರೆದು | ಮುದ್ರೆಸಡಿಮಾಡಿ | ಅತಿ ಗೋಪ್ಯ ವಾಗಿ | ರಾಯರವರ ಕೈಲಿ ಕಾಗದ ಕೊಡಿ ಯೆಂದು ಹೇಳಲಾಗಿ ಹೊತ್ತು ಮುಳುಗಿದ ನಾಲ್ಕು ಘಳಿಗೆಯಲ್ಲಿ ಬೇಹಿನವರು ಕಾಗದವ ಕೊಟ್ಟರಾದ ಕಾರಣ | ರಾಯರವರು ತಾವೇ ವೋದಿ ನೋಡಿಕೊಂಡು | ಕಾರ್ಯ ವಿಷಂ(ಸಂ?)ಪ್ರತಿಯಾಯಿತು ಯೆಂದು | ಬಹಳ ಚಿಂತಾಕ್ರಾಂತರಾಗಿ| ಆಗ ಅಪ್ಪಾಜಿಯ ಮಾತ ಕೇಳದೆ ಬಂದುದಕ್ಕೆ | ಯಿಷ್ಟು ಕಾರ್ಯ ಬಂತು ಯೆಂದು ತಮ್ಮೊಳಗೆ ತಾವು ಚಿಂತಿಸಿ | ಯೆಲ್ಲರಿಗು ಪ್ರಾಣಹಾನಿಗೆ ಬಂತು | ಷೋಡಶ ಪಾತ್ರರು ಹೇಳುವದೊಂದು ಮಾಡುವದೊಂದಲ್ಲ | ಯೆಷ್ಟು ಹೊರಡಲಾಡಿದರು ಅಷ್ಟನು ನಡೆಸತಕ್ಕವರು | ಅವರ (?) ಮುಖಕ್ಕೆ ಯಾರು ನಿಂತಾರು| ಯೆಂದು| ನಿಂತಕಡೆ ನಿಲ್ಲದೆ ಕಳವು ಸೊಕ್ಕಿ(?)ಎಲ್ಲರಿಗೂ ಇಂಥ ಕಾರ್ಯ ಬಂತು ಯೆಂದು ಚಿಂತೆ ಹುಟ್ಟಲಾಗಿ | ಪಾಳ್ಯದಲ್ಲಿ ಅಲ್ಲಲ್ಲಿ ಗುಜು ಗುಜು ಗುಜುವುದೂ| ಬಲಾಬಲ ಕೂಡಿ ಮಾತನಾಡುವುದೂ | ಅವರಿಂದ ಯೆಲ್ಲರಿಗೂ ಭಯೋತ್ಪಾತ ಹುಟ್ಟುವುದೂ | ಯೀ ರೀತಿಯಲ್ಲಿ ಯಿರಲಾಗಿ | ರಾಯರವರು ದೀವಟಿಗೆ ವೋಲಗ ವಾಗಿ | ಅರಮನೆ ವೊಳಕ್ಕೆ ಹೋದಹಾಗೆ ನಡೆಸಿ | ನಗರ ಶೋಧನೆಯಲ್ಲಿ ಪಾಳ್ಯ ಪಾಳ್ಯಗಳನೂ ನೋಡಿ | ಅವರವರು ಆಡಿಕೊಂಬ ಮಾತುಗಳನ್ನು | ಉದಯವಾದರೆ ಗಜಪತಿಯವರು ಪಾಳ್ಯದ ಮೇಲೆ ಬೀಳುತ್ತ ಯಿದಾರೆ ಯೆಂಬುದನ್ನೂ | ಹಾಗೆ ಆದರೆ ಕರ್ನಾಟಕದ ಬಲ ನಿಲಲರಿಯದು ಯೆಂದು | ರಾಯರು | ಅಪ್ಪಾಜಿಯ ಮಾತಕೇಳದೆ | ಸೀಮೆ ವೊಳಹೊಕ್ಕು ಬರಬಹುದೆ ಯೆಂದು | ಆದರಿಂದ ಅಪಾಯ ಬಂತೂ ಯೆಂದು | ಯಿದಕ್ಕೆ | ಯಿನ್ನಾದರೂ ಅಪ್ಪಾಜಿಯವರು ಹೇಳಿದ ಹಾಗೆ

ಕೇಳಿದರೆ | ಆತನು ತನ್ನ ಅಪಾಯಕ್ಕೆ ತಕ್ಕ ಉಪಾಯವ ಕಾಣಬಲ್ಲನು ಯೆಂದು| ಅಲ್ಲಲ್ಲಿ ಹಿರಿಯು ಕಿರಿಯರಾದವರು ಆಡುವ ಮಾತನೂ ರಾವುತ ರಾಣುವೆ ಉತ್ಸಾಹವಿಲ್ಲದೆ ಯಿರುವುದನ್ನು | ನೋಡಿದಂಥವರಾಗಿ | ಅಪ್ಪಾಜಿಯವರ ಗುಡಾರಕ್ಕೆ ವೊಂಟಿಯಾಗಿ ಹೋದರಾಗಲಾಗಿ | ಅಪ್ಪಾಜಿ ನೋಡಿ | ತನ್ನ ಬಳಿಯಲ್ಲಿ ಯಿದ್ದವರರಿಯದ ಹಾಗೆ | ಯೆಲ್ಲರೂಸು ಮನೆಗೆ ಹೋಗಿ ಯೆಂದು | ತಾನು ಮನೆಗೆ ಹೋದ ಹಾಗೆ ಹೋಗಿ | ವೊಂದು ಅಂತಸ್ತಿನ ಗುಡಾರದಲ್ಲಿ ರಾಯರವರ ಕುಳ್ಳಿರಿ ಯೆಂದು | ರಾಯರವರ ಕೂಡೆ ಹೀಗೆ ಯೇಕದೇಶವಾಗಿ ಬರುವ ಕಾರ್ಯವೇನು ಯಿದ್ದಿತು | ನನ್ನ ಕರೆಯಕಳುಹಿ[1]ಸಿದ್ದರೆ[1] ಬಾರೆನೆ ಯೆಂದು ಬಿನ್ನಹಂ ಮಾಡಿದುದಕ್ಕೆ | ರಾಯರವರು | ತಾವು ಯೇಕದೇಶದಲ್ಲಿ ಬರತಕ್ಕ ಪ್ರಯೋಜನವಾಗಲಾಗಿ | ಬಂದೆವು | ಗಜಪತಿಯ ಬಳಿಯಲ್ಲಿ ಯಿದ್ದ | ಕಮಲನಾಭಯ್ಯ ಕಳುಹಿ[2]ಸಿದ[2] ಕಾಗದ ವೋದಿಕೊಳ್ಳಿಯೆಂದು ಕೈಲಿ ಕೊಡಲಾಗಿ | ಅಪ್ಪಾಜಿ ಕಾಗದವ ವೋದಿಕೊಂಡು ರಾಯರವರ ಕೂಡೆ | ಆದಿಯಲ್ಲೆ ಸ್ವಾಮಿಯವರ ಪಾದಕ್ಕೆ ಬಿನ್ನಹಂ ಮಾಡಿದೆನು | ನನ್ನ ಬಿನ್ನಹವನ್ನು ಚಿತ್ರದಲ್ಲಿಯಿರಿಸದೆ ಕದಲಿ ಬಂದಿರಿ | ಗಜಪತಿಯ ಸೀಮೆಯ ಹೊಕ್ಕು ಬರುವಾಗಲೆ | ಕಣಿವೆಯಲಿ ಬಂದ ಅಪಕೀರ್ತಿ ಸಾಲದೆ | ಮೂವತ್ತು ಗಾವುದ ಗಜಪತಿಯ ಸೀಮೆಯ ವೊಳಹೊಕ್ಕು | ಮೊದಲ ಸ್ಥಳದ ಸಮೀಪದಲ್ಲಿ ಪಾಳ್ಯ ಯಿಳಿದುದರಿಂದ ಅವರಿಗು ಆಲೋಚನೆ ಹುಟ್ಟಿ ಅವರು ಯಿಷ್ಟು ಕಾರ್ಯಗಳಿಗೆ ಹರುಹ ಕಂಡರು ಯಿಂಥದಕ್ಕೆ ತಕ್ಕ ಆಲೋಚನೆಯ ಕಂಡರೆ ಕಂಡ ಹಾಗೆ | ಯಿಲ್ಲದೆ ಯಿದ್ದರೆ | ಯೆಲ್ಲರಿಗು ಯುಗ ಮುಳುಗಿದ ಹಾಗೆ ಅಹುದು ಯೆಂಬು ಬಿನ್ನಹಂ ಮಾಡಿದುದಕ್ಕೆ ರಾಯರವರು ಬುದ್ಧಿಗಲಿಸಿದ್ದು |

"ಹುಟ್ಟಿದ ಕಾರ್ಯವ ಚೆನ್ನಾಗಿ ಮಾಡುವಂಥ ಮಂತ್ರಿಯು | ಹೋರಲೀಸದ ಡಳದ ಭಟನು ಹುಟ್ಟಿದಲ್ಲದೆ ದೊರೆಗಳಿಗೆ | ಮಿಕ್ಕಾದವರು ಯಿಲ್ಲವೆ" ಯೆಂದು | ನೀತಿಯ ವೋದ[3]ಲು[3]| ನೀವು ಸರ್ವಜ್ಞರು | ಕಾರ್ಯ ಮುಖದಲ್ಲಿ ಬೀಳಲೀಸಿರಿ ಯೆಂದು | ರಾಯರವರು | ಹಿಂದಕ್ಕೆ ನಿಮ್ಮ ಮಾತ ಕೇಳದೆ ಬಂದುದರಿಂದ | ಯಿಂಥ ಆಲೋಚನೆಗೆ ಅವಕಾಶವಾಯಿತು | ನಮ್ಮ ಗುಣದೋಷಗಳ ಯೆಣಿಸಬೇ[4]ಡ[4]| ಅಪಾಯಕ್ಕೆ ತಕ್ಕ ಉಪಾಯ ಆವ ರೀತಿಯೆಂದು ಕೇಳಿದುದಕ್ಕೆ | ಅಪ್ಪಾಜಿಯು ನಿಮ್ಮ ಹೃದಯವು ಆಲೋಚನೆಯು ಆವ ರೀತಿಯೆಂದು ಕೇಳಿದುದಕ್ಕೆ | ರಾಯರವರು | ಷೋಡಶ ಪಾತ್ರರು | ಗಜಪತಿಯುವರುಮಾಡಿದ ಆಲೋಚನೆಗೆ |

---

1 ಸ್ತುರೆ 2 ಸ್ತು 3 ಲಿ 4 ಡ

ತಮಗೆ | ಪ್ರಾಣಕ್ಕೂ | ಮಾನಭಂಗಕ್ಕೂ | ಜನರಿಗೆ ಅಪಕೀರ್ತಿಯು ಬಹುದು | ಅಷ್ಟ ದಿಕ್ಕುಗಳ ಆಕ್ರಮಿಸುವವು ಯೆಂದು ಮನಸ್ಸಿನಲ್ಲಿ ನಿಶ್ಚಯವಾಗಿ ಯಿದ್ದಿತು ಯೆಂದು ಅಪ್ಪಣೆಯ ಕೊಟ್ಟದಕ್ಕೆ | ಆಪ್ಪಾಜಿಯು ಮೊದಲಾದ ಯೋಚನೆಗಳು ನಿಮ್ಮ ಚಿತ್ತದಲ್ಲಿ ಯಿದ್ದಾವೆಯಲ್ಲ | ಯೀ ಸಮಯದಲ್ಲಿ ಸೂರೆಹೋಗುವುದಕ್ಕಿಂತ | ಕೈಯಾರೆ ಕೊಟ್ಟು ಬಿಡಲಾಪಿರೆ ಯೆಂದುದಕ್ಕೆ | ರಾಯರವರು ಅಪ್ಪಾಜಿಯವರ ಕೂಡೆ ನೀವು ಯೇನ ವೆಚ್ಚ ಮಾಡುಯೆಂದರೂ ಮಾ[1]ಡೇ[1]ವು | ನಮಗೆ ಯೇನ ಬುದ್ಧಿಯ ಹೇಳಿದರೂ ಹಾಗೆ ಕೇಳಿ ನಡೆ[2]ಸೇ[2]ವು | ಯಿಷ್ಟಕ್ಕೆ ಬಂದಕಾರ್ಯ ಪ್ರಯಾಸ ವಿಲ್ಲದೆ ನಿಲುವುದೆ ಯೆಂದು ಯೆಂದುದಕ್ಕೆ | ಅಪ್ಪಾಜಿಯವರು ರಾಯರವರ ಕೂಡೆ | ಮಂತ್ರಿ ನೀತಿಗಳಾಗಿ ಹೇಳಿದ ಪದ್ಯಗಳು |

"ಸಂಧಿವಿಗ್ರಹ ಮೊದಲಾದುದರಿಂದ | ಸಾಧ್ಯವಲ್ಲದಂಥ [3]ಶತ್ರುವು[3] ಮೃತ್ಯುವಿನ ಹಾಗೆ ಬರುತ್ತಯಿರಲಾಗಿ | ದಾನದಿಂದ ವಶವ ಮಾಡಬೇಕು | ಭೂಮಿಯಲ್ಲಿ ದಾನಕ್ಕೆ ವಶವಾಗದಂಥ ಶತ್ರುಗಳು ಯಾರೂ ಭೂಮಿಯಲ್ಲಿ ಯಿಲ್ಲ ಯೆಂದು | ಶತ್ರುಗಳ ಮಿತ್ರರ ಮಾಡುವದು | ಮಿತ್ರರ ಭೃತ್ಯರ ಮಾಡುವದು | ಅದು ಕಾರಣ ದೊರೆಗಳಿಗೆ ದಾನಕ್ಕಿಂತ ದೊಡ್ಡಿತ್ತಾದ ಉಪಾಯವು ಯಿಲ್ಲ"* ಯೆಂಬ ನೀತಿಯನ್ನು ವೋದಿ | ಯೀ ಸಮಯದಲ್ಲಿ ಭೇದೋಪಾಯದಿಂದ ಜಯಿಸುವ ಯತ್ನವ ಕಾಣಬೇಕು | ಆದಕ್ಕೆ ಅನರ್ಘ್ಯವಾದ ಭೂಷಣಗಳನೆಲ್ಲವನ್ನು ವೆಚ್ಚವ ಮಾಡಿ | ಹಾನಿ ಬಾರದ ಹಾಗೆ ನಡೆಸಿಕೊಳ್ಳಬೇಕು ಯೆಂದುದಕ್ಕೆ ರಾಯರವರು ಸಪ್ತೋಪಾಯದಿಂದ ಜಯಿಸುವ ಯತ್ನವನ್ನು ಕಾಣಬೇಕು | ಯೀ ಬಾರಿಗೆ ಕಡೆಹಾಯಿ[4]ಸಿದರೆ[4] ಸಾಕು ಯೆಂದು | ಅಪ್ಪಾಜಿಯ ಕೂಡೆ ಅಪ್ಪಣೆಯ ಕೊಟ್ಟು | ಅರಮನೆಗೆ ಬಂದಾಕ್ಷಣವೆ ತಾವು ಬೊಕ್ಕಸ ಭಂಡಾರಿಗಳು | ಆನೆ ಕುದುರೆಗಳು | ಅಷ್ಟು ನಿಮ್ಮವಷ್ಟೆ | ಸರಿಬಂದ ಹಾಗೆ ನಡೆಸಿಕೊಳ್ಳಿ ಯೆಂದುದಕ್ಕೆ | ತ್ರಿಕರಣಶುದ್ಧವಾಗಿ ಅಪ್ಪಣೆಯ ಕೊಟ್ಟು | ಅರಮನೆಗೆ ಬಂದಾಕ್ಷಣವೆ | ಅರಮನೆಗೆ ಅಪ್ಪಾಜಿ ಬಂದು | ತಮಗೆ ಆಪ್ತರಾದ ಅಯ್ಯಪ್ಪರಸರು | ಕೊಂಡಮರಸರು | ರಾಯಸದ ವಿಟ್ಠಮರಸರು | ಅವಸರದ ಲಕ್ಷ್ಮೀಪತಿ ಮೊದಲಾದ ನಿಯೋಗಿಗಳನ್ನು | ರಾಯರ ಕರಣಿಕರಾದಂಥ ವೊಂಬತ್ತು ಮಂದಿ ಸಂಪ್ರತಿಯವರನ್ನು ಕರೆಸಿ | ಯೇಕಾಂತವೆಂದು | ವದಂತಿಯ ಹುಟ್ಟಿಸಿ | ಗೊಲ್ಲರ ಕೂಡೆ | ಗಜಪತಿಯ ಸುಬುದ್ಧಿಯ ಬಗೆಯವರು ಬಂದರೆ | ಯೇಕಾಂತವೆಂದು ಅವರ ಕೂಡೆ ಹೇಳಿ | ವೊಳಕ್ಕೂ ಬರಲೀಸದೆ ಹೊರಕ್ಕೂ ಬಿಡದೆ | ನಿಲ್ಲಿಸಿ

---

1 ಡೀ 2 ಸೀ 3 ಮಿತ್ರವು 4 ಸ್ತರೆ

*ನೀತಿ ಪದ್ಯದ ಉದ್ಧರಣ ಇಲ್ಲ.

ಕೊಂಡುಯಿರಿ ಯೆಂದು ವದಂತಿಯ ಹುಟ್ಟಿಸಿ ರಾಯಸದವರ ಕೂಡೆ। ಷೋಡಶ ಪಾತ್ರರಿಗೆ ಬೇರೆ ಬೇರೆ ರಾಯರವರ ನಿರೂಪವಾಗಿ ಬರೆಸಿದ ವಿವರ |

ನೀವು ಕಳು[1]ಹಿಸಿದ[1] ಕಾಗಜಗಳನ್ನು ನೋಡಿಕೊಂಡೆವು | ಗಜಪತಿಯವರು । ನಿಮ್ಮನು ಆದಿಯಲ್ಲಿ ಮಾತು ಮಾತು ಪ್ರಸಂಗ ಬೆಂಬಳಿಯಲ್ಲಿ | ರಾಷ್ಟ್ರ ದುರ್ಗ ರೊಕ್ಕ ಬಹುಮಾನಗಳ ನಿಮಿತ್ತವಾಗಿ ಹಾಗೆ ಹೀಗೆ ನಾನಾ ಬಗೆ ಆಡಿದ ಮಾತುಗಳಿಗೆ| ಅಂದಂದಿಗೆ ನೀವು ಬರೆದು ಕಳುಹಿಸಿ | ಗಜಪತಿಯವರು । ನಿಮ್ಮ ಆಡಿದ ಮಾತುಗಳು । "ಯೆಂದಿಗೂ ಶರೀರದಲ್ಲಿ ನೆಟ್ಟ ಅಂಬುಗಳು । ಉಪಾಯದಿಂದ ತೆಗೆದು ಹಾಕಬಹುದಲ್ಲದೆ | ನಿಷ್ಠೂರದಿಂದ ಮನಸ್ಸಿನಲ್ಲಿ ನೆಟ್ಟ ಮಾತುಗಳ *ಉಪಾಯದಿಂದಲಾದರೂ* ತೆಗೆಯಬಹುದೆ" ಯೆಂಬ ನೀತಿ ಸಹಿತವಾಗಿ ಬರೆದು ಕಳುಹಿಸಿ ಯೀ ರಾತ್ರಿಯಲ್ಲಿ ಗಜಪತಿಯವರ ಕೂಡೆ। ಮಾತನಾಡಿ ಬಂದೆವು | ನಾಳೆ ಉದಯಕ್ಕೆ ಜಗಳಕ್ಕೆ ಬಂದ [2]ಹಾಗೆ[2] ಕರೆದುಕೊಂಡು ಬಂದು ಗಜಪತಿಯವರನು ಹಿಡಿದು ಕೊಟ್ಟೇವು ಯೆಂದು ನೀವು ಬರೆದು ಕಳುಹಿ[3]ಸಿದದು[3] ಸರಿಯಷ್ಟೆ । ಅದಕ್ಕೆ | ರಾಯರವರು ಧರಿಸುವಂಥಾ ಬೆಣ್ಣೆಯ ಮುದ್ದೆ ಕಂಠಮಾಲೆ | ನವರತ್ನದ ಗಿಳಿತಾಳಿ । ತುಂಬಿಯ ತಾಳಿ | ವೈಢೂರ್ಯ ತಾಳಿ | ವಜ್ರದ ಸರಪಣಿ | ಪಚ್ಚೆಯ ಕಡಗ | [4]ಕಿರು[4]ಮುಂಜಿಯ ಮುತ್ತಿನ ಪಚ್ಚೆಯ ಸರ । ಇಂದ್ರನೀಲದ ಮಕುಟ | ವಜ್ರದ ಉಡುದಾರ | ಕೆಂಪುಗಳ ಜವದಾಡೆ । ಮುತ್ತಿನ ಕಾಲುಪೆಂಡೆಯ | ವಜ್ರಗಳ ಬಾಹುಪುರಿ । ದೊಡ್ಡ ಮುತ್ತುಗಳ ಅಡ್ಡಗತ್ತಿ | ನವರತ್ನದ ಹರಿಗೆ | ನವರತ್ನದ ಸಿಂಹ[5]ಲಲಾಟ[5] | ಮುತ್ತುಗಳ ಮೊಗರಂಬ | ಯೀ ಹದಿನಾರು ನಗಗಳನ್ನು ಅವರಿಗೆ ಬೇಕಾದ ನಗಗಳ ಕಳುಹಿ[6]ಸಿದರೆ[6]| ಆ ಪ್ರಕಾರಕ್ಕೆ ಸಜ್ಜುಮಾಡಿಸಿ ನಡೆಸೇವು ಯೆಂದಿರಲ್ಲ | ಯೀ ಹದಿನಾರು ನಗಗಳನ್ನು | ಘಟ್ಟಿ ಅರುವತ್ತುನಾಲ್ಕು ಲಕ್ಷಕ್ಕೆ ಕೊಂಡಂಥ ನಗಗಳನ್ನು ಕಳುಹಿಸಿಯಿದ್ದೇವೆ | ಹಾಗೆ ಅವರವರಿಗೆ ಬೇಕಾದ ನಗಗಳನ್ನು ತೆಗೆದು ಕೊಂಡು | ನಮಗೆ ಬೇಕಾದ ಪ್ರಯೋಜನಗಳ ಸಂಘಟನೆಯ ಮಾಡಿ ನಡೆ[7]ಸುವುದು[7] ಯೆಂಬ ವಿವರಗಳಾಗಿ | ಷೋಡಶ ಪಾತ್ರರಿಗೆ | ಪ್ರತ್ಯೇಕ ಪ್ರತ್ಯೇಕವಾಗಿ ನಿರೂಪಗಳನ್ನು ಭೂಷಣಗಳನ್ನು । ಉಡುಗೊರೆಗಳನ್ನು ಹದಿನಾರು ಪೆಟ್ಟಿಗೆಯಲ್ಲಿ ಕಟ್ಟಿಸಿ । ಹದಿನಾರು ಮಂದಿ ನಿಯೋಗಿಗಳ | ಷೋಡಶ ಪಾತ್ರರು ಯಿದ್ದ ಬಳಿಗೆ ಹೋಗಿ ಕೊಟ್ಟು [8]ಬರುವ ಹಾಗೆ[8] ಅವರಿಗು ಉಡುಗೊರೆಯ ಕೊಟ್ಟು । ಮಾರ್ಗದಲಿ ಯಾರಾದರೂ | ಕೇಳಿಸಿ ಬನ್ನಿ ಯೆಂದರೆ | ಅಹುದಲ್ಲಾ ಯೆನ್ನದೆ | ಮೊದಲು ದೊರೆಯ ಬಳಿಗಾದರು ಹೋಗಿ | ಅವರ ಕೂಡೆ ಉಂಟಾದ ಅರ್ಥವ ಕಾಣಿ[9]ಸುವ ಹಾಗೆ[9]

---

1 ಹಿಸ್ತ 2 ಹಾಂಗ 3 ಸ್ತದು 4 ಹುರು 5 ಶಲಾಟ 6 ಸ್ತರೆ 7 ಸೂ
8 ಬರೂಹಾಂಗೆ 9 ಸೂಹಾಂಗೆ ** ಈ ಮಾತುಗಳು ಅನಗತ್ಯ

ತಿಳುಹಲಾಗಿ | ಗಜಪತಿಯವರು ಯೇನೆಂದು ಅಪ್ಪಣೆಯ ಕೊಟ್ಟರು ಕೇಳಿ[1]ಬರುವ ಹಾಗೆ[1] | ಬುದ್ಧಿಯನು ಹೇಳಿ ಕಳಿಸುವಂಥ ಕಾರ್ಯಗಳ| ಗಜಪತಿಯವರ ಸುಬುದ್ಧಿ| ಆಪ್ತ ಪರಂಪರೆಯಿಂದ | ನಿದರ್ಶನವಾಗಿ ಕೇಳಿದಂಥವನಾಗಿ | ಗಜಪತಿಯವರಿಗೆ ರೊಕ್ಕೆಯ ಬರೆದು | ಷೋಡಶಪಾತ್ರರ ಕಾಗಜಗಳು ಬಂದವು | ಅದು ನಿಮಿತ್ತ ಅವರಿಗೆ ಪ್ರತಿ ಕಾಗಜಗಳನ್ನೂ | ಘನವಾದ | ಭೂಷಣ | ಉಡುಗೊರೆ | ಉತ್ಸಾಹ ಗಳನ್ನೂ | ಕಟ್ಟಿಸಿ ಕಳುಹಿ[2]ಸಿದರು[2] | ಸಿಂಹಾಸನಕ್ಕೆ ಉಂಟಾದ ಹದಿನಾರು ಭೂಷಣ ಗಳನು ಕೋಟಿ ಪರಿಯಂತರ ಕ್ರಯವಾಗುವ ನಗಗಳ ಕಟ್ಟಿ ಕಳು[3]ಹಿಸಿದರು[3] ಯೆಂದು ಕೇಳಿದೆನು | ಸ್ವಾಮಿಯವರು ಅವರ ಮಾತ ಕೇಳಿ ನಾಳೆ ಜಗಳಕ್ಕೆ ಬರುತ್ತ ಯಿದ್ದಿರಿ | ಆದರಿಂದ | ಕಡಮೆ ಬಾರದ ಹಾಗೆ ನಡೆಸಿಕೊಂಬುದಕ್ಕೆ | ಕರ್ನಾಟಕ ಪಾಳ್ಯದಿಂದ | ಪಟ್ಟಣಕ್ಕೆ [4]ಬರುವ[4] ಮಾರ್ಗಗಳಲ್ಲಿ ಆಪ್ತರಯಿರಿಸಿ | ಆ ಪೆಟ್ಟಿಗೆ ಗಳೊಳಗಣ ಅವರವರು ಹೆಸರ ಕಾಗಜಗಳನ್ನು | ಅನರ್ಘ್ಯವಾದ ಭೂಷಣಗಳನ್ನು ನೋಡಿ ನಿಶ್ಚಯವಾದರೆ | ಅದಕ್ಕೆ ತಕ್ಕ ಪ್ರತಿಚಿಂತೆಯ ಕಾಣೆ ಯೆಂಬ ವಿವರಗಳಾಗಿ | ಅವಸರದ ರೊಕ್ಕೆಯ ಚೀಟಿಯನು ಕಳುಹಿ[5]ಸಿದ[5]ರಾಗಲಾಗಿ | ಗಜಪತಿ ಮೋದಿ ಕೊಂಡು | ಆ ರೀತಿಯಲ್ಲೆ ಮಾರ್ಗದಲ್ಲಿ | ಮನುಷ್ಯರ ಯಿರಿಸಿಕೊಂಡು | ಮುದ್ರೆ ಪಡಿಮಾಡಿಯಿದ್ದ ಪೆಟ್ಟಿಗೆಗಳನ್ನು | ನಿಯೋಗಿಗಳನ್ನು | ಕೈಹಿಡಿತವಾಗಿ ಹಿಡಿದು ಕೊಂಡು ಹೋಗಿ | ಗಜಪತಿಯವರ ಮುಂದೆ ಯಿರಿಸಲಾಗಿ | ಗಜಪತಿಯೂ | ಪೆಟ್ಟಿಗೆಗಳ ಬಿಡೂ ಯೆಂದು | ಷೋಡಶಪಾತ್ರರ ಹೆಸರ ಕಾಗಜಗಳನ್ನು | ಅವರ ಉತ್ತರದಲ್ಲಿ ಆ ದಿವಸದ ಓಲಗದಲ್ಲಿ | ಆಗ್ರಹ ಬಿದ್ದ ಪರಿಯಾಯಗಳನ್ನು ಉ(ಅ?)ಟಂಕಿಸಿ | ಅದಕ್ಕೆ ಪ್ರತ್ಯುತ್ತರಗಳನ್ನು ಅನರ್ಘ್ಯ ಭೂಷಣಗಳನ್ನು | ನಿದರ್ಶನವಾಗಿ ಕಂಡು | ಗಜಪತಿಯೂ | ಯೀ ಷೋಡಶಪಾತ್ರರ ನಂಬಿ ಜಗಳಕ್ಕೆ ಹೋದರೆ ಹಿಡಿದು ಕೊಡುವರು | ಜಗನ್ನಾಯಕರ ಕೃಪೆಯಿಂದ ಯೆಚ್ಚತ್ತೆವು | ಯಿನ್ನು ಯಾರನ್ನೂ ನಂಬಬಾರದು ಯೆಂದು ನಿಯೋಗಿಗಳನ್ನು ಬೊಕ್ಕಸದ ಮನೆಯೊಳಗೆ ಯಿರಿಸಿ ಬೀಗವ ಹಾಕಿಸಿ ಗಜಪತಿಯವರು | ಆ ರಾತ್ರಿ | ಅಲ್ಲಿ ಯಾರಿಗೂ ಹೇಳದೆ ಯೇಕ ದೇಶದಲ್ಲಿ | ಪಟ್ಟಣಕ್ಕೆ ಏಳು ಗಾವುದ ಉತ್ತರಕ್ಕೆ ಹೋಗಿ | ನಿಂತಹಾಗಾಯಿತು | ಮರುದಿವಸ ಉದಯಕ್ಕೆ | ಷೋಡಶಪಾತ್ರರು ಸನ್ನದ್ಧರಾಗಿ ಅರಮನೆಯ ಬಾಗಿಲಿಗೆ ಬಂದು | ಗಜಪತಿಯವರನ್ನು | ಹೊರಕ್ಕೆ ಹೊರಟು ಬರಹೇಳಿ | ಪಡಿಹಾರರ ಕೈಯ[ಲಿ] ಹೇಳಿ ಕಳುಹಿ[6]ಸಿದರೆ[6] | ಬಾಗಿಲಿಗೆ ಹೊರಟು ಬಂದು ಗಜಪತಿಯವರು | ಯೀಗ ನಡೆವ ಕಾರ್ಯಗಳನು ತಿಳಿದು ಪ್ರಚ್ಛನ್ನ | ವೇಷವಾಗಿ ಅರಮನೆಯ ಹೊರಟು ಹೋದರು ಯೆಂದು ತಿಳುಹಲಾಗಿ |

1 ಬರೂ ಹಾಂಗೆ 2, 3 ಸ್ತರು 4 ಬರೂ 5 ಸ್ತ 6 ಸ್ತರೆ

ಪೋಷಕಸಾತ್ರರು | ಉತ್ಸಾಹಗೆಟ್ಟು | ಆಲೋಚನೆ ಪರರಾಗಿ | ಗಜಪತಿಯವರು ಯಿದ್ದ ಬಳಿಗೆ | ಹೋದರೂ ತಪ್ಪು ಬಾಹದು | ಆವರು ಯಿಲ್ಲದೆ ಜಗಳಕ್ಕೆ ಹೋದರೂ ತಾವು ನಡೆಸಿದ ಕಾರ್ಯ ಮಂತ್ರ ಭಿನ್ನವಾಗಲಾಗಿ | ಹರಿದು ನಡೆಸಿದರು | ಅರಮನೆಗೆ ಹಿತವನಾಚರಿಸಿ ನಡೆಸಿದರೆ | ಯೆಂದು [1]ಯಿರುವರು[1] ಯೆಂದು | ತಮ್ಮ ತಮ್ಮ ದುರ್ಗಗಳಿಗೆ ಹೋದರಾಗಲಾಗಿ ಕೃಷ್ಣರಾಯರು ಯೀ ವರ್ತಮಾನವನು ಕೇಳಿ | ಮೊದಲ ಸ್ಥಳಕ್ಕೆ ಬಂದು ನಿಂತು | ಆರನೂ ಅರಮನೆಗೆ ಹೋಗಲೀಸದ ಹಾಗೆ | ಸುಬುದ್ಧಿಯವರ ಮನುಷ್ಯರನ್ನು | ಕೋಟೆಯ ಬಾಗಿಲವರನ್ನು | ಪಟ್ಟಣದಲ್ಲೆ ನಿಲ್ಲಿಸಿ | ಪಟ್ಟನೂರ ಸಿಂಹಾದ್ರಿಯಲ್ಲಿ ಜಯಸ್ತಂಭವ ಹಾಕಿಸಿ | ಸುಬುದ್ಧಿಯವರ ಕೊಡೆ | ತಾವು ಪ್ರತಾಪ ನಿಮಿತ್ತವಾಗಿ ಬಂದೆವಲ್ಲದೆ ಗಜಪತಿಯವರ ರಾಜ್ಯವ ಅವರಿಗೆ ನಡೆ[2]ಸೇ[2]ವು | ವಿವಾಹವನು | ಬಿಡದಿಯಸು ಮಾಡಿ ನಡೆಸಿದರೆ ಸೀಮೆಗೆ ಹೋಗುವವರಷ್ಟೆ ಯೆಂದು | ಅಪ್ಪಣೆ ಕೊಡಲಾಗಿ | ಸುಬುದ್ಧಿಯು | ಆ ವಿವರಗಳಿಗೆ ಗಜಪತಿಯವರ ಬಳಿಗೆ ಬರೆದು ಕಳುಹಲಾಗಿ | ಗಜಪತಿಯವರು ಬುದ್ಧಿಶಾಲಿಗಳಾಗ ಲಾಗಿ | ತಿರುಗಿ ಪಟ್ಟಣಕ್ಕೆ ಬಂದು | ರಾಯರವರೂ | ತಾವೂ ಸಂಧಿಸಿ ಮಾತುಕತೆಗಳ ನಾಡುವಾಗ ಗಜಪತಿಯವರು | ರಾಯರವರಿಗೆ ತಿಳುಹಿಕೊಂಡಂಥ ನೀತಿ ಪದ್ಯ|

ನಷ್ಟಕುಲಂ ಭಿನ್ನ ತಟಾಕ ಕೂಪಂ
ಪ್ರಭ್ರಷ್ಟರಾಜ್ಯಂ ಶರಣಾಗತಂ ಚ |
ದೇವಾಲಯಂ ಧರ್ಮ [3]ಪ್ರತಿಷ್ಠಾಪನಂ[3]
[4]ಷಡ್ಭಿರಿವ[4] ಲೋಕೇ ಸುಕೃತಂ ಭವಂತಿ ||

ನಷ್ಟವಾದ ಕುಲ, ಭಿನ್ನ ತಟಾಕ | ಕಟ್ಟೆ ದೊರೆತನ | ಶರಣಾಗತರಾದವರು | ಗುಡಿಯನು | ಬ್ರಾಹ್ಮಣ ಸ್ಥಾಪನೆಯನು | ಯಿವನ್ನು ಆರು ಉದ್ಧರಿಸುತ್ತ ಯಿದ್ದಾರೆಯೋ | ಅವರಿಗೆ ಮೊದಲ ಧರ್ಮಿಷ್ಠಗಿಂದಾ | ನಾಲ್ಕು ಮಡಿ ಫಲ ಹೆಚ್ಚಾಗಿ ಉಂಟು ಯೆಂಬ ನೀತಿಯನೋದಿ | ಉಚಿತವಾಗಿ ಮಾತುಕತೆಗಳನಾಡಲಾಗಿ | ರಾಯರವರು ನಾವು ನೀವು ಯೆಂಬ ಭೇದವೇನಿದೆ ಯೆಂದು | ಸನ್ಮಾನ ಬಹುಮಾನಗಳ ಮಾಡಿದರಾಗಲಾಗಿ | ಗಜಪತಿ ತನ್ನ ಕೌಮಾರಿತಿಯನ್ನು ಧಾರೆಯನೆರೆದು ಕೊಟ್ಟು | ಆಗ | ಸರಿಗೆ ಹೋದಕ್ಕೆ(?) ಪೆಟ್ಟಿಗೆಗಳು ಮೊದಲಾದ ಭೂಷಣಗಳ ಕೊಟ್ಟು ಕಳುಹಿ | ಗಂಧ ಕಸ್ತೂರಿ ತಾಂಬೂಲಾದಿಗಳಿಂದ | ಕೃಷ್ಣವೇಣಿಗೆ ದಕ್ಷಿಣವಾದ ರಾಜ್ಯಗಳನ್ನು ದುರ್ಗಗಳನ್ನು ಕೊಟ್ಟು | ರಾಯರವರಿಗೆ | ಗಜಪತಿಯವರು ಔತಣವ ಮಾಡಿಸಿ | ರಾಯರವರ ಬಗೆ ಭೂಷಣಗಳನು [5]ವೊಪ್ಪಯಿಸಿ[5] | ಸುಬುದ್ಧಿಯ ಸಂಗಡ

1 ಯಿರೂರೂ 2 ಸೀ 3 ಪ್ರತಿಷ್ಠಾಪಾಲನಂ 4 ಷಡ್ಭಿವ 5 ವೊಪ್ಪಗಿಸಿ

ಕೊಡಿಸಿ ಕಳುಹಿಸಲಾಗಿ | ಈ ಸುದ್ದಿಯು ಮೂರು ದುನ್ನೆದಾರರು ಕೇಳಿ ತಿಳುಹಿಕೊಂಡ ನೀತಿ ಪದ್ಯ |

“ನಾವು ನ್ಯತ್ಯಸ್ತ್ರ ನಡತೆ ಯುಳ್ಳವರು | ಮದಯುಕ್ತರಾಗಿ ಯುದ್ಧ ನಡತೆ ಯುಳ್ಳವರು” | ಯೆಂಬ ನೀತಿಯನ್ನು ಪೋದಿ | ಅನ್ಯೋನ್ಯವಾಗಿ ಮಾತುಕತೆಗಳ ನಡೆಸಿ | ಸರಹದ್ದುಗಳ ಯೇರ್ಪಾಟ ಮಾಡಿಕೊಂಡು | ವೋಲೈಸಿದವರಾಗಿ | ಕಳುಹಿಸಿಕೊಂಡು ಸ್ಥಳಕ್ಕೆ ಹೋದರಾಗಿ | ಕೃಷ್ಣರಾಯ[ರ]ವರು ಉತ್ತರಾದಿಯ ಕಾರ್ಯವ ಜಯಿಸಿ ತಿರುಪತಿಗೆ ಬರುತ್ತಯಿರಲಾಗಿ | ಕಲ್ಯಾಣ ಕಲುಬರಿ(ಗಿ?)ಯ ಕೋಟೆಯವರು | ಗರ್ವಿತರಾಗಿ ಕೋಟೆಯ ಮೇಲೆ ಕೂಗಲಾಗಿ | ಆ ಸುದ್ದಿಯ ರಾಯರವರು ಕೇಳಿ | ಆರ ಬಗೆಯವರು ಯೆಂದು ಕೇಳಿದಲ್ಲಿ | ಮ್ಲೇಚ್ಛರು ಯೆಂದ ಕಾರಣ | ಅಂದಳವ ತಿರುಹುಯೆಂದು | ಕಲಬರಿಗೆ ಕೋಟೆಯ | ಮೂರು ಮುಕ್ಕಾಲು ಘಳಿಗೆಯಲ್ಲಿ | ಕೋಟೆ ಸಾಧಿಸಿಕೊಂಡು | ಆ ಕೋಟೆಯ ವೊಳಗೆ ಯಿದ್ದ ಮೂರು ಸಾವಿರ ಕುದುರೆಯನ್ನು ವಾಘೆವೊಂದರಲ್ಲಿ ನಿಲ್ಲಿಸಿ | ಆ ಸ್ಥಳದಲ್ಲಿ ಯಿರತಕ್ಕವರನು ಯಿರಿಸಿ | ತಿರುಪತಿಗೆ ಬಂದು ವೆಂಕಟೇಶ್ವರ ಸ್ವಾಮಿಯನು ಸೇವಿಸಿ | ಸಕಲ ಭೂಷಣಗಳಿಂದ ಸ್ವಾಮಿಗೆ ಸುಲಿಗೆಯನ್ನು ಕೊಟ್ಟು | ಕಾಣಿಕೆಯ ಹಾಕಿ | ಆ ಸ್ಥಳದಲ್ಲಿ ಷೋಡಶ ಮಹಾ ದಾನಗಳ ಮಾಡಿ ಅಲ್ಲಿಂದ ಕಾಳಹಸ್ತಿಗೆ ಬಂದು | ಸ್ವಾಮಿಯ ದರ್ಶನವನ್ನು ಮಾಡಿ | ಕಾಣಿಕೆಗಳನ್ನು | ನವರತ್ನಾಭರಣಗಳನ್ನು ಗ್ರಾಮಗಳನ್ನು ಸಮರ್ಪಿಸಿ | ಶ್ರೀಮುಖ ಸಂವತ್ಸರದಲ್ಲಿ | ಶಿವಕಂಚಿ ವಿಷ್ಣುಕಂಚಿಗೆ ಬಂದು | [1]ಏಕಾಂಬರ[1]ನಾಥ | ಕಾಮಾಕ್ಷಮ್ಮ ವರದರಾಜಸ್ವಾಮಿ | [2]ಚೂಡಿ ಸೂಡುತ್ತ ನಾಚ್ಚಿಯಾರಮ್ಮನವರ[2] ಸೇವಿಸಿ ನವರತ್ನಾಭರಣಗಳನ್ನು ಗ್ರಾಮಗಳನ್ನು ಸಮರ್ಪಿಸಿ | ಶ್ರೀರಂಗಕ್ಕೆ ಜಂಬುನಾಥಸ್ವಾಮಿಯ ಸನ್ನಿಧಿಯಲ್ಲಿ | ತುಲಾ ಪುರುಷವ ತೂಗಿಸಿ ಬ್ರಾಹ್ಮರಿಗೆ ಕೊಟ್ಟು | ತ್ಯಾಗರಾಯ ಮೊದಲಾದ ಶಿವ ಸ್ಥಾನಗಳನ್ನು | ಮನ್ನಾರು ಅಳಘ ತಿರುಮಲ ಆಳ್ವಾರರ ತಿರುನಗರ | ಪಾಪವಿನಾಶ ಸೇತು ಮೊದಲಾದ ಸ್ಥಳಗಳ ನೋಡಿ | ಶ್ರೀರಂಗಪಟ್ಟಣಕ್ಕೆ ಬಂದು | ರಂಗನಾಥ ಸ್ವಾಮಿಯ ಸೇವಿಸಿ | ವಿದ್ಯಾನಗರಕ್ಕೆ ಪ್ರವೇಶವಾಗಿ ವಿಟ್ಠಲ ವಿರೂಪಾಕ್ಷಸ್ವಾಮಿ ಯವರ ಸೇವೆಯ ಮಾಡಿ | ಕಾಣಿಕೆ ಕಪ್ಪಗಳ ಯಿಕ್ಕಿ | ಅರಮನೆಗೆ ಪ್ರವೇಶವಾದ ಮೇಲೆ ದೊರೆ ಮನ್ನೆಯ ರಾವುತ ರಾಣುವೆ ಪ್ರಭು ಪಾಳ್ಯಗಾರರು ಭೇದ ನಾಯಕ ವಾಡಿಗಳು | ಕೈಸಂಬಳದ ನಿಯೋಗಿಗಳು | ಆಶ್ರಿತರನ್ನು ಮತ್ತು ಅರಮನೆಯಲ್ಲಿ ವೋಲೈಸುವ ಯೆಪ್ಪತ್ತೆರಡು ವಿನಯೋಗದವರನ್ನು | ಬೇರೆ ಬೇರೆ ಕಳುಹಿಸಿ | ಉಡು

---

1 ಯೇಕಾಂಬ್ರ 2 ಚೂಡಿಗಂಡುತ ಸಾಚಾರಮ್ಮ

ಗೊರಿ ವೀಳ್ಯವಕೊಟ್ಟು ಆದರಣೆಯ ಮಾಡಿ | ಕಳುಹಿದರಾಗಿ | ವೊಂದು ದಿನ ವೋಲಗ ದಲ್ಲಿ | ಯಿಷ್ಟಾಲಾಪ ವಿನೋದವಾಗಿ | ಅರಮನೆಯ ನಿಯೋಗಿಗಳು ವಿದ್ವಾಂಸರು | ಕವೀಶ್ವರರುಗಳು ಮುಂತಾದವರು ಯಿರಲಾಗಿ | ಪ್ರಸಂಗ ಬೆಂಬಳಿಯಲ್ಲಿ ಕೀರ್ತಿ ಶಾಶ್ವತವಾಗಿ ನಿಲ್ಲುವ ಹಾಗೆ | ಆದಿ ದೊರೆಗಳ ಕೃತಿಯಲ್ಲಿ ಕೊಂಗರವರ ಪ್ರಸಂಗ ಪ್ರತಾಪಗಳು ಯೆಲ್ಲರಿಗೂ ಯೆಣಿಸಲಾಯಿತು । ಅದರಿಂದ ತಾವೂ ಕೃತಿಯ ಹೇಳಿಸ ಬೇಕು ಯೆಂದು ಅಪ್ಪಣೆಯನ್ನು ಕೊಟ್ಟು | ಮುಕ್ಕು ತಿಮ್ಮಯ್ಯ | ಮಾದಯ್ಯ ನವರ ಮಲ್ಲಯ್ಯನವರು ವೊದಲಾದವರನ್ನು ಕೃತಿಯ ಹೇಳಿಕೊಂಡು ಬರಹೇಳಿ ಅಪ್ಪಣೆ ಕೊಟ್ಟರು | ಯಿದು ಯಿಂದಿನವರೆಗೆ ನಡೆದ ಪ್ರವರ್ತಕಗಳು | ಯಿನ್ನು ಮೇಲೆ ನಡೆದ ವರ್ತಮಾನಗಳಿಗೆ ಬಿನ್ನಹಂ ಮಾಡಿ ಕಳುಹಿ[1]ಸೇನು[1] ಚಿತ್ತಕ್ಕೆ ಪರಾಮರಿಸಿಕೊಳ್ಳ ಚಿತ್ತೈ[3]ಸುವು[2]ದು ಇಂತಿ ಬಿನ್ನಹ.

1 ಷ್ಪಸೆ   2 ಸಹ

ಅನುಬಂಧ-೧

೧. ಸ್ಥಳನಾಮಗಳು

[ಪ್ರಯೋಗ ಮೊದಲ ಸಲ ಕಂಡುಬಂದ ಪುಟದ ಸಂಖ್ಯೆಯನ್ನು ಮಾತ್ರ ಕೊಟ್ಟಿದೆ]

೧. ವ್ಯಕ್ತಿನಾಮಗಳು

ಅನುಬಂಧ–೩

[ಸೂಚನೆ—ಇಲ್ಲಿಯ ಎಷ್ಟೋ ಪದಗಳಿಗೆ ನಿಘಂಟುಗಳಲ್ಲಿ ಅರ್ಥ ದೊರೆಯುವುದಿಲ್ಲ. ಸಂದರ್ಭೋಚಿತವಾಗಿ ಅರ್ಥವನ್ನು ಊಹಿಸಿ ಕೊಟ್ಟಿದೆ. ಊಹೆ ತಪ್ಪಾಗಿರುವ ಸಂಭವ ಉಂಟು.]

ಅಂಕೆ—ಆತಂಕ, ಅಡೆತಡೆ

ಅಂಗಜಾಲರು—ರಕ್ಷಕರು

ಅಂತರಮನ್ನೆಯರು—ಪರಸ್ಪರ ಆಗದ ಮಾನ್ಯರು

ಅಂತಸ್ತು—ಮಾಳಿಗೆ, ಮಹಡಿ

ಅಂದಳ—ಪಲ್ಲಕ್ಕಿ

ಅಂಬು—ಬಾಣ

ಅಗಡಿ ತಾಕು—(ಬಾಗಿಲ ಅಗಳಿಯಂಥ) ಒಂದು ಬಗೆಯ ಆಯುಧ

ಅಘಟನಘಟನಾ ಸಾಮರ್ಥ್ಯ—ಅಸಾಧ್ಯವಾದುದನ್ನು ಸಾಧಿಸಬಲ್ಲ ಸಾಮರ್ಥ್ಯ

ಅಡಕೆ ಎಲೆ—ತಾಂಬೂಲ

ಅಡ್ಡಗತ್ತಿ—(ಅರ್ಧ ಕತ್ತಿ?) ಸಣ್ಣ ಕತ್ತಿ

ಅಣಿಮೊನೆ—ಕಾಲಾಳು ಮಾಡುವ ಯುದ್ಧ (?)

ಅರ್ಥಿ(ರ್ತಿ)ಯ(ನ್ನು)—ಪ್ರೀತಿ ಪಾತ್ರನ(ನ್ನು)

ಅನಾಗತ—ಬಾರದಿರುವ

ಅನುವಾದ—ಯೋಗ್ಯವಾದ, ಸರಿಯಾದ

ಅಪರರ್ಣ—(?)

ಅಪ್ಪಂದ—(ಆಗುವ) ರೀತಿಯಲ್ಲಿ, ತೆರನಾಗಿ

ಅಪಿನಿ—ಅಪೀಮು

ಅಭ್ಯಾಗತಿ—(ಅನಿರೀಕ್ಷಿತವಾಗಿ) ಹೊರಗಿನಿಂದ ಬರುವುದು

ಅಮರಿಕೆ—ಅಪ್ಪಣೆ, ಆಜ್ಞೆ

ಅಮರಗಾರ—(ಸೈನಿಕರನ್ನು ಒದಗಿಸುವ) ಅಮರ ಗ್ರಾಮದ, ಇನಾಮು ಗ್ರಾಮದ, ಒಡೆಯ

ಅಮರನಾಯಕ—ಅಮರಗಾರ

ಅಮಾಂತ—ಅನಾಮತ್ತಾಗಿ, ಪೂರ್ತಿಯಾಗಿ (?)

ಅವಧೂತ—(ಎಲ್ಲ ಅಭಿಮಾನಗಳನ್ನೂ ಬಿಟ್ಟ) ತೀವ್ರ ವೈರಾಗಿ

ಅವರೋಧ—ತಡೆ, ತೊಂದರೆ

ಅವಸರ—ತತ್ಕ್ಷಣದ, ಕೂಡಲೆ ಆಗಬೇಕಾದ ಕೆಲಸ

ಅವಾಂತರ—(ಯುದ್ಧದ ದೆಸೆಯಿಂದ) ತೊಂದರೆ, ಸಂಕಷ್ಟ, ಉಪದ್ರವ

ಅಹಂಮಿಕೆ—ಅಹಂಕಾರ

ಆಗತ—ಬರುವ

ಆರ್ಜಿಸು—ಗಳಿಸು, ಸಂಪಾದಿಸು

ಆಯತವಾಗಿ—ಸಿದ್ಧವಾಗಿ

ಆಯಪಾಯ—ಸಾಮರ್ಥ್ಯ (?)

ಆರೋಗಣೆ—ಊಟ, ಭೋಜನ

ಇಂದ್ರನೀಲ ಮಕುಟ—ಇಂದ್ರನೀಲ ರತ್ನಖಚಿತ ಕಿರೀಟ

(ರಾಯ) ಉಂಬಳಿ—ರಾಜಮಾನ್ಯ ಭೂಮಿ; ರಾಜನ ಹಂಗು, ಋಣ

ಊ(ಅ?)ಟಂಕಿಸಿ—(?)

ಉಡುಗೊರೆ—ಬಹುಮಾನ, ಮೆಚ್ಚುಗೆ
ಉಭಯಾಯತ್ತ—ರಾಜ ಸಚಿವರಿಬ್ಬರಿಗೂ ಸಮಾನವಾದ ಸಿದ್ಧಿ (ಸ್ವಂತ ಸಿದ್ಧಿ ಮತ್ತು ಸಚಿವ ಸಿದ್ಧಿ)
ಉಳಿಸಿ—ಉತ್ತು; ಉಳುಮೆ ಮಾಡಿಸಿ
ಊಳಿಗ—ಸೇವೆ
ಏಕದೇಶ—ಒಂಟಿತನ, ಒಂಟಿಯಾಗಿ
ಕಂದಾಚಾರ—ಸೇನೆಗೆ ಸಂಬಂಧಪಟ್ಟ
ಕಡಗ—ಕೈಬಳೆ
ಕಡಿವಳ—ಕಡಿವಾಣ
ಕಡೆಹಾಯಿಸು—ಪಾರುಮಾಡು
ಕದಲಿಹೋಗು—ಸ್ಥಳ ಬಿಟ್ಟುಹೋಗು
ಕನಕಪಟ್ಟ—(ಪಟ್ಟಾಭಿಷಿಕ್ತರ ಹಣೆಗೆ ಕಟ್ಟುವ) ಚಿನ್ನದ ಪಟ್ಟಿ
ಕಪಾರ—(=) ಕಪೂರ (?)
ಕಪೂರ ಮಾಡು—ನೆಲಸಮಮಾಡು, ನಾಶಪಡಿಸು (?)
ಕಬಾಯಿ—ನಿಲುವಂಗಿ
ಕಬ್ಬಿಲ—ಬೇಡ; ಬೆಸ್ತ
ಕರಣಿಕ—ಕಾರಕೂನ, ಗುಮಾಸ್ತ
ಕರತಳಾಮಳಕ—(ಅಂಗಯ್ಯ ನೆಲ್ಲಿಯಂತೆ) ಅತ್ಯಂತ ಸ್ಪಷ್ಟ
ಕಲಸಿದ ಜಗಳ—ಪರಸ್ಪರ ತೊಡಗಿದ ಕದನ
ಕವಲು—ಸಂಧಿ; ಕೌಲು
ಕವಳ—ತುತ್ತು; ಆಹಾರ, ಅನ್ನ; ಗ್ರಾಸ
ಕಳವು ಸೊಕ್ಕಿ—ಬವಳಿ ಬಂದಂತಾಗಿ
ಕಾಗಜ—ಕಾಗದ
ಕಾರ್ಯವಂಟೆದರೆ—ಯುದ್ಧ ಸಂಭವಿಸಿದರೆ

ಕಾಲಜ್ಞ—ಕಾಲಗತಿ ಅರಿತವನು; ಭವಿಷ್ಯಜ್ಞಾನಿ
ಕಾಲ್ಬಲ, ಕಾಲಾಳು—ಪದಾತಿ ಸೈನ್ಯ
ಕಾಲುವೆ(ಗಳುಂಟಾದ)—(?)
ಕಿರುಮಂಜಿ—ಗುಲಗಂಜಿ
ಕುರುಬೆಟ್ಟ—ಮೊನಚಾದ ಉಗುರು
ಕುಲ್ಲಾಯಿ—(ತಲೆಗೆ ಧರಿಸುವ) ಕುಲಾವಿ ಟೊಪ್ಪಿಗೆ
ಕೂಚಿ—ಸೈನ್ಯದ ಕರೆ ಕೂಗು
ಜವದಾಡೆ—ಒಂದು ಒಡವೆ
ಕೈಗಲ್ಲು—ಕೈಯಿಂದ ಎಸೆಯುವ ಕಲ್ಲುಗುಂಡು (?)
ಕೈಜಿತ—ನಿಯಮ; ಕೈಮಾಡದಿರುವುದು (?)
ಕೈಸಂಬಳ(ಬಲ)—(ಖಾಯಂ ಸೇನಾಬಲಕ್ಕೆ ವಿರುದ್ಧವಾಗಿ) ಕೈಮೇಲೆ ಕೊಡುವ ಕೂಲಿ ಹಣ, ಹಾಗೆ ಕೂಲಿ ಕೊಟ್ಟು ನೇಮಿಸಿಕೊಂಡ ಸೈನ್ಯ; ಕೂಲಿ ಸೈನ್ಯ.
ಕೈಸಂಬಳದವರು—ಕೂಲಿಗೆಲಸದವರು
ಕೈಹಿಡಿತ—ಕೈಸೆರೆ
ಕೊಂತ—ಉದ್ದನೆ ಕೊರಡು
ಕೊರಳ ಬಲವಂತ—ಉಭಯ ಸಂಕಟದ ಸ್ಥಿತಿ (?)
ಕ್ಷೋಣಿ ಮಂಡಲ—ಭೂಮಂಡಲ
ಕೌಮಾರಿತಿ—ಕುಮಾರಿ, ಮಗಳು
ಖಂಡ (=ಖಂಡೆಯ)—ಕತ್ತಿ
ಖಂಡಿಸು—ಕತ್ತರಿಸು, ಕತ್ತರಿಸಿ ಕೊಲ್ಲು
ಗಂಹರ—ಗಹ್ವರ; ಗುಹೆ; ಪೊದೆಗಾಡು

ಗಟ್ಟ—ಘಟ್ಟ, ಬೆಟ್ಟಗುಡ್ಡದ ಎಡೆ ;
ಎತ್ತರದ ಜಾಗ
ಗಡಹಾರೆ—ಉದ್ದನೆಯ ಹಾರೆ
ಗಡೆ (=ಘಟೆ)—ಗುಂಪು, ಸಮೂಹ
ಗರ್ಭೋಕ್ತಿ—ಒಗಟು ಮಾತು ;
ರಹಸ್ಯಾರ್ಥ ಉಳ್ಳ ಮಾತು
ಗರುಡಿ—ವ್ಯಾಯಾಮ ಶಾಲೆ
ಗಾವುದ—ನಿರ್ದಿಷ್ಟದೂರ ;
ಸು. 6 ಮೈಲಿ
ಗ್ರಾಸ—ನಿಗದಿಯಾದ ಆಹಾರ,
ಭೋಜನ ಸಾಮಗ್ರಿ; ಪಡಿ(ತರ)
ಗಿಂಡಿ—(ಕೊಕ್ಕುಮೂತಿ ಉಳ್ಳ)
ಕುಡಿಯುವ ಪಾತ್ರೆ
ಗಿಡುಗ—ಹದ್ದಿನ ಜಾತಿಯ ಹಕ್ಕಿ
ಗಿರಿದುರ್ಗ—ದುರ್ಗವಾದ ಬೆಟ್ಟ
ಗಿಳಿತಾಳಿ—ಒಂದು ಬಗೆಯ ಒಡವೆ
ಗುಂಡಿಗೆ—ಎದೆ ; ಹೃದಯ
ಗುಡಾರ—ಶಿಬಿರ, ಡೇರೆ, ಬಿಡಾರ
ಗುದಿ—ಕಟ್ಟು; ಒಟ್ಟುಗೂಡಿಕೆ
ಗುದಿಗೆ—ಒನಕೆಯಂಥ ದೊಣ್ಣೆ
ಗುದಿಗೆಕೈಯವರು—ಗುದಿಗೆ ಹಿಡಿದ
ವೀರರು
ಗೂಡೆ—ದೊಡ್ಡ ಬುಟ್ಟಿ, ಮಂಕರಿ
ಗೋಣಿ—ಗೋಣಿ ಚೀಲ
ಗೂಢಚಾರ—ಬೇಹುಗಾರ ; ವೇಷ
ಬದಲಾಯಿಸಿಕೊಂಡು ಸುದ್ದಿ
ಸಂಗ್ರಹಿಸುವವನು
ಘಟೆ (=ಘಟೆ) —ಗುಂಪು
ಘಟ್ಟಿ—ಉಂಡೆ ನಾಣ್ಯ
(ಉದಾ, ಘಟ್ಟಿವರಹ)
ಘಟ್ಟಿಗ—ಘಟ್ಟಿ

ಚಲನ—ತಪ್ಪಿಹೋಗುವ ಅಪಾಯ (?)
ಚಾವಡಿ—ಕುಳಿತುಕೊಳ್ಳುವ ಜಗಲಿ,
ತಂಗುವ ಮನೆ ; ಠಾಣ್ಯ
ಚಾತಿ (=ಛಾತಿ) —ಎದೆಗಾರಿಕೆ
ಚೂಣಿ—ಸೈನ್ಯದ ಮುಂಭಾಗ
ಜಗಳ—ಯುದ್ಧ
ಜತನ—ಜೋಪಾನ
ಜಬರಜಂಗಿ—ಒಂದು ಬಗೆಯ
ಫಿರಂಗಿ
ಜಲದುರ್ಗ—ನೀರಿನ ನಡುವಣ
ದುರ್ಗ, ಕೋಟೆ
(ಉದಾ, ಶ್ರೀರಂಗಪಟ್ಟಣ)
ಜಪಾಕಂಬ—ಜಪದ ಕಂಬ (?)
ಜಿರೆ—ರಕ್ಷಾಕವಚ (?)
ಟೂಕಿಸು—ಬಾರಿಸು (?)
ಠಾಣ್ಯ—ಸೈನ್ಯದ ಶಿಬಿರ, ಪಾಳೆಯ
ಡಮಾನ—ಜೊಡಿ ನಗಾರಿ
ಡಮಾಮಿ—ಒಂದು ಬಗೆಯ
ರಣವಾದ್ಯ
ಡೆರಿಜ (ಹಾಕುವುದು)—(ಸೈನ್ಯದ)
ಡೇರೆ, ಬಿಡಾರ, ಪಾಳೆಯ
ಡಾಳು—ಬಿರುದಿನ ಧ್ವಜ
ತಡಿ—ದಡ ; ಹತ್ತಿರ
ತಸ್ಕರ—ಕಳ್ಳ
ತರ(ರು)ಬು—ಅಟ್ಟಿಕೊಂಡು
ಹೋಗು, ಬೆನ್ನಟ್ಟು
ತಲೆಪಾಗು—(ವೀರರು) ತಲೆಗೆ
ಸುತ್ತುವ ಉದ್ದನೆಯ ಬಟ್ಟೆ,
ರುಮಾಲು
ತಳವಾರ—ಗ್ರಾಮ ರಕ್ಷಕ,
ಕಾವಲುಗಾರ, ಕೊತ್ವಾಲ

ತಳಿಗೆ—ತಟ್ಟೆ
ತಾಕಿದವರು—ಎದುರುಗೊಂಡವರು, ಭೇಟಿಯಾದವರು
ತಾಕು—ಎಡೆ, ತಾಣ, ಸ್ಥಳ
ತಾಹರೆ—ತರುವರಿ
ತಾಳಿಚಾಕಳಿ (—ಚೌಕುಳಿ) ಒಂದು ಬಗೆಯ ಒಡವೆ
ತಾಳುವೆ—ತಾಳ್ಮೆ
ತಾಣ್ಯ—ಠಾಣ್ಯ; ರಕ್ಷಕ ಸೈನ್ಯ
ತಿಟ್ಟು—ಎತ್ತರದ ತಾಣ
ತುಂಬಿಯ ತಾಳಿ—ಒಂದು ಬಗೆಯ ಒಡವೆ
ತುಕಡಿ—ಸೈನ್ಯದ ದಳ, ಭಾಗ
ತುರು—ಹಸುಕರು
ತುರುಷ್ಕ—ತುರುಕ
ತೃಣಗ್ರಾಹಿ—ಹುಲುಮನುಷ್ಯ, ಕೆಲಸಕ್ಕೆ ಬಾರದವನು
ತೇಜಿ—ಕುದುರೆ
ದಟ್ಟಿ—ತುಂಡು ಪಂಚೆ
ದಬ್ಬಿಸು—(ದಬ್ಬಿ) ಕೆಡವು, ಬೀಳಿಸು
ದಧಿ—ಮೊಸರು
ದಲಬಲ—ಸೇನಾ ಬಲ
ದಿಗ್ದೇಶ—(ಬೇರೆ ಬೇರೆ) ದಿಕ್ಕುಗಳು, ದೇಶಗಳು
ದಿವಾಣ—(ಅರಮನೆಯ) ಒಳಭಾಗ, ಓಲಗ ಸಾಲೆ
ದೀವಟಿಗೆ ಓಲಗ—(ದೀವಟಿಗೆಯ ಬೆಳಕಿನಲ್ಲಿ) ಇರುಳೋಲಗ
ದುನ್ನೆದಾರರು—ಗೂಢಚಾರರು
ದೇವಾದಾಯ—ದೇವಾಲಯಕ್ಕೆ ದಾನಕೊಟ್ಟ ಜಮೀನು; ದೇವಮಾನ್ಯ

ದೇಶವಾರ್ತೆ—ಇತರ ದೇಶಗಳ (ಮುಖ್ಯವಾಗಿ ಶತ್ರುದೇಶಗಳ) ಸುದ್ದಿ
ನಗ—ಒಡವೆ
ನಾಮಜಾದು—ಒಬ್ಬನ ಹೆಸರಿನಲ್ಲಿ ಹೊರಡಿಸುವ ಆಜ್ಞೆ, ಆದೇಶ
ನಾಯಕವಾಡಿ—ನಾಯಕ ನಿವಾಸ
ನಿಯೋಗಿ—ಪ್ರತಿನಿಧಿಯಾಗಿ ಕೆಲಸ ಮಾಡುವವನು; ಪ್ರತಿನಿಧಿ
ನಿರಪ್ಪಣೆ—ಕಟ್ಟಪ್ಪಣೆ
ನೊಸಲು—ಹಣೆ
ಪಡಿಹಾರ—ದ್ವಾರಪಾಲಕ
ಪಣ್ಯಾರ—ಹಣ್ಣು ಹಂಪಲಿನ ಉಪಾಹಾರ, ಫಲಾಹಾರ
ಪರ್ಯಾಯ—ಸಂಗತಿ (?)
ಪರಭಾರ—ಅತಿಶಯವಾದ ಭಾರ, ಹೆಚ್ಚಿನ ಹೊಣೆಗಾರಿಕೆ
ಪರಾಕು—ಹೊಗಳಿಕೆ, ಪ್ರಶಂಸೆ
ಪರಾಮರಿಸು—ವಿಚಾರಿಸಿ ತಿಳಿ
ಪ್ರಜೆಪತ್ತು—ಪ್ರಜಾಸಂಪತ್ತು
ಪ್ರವರ್ತಕ—ಘಟನೆ, ಸಂಗತಿ, ಸುದ್ದಿ
ಪ್ರಸಂಗ ಬೆಂಬಳಿ—ಸಂಗತಿಗಳ ನಿರೂಪಣೆ (?)
ಪಾಂಡವವನಿತೆ—ದ್ರೌಪದಿ
ಪಾಯಿದಳ—ಕಾಲಾಳುಗಳ ಸೈನ್ಯ, ಪದಾತಿ ಸೈನ್ಯ
ಪಾರುಪತ್ಯ—ಮೇಲ್ವಿಚಾರಣೆ, ಯಜಮಾನಿಕೆ
ಪಾವಕ—ಅಗ್ನಿ
ಪಾಳ್ಯ—ಶಿಬಿರ, ಬೀಡು
ಪಾಳ್ಯಗಾರ—ಪಾಳೆಯಗಾರ, ಸೇನಾ ಶಿಬಿರದ ಒಡೆಯ
ಪಿಂಗಾಡಿ—ಹಿಂದಿನ ಸಾಲು (?)

ಫಣಿತೆ—ರೀತಿ, ವಿಧಾನ
ಫಿರಂಗಿ—ಗುಂಡು ಹಾರಿಸುವ ಭಾರಿ ತುಪಾಕಿ
ಫೆನಕುಂಬ (ಫೇನಕುಂಭ)—ನೊರೆ ಉಕ್ಕುವ (ಹಾಲು, ಮದ್ಯ, ತುಂಬಿದ ?) ಕೊಡ
ಬಡಕುಬಗ್ಗು—ಕೈಲಾಗದವರು (?)
ಬಹಿರ್ವಾಸ—ಮೇಲುಹೊದಿಕೆ, ಉತ್ತರೀಯ
ಬಾವಂತರಾಗಿ (=ಬಾಹಂತವರಾಗಿ ?) ಬರುವುದಕ್ಕೆ ಸಿದ್ಧರಾಗಿ (?)
ಬಾಹುಪುರಿ—ತೋಳಬಂದಿ
ಬಿಡದಿ—ಬಿಡಾರ, ಬೀಡುಬಿಟ್ಟ ಸ್ಥಳ
ಬೀಗಮುದ್ರೆ—ಬೀಗ ಹಾಕಿ ಅದರ ಮೇಲೆ (ರಾಜ) ಮುದ್ರೆ
ಬೆಂಬಳಿ— ಬೆಂಗಾವಲು (?)
ಬೇರಾ—ಬೇಹಾರ (ವ್ಯಾಪಾರ) ವೃತ್ತಿಯ (?)
ಬೇಹಿನವರು—ಗೂಢಚಾರರು (ಬೇಹು=ಗೂಢಚರ್ಯೆ)
ಬ್ರಹ್ಮಾದಾಯ—ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಭೂಮಿ
ಮಂಡಲಿಸಿದ್ದು—ಸುತ್ತುಗಟ್ಟಿ (?)
ಮಡಿ—ಪಟ್ಟೆ
ಮದ್ದು ತಿಂಬವರು—ಅಫೀಮು ಮುಂತಾದ ಮಾದಕ ದ್ರವ್ಯ ಸೇವಿಸುವವರು
ಮಣಿಹಗಾರರು—ಊಳಿಗದವರು, ಸೇವೆ ಮಾಡುವವರು
ಮನ್ನೆಯರು—ಮಾನ್ಯರು; ಸಾಮಂತರು
ಮಾತಿನ ವಾಸಿ—ಮಾತಿನ ನಂಬಿಕೆ (?)
ಮಾನ—ಅಳತೆ
ಮಾನ್ಯ—ದಾನವಾಗಿ ಕೊಟ್ಟ ಭೂಮಿ
ಮಾವುತ—ಆನೆಯನ್ನು ನಡೆಸುವವನು
ಮುಖಾಮಿ—ಮುಖಂಡ (?)
ಮೊಗರಂಬ—ಒಂದು ಬಗೆಯ ಒಡವೆ
ಮುದ್ರೆಪಡಿ—ಮೊಹರು
ಮುರಿಹೊಯ್ದು—ಬಗ್ಗುಬಡಿದು, ಹೊಡೆದು ಹಾಕಿ
ಮುಷ್ಕರ—ಛಲ, ಹಠ
ಮುಸ್ತೈದೆ—ಸರಬರಾಜು (?)
ಮೂಡಗಡೆ—ಪೂರ್ವ ದಿಕ್ಕು
ಮೊನೆ—ಯುದ್ಧ
ಮ್ಲೇಚ್ಛರು—ಹಿಂದುಗಳಲ್ಲದವರು, ಮುಸಲ್ಮಾನರು
ಮೇರುಕೋಟಿ ದಾನ—ಅಳತೆ ಮೀರಿದ ದಾನ
ಮೌಕ್ತಿಕ ತುಲಾ—ಮುತ್ತಿನ ತುಲಾಭಾರ
ರಜತ ತುಲಾ—ಬೆಳ್ಳಿಯ ತುಲಾಭಾರ
ರಸ್ತುಸಾಮುಗ್ರಿ—ಆಹಾರಸಾಮುಗ್ರಿ(?)
ರಾಣುವೆ—ಸೈನ್ಯ
ರಾಯಸದವರು—ಬರೆಯುವವರು, ಲಿಪಿಕಾರರು
ರಾವುತ—ಕುದುರೆ ಸೈನಿಕ
ರೊಕ್ಕ—ಹಣ
ರೊಕ್ಕೆ—ರಹಸ್ಯದ (?)
ಲಗ್ಗೆ—ದಾಳಿ
ಲಹರಿ ಪುರುಷ—ಮನಸ್ಸು ಬಂದಂತೆ ನಡೆದುಕೊಳ್ಳುವವನು
ವಜೀರ—ಮಂತ್ರಿ

ವತ್ಸನಾಭಿ—ವಿಷಪ್ರಭೇದ
ವದ್ಯ (ಬದ್ಯ) ನೀತಿ—ದೂಷ್ಯವಲ್ಲದ ನೀತಿ
ವರಹ—(ವಿಜಯನಗರದ ಅರಸರ) ಚಿನ್ನದ ನಾಣ್ಯ
ವಾಘೆ—ಲಗಾಮು
ವಾಸ್ತುಪುರುಷ—ರಾಜ್ಯ, ಕಟ್ಟಡ, ಇವುಗಳ ಪ್ರಾರಂಭ ಕಾಲದಲ್ಲಿ, ನಿವೇಶನದಲ್ಲಿ ನಿಕ್ಷೇಪ ಮಾಡುವ ವಾಸ್ತುಶಿಲ್ಪದ ಅಧಿದೇವತೆಯ ಪ್ರತಿಮೆ
ವಿನಿಯೋಗಪವರು—ವಿಶೇಷ ಕಾರ್ಯಗಳಿಗೆ ನಿಯುಕ್ತರಾದವರು
ವೊ(ಒ)ಕ್ಕಲು ಸಕ್ಕಲು—ಬೇಸಾಯಗಾರರು, ರೈತರು
ವೋ(ಓ)ಲೆ ಕಾಳಿ—ಓಲೆಕಾರ
ವೋ(ಓ)ಲೈಸು—ಸೇವಿಸು
ಶಕುನಗಾರ—ಶಕುನ ಹೇಳುವವನು
ಷೋಡಶಪಾತ್ರರು—(ಗಜಪತಿಯ ಅಧೀನರಾದ) ಹದಿನಾರು ಮಂದಿ ಪ್ರಬಲ ಸಾಮಂತರು
ಸಂಗಡ—(ಗರಡಿ ಮನೆಯ) ವ್ಯಾಯಾಮ ಸಾಧನ
ಸಂಬುದ್ಧಿ—ವಿವೇಕ ಹೇಳುವುದು (?)
ಸಂಪ್ರತಿ(ಯವರು)—ಅರಮನೆಯ ಬೇರೆ ಬೇರೆ (ಕರಣಿಕ) ಇಲಾಖೆ(ಯವರು)
ಸನ್ನೆ—ಭಾರವನ್ನು ಎತ್ತುವ ಸಾಧನ
ಸರಹದ್ದು—ಎಲ್ಲೆಕಟ್ಟು, ಸೀಮಾರೇಖೆ
ಸಾಮಾಧಿ(ಜ)ಕರು—ಸಭಾಸದರು, ಆಪ್ತ ಸಲಹೆಗಾರರು
ಸಿಂಹಲಲಾಟ—ಒಂದು ಬಗೆಯ ಒಡವೆ
ಸೀಮೆ ಮಣಿತೂಗಾರ—?
ಸುಲಿಗೆ—ದೋಚಿಕೊಂಡದ್ದು, ಕಪ್ಪ
ಸ್ಥಳದುರ್ಗ—(ಬಯಲು ಪ್ರದೇಶದಲ್ಲಿ ಕಟ್ಟಿದ) ಕೋಟೆ
ಸ್ಥಳಭ್ರಷ್ಟ—ನೆಲೆ ತಪ್ಪಿದವನು, ಆಶ್ರಯದಿಂದ ಹೊರಗಾದವನು
ಸ್ಥಾನಪತಿ—(ರಾಜ್ಯದ ಬೇರೆ ಬೇರೆ ಭಾಗಗಳ) ಆಡಳಿತಾಧಿಕಾರಿ (?)
ಸ್ತ್ರೋಮಶುದ್ಧಿ—(?) ಗುಂಪಿನ ಸರಿಪಡಿಕೆ
ಹರುವು, ಹರುಹು—ಕೊನೆಗಾಣಿಕೆ(?), ಪರಿಹಾರ, ಉಪಾಯ
ಹರಿಗೆ—ಒಂದು ಬಗೆಯ ಒಡವೆ
ಹವಾಲು—ಅಧಿಕಾರ ವರ್ಗಾವಣೆ, ವಶ, ಸ್ವಾಧೀನ
ಹತಶೇಷರು—ಸಾಯದೆ ಉಳಿದುಕೊಂಡವರು
ಹುರುಮಂಜಿ—ಒಂದು ಬಗೆಯ ಖನಿಜ ವಸ್ತು, ರತ್ನ ಶಿಲೆ (?)
ಹುರುಮತಿ—ಪರಾಕ್ರಮ, ಹುರುಪು, ಉತ್ಸಾಹ
ಹುಯ್ಯಿ—ಹೊಡೆ, ದಂಡಿಸು
ಹುಲಿತಲೆ—ಕೋಟೆಯ ಗೋಡೆಯ ತೆನೆಗಳ ನಡುನಡುವೆ ಆಯುಧ ಪ್ರಯೋಗಕ್ಕಾಗಿ ಏರ್ಪಡಿಸಿದ (ಹುಲಿತಲೆಯಾಕಾರದ) ಬುರುಜುಗಳು
ಹೆಗ್ಗಡಿಕಾತಿ—ಹೆಗ್ಗಡಿತಿ, ಗ್ರಾಮದ ಒಡತಿ
ಹೆಡತಲೆ—ತಲೆಯ ಹಿಂಭಾಗ
ಹೇರು—ಮೂಟೆ
ಹೊರಗುಡಾರ—(ಕೋಟೆಯ) ಹೊರಗಿನ (ಸೇನೆಯ) ಡೇರೆ
ಹೋರು—ಯುದ್ಧ ಮಾಡು

ತಿದ್ದುಪಾಟು

ಪುಟ	ಪಂಕ್ತಿ	ತಪ್ಪು	ಸರಿ
1	6	ವಧ್ಯನೀತಿ	ವದ್ಯನೀತಿ
2	23	ವೊಲೆಕಾಳಿ	ವೋಲೆಕಾ[ರಿ][2a]
		(ಅಡಿ ಟಿಪ್ಪಣಿಯಲ್ಲಿ 2a ಳ ಎಂದು ಸೇರಿಸಬೇಕು)	
3	12	ಪುಂಖಾ(?)ವ	ಪುಂಭಾವ
5	3	ಚಲಿನದಂಥ	ಚಲಿಸಿದಂಥ
8	21	ನೆರಿಗೆ	ಸಿರಿಗೆ
10	10	[1]ಧನಬಲ[1]	ದಲಬಲ
		(ಈ ಅಂಕಿಯ ಅಡಿ ಟಿಪ್ಪಣಿಯನ್ನು ಬಿಡಬೇಕು)	
10	25	ಯಿಂದಾ ರಾಜ್ಯವಾಗಿ	ಯಿಂದಾರಭ್ಯವಾಗಿ
11	8	ಬರುವರಾದ	ಬರುವರಾದ ಕಾರಣ
12	9	ಬದ್ಯ[ಪದ್ಯ?]	ಬದ್ಯ [ವದ್ಯ?]
13	2	ಜಿಠೆ	ಜಿರೆ
15	28	ಪತ್ರಿ	ಪ್ರತಿ
16	14	ಕಾಯಾಳು	ಕಾಲಾಳು
16	30	ಯೆಂಡಿನ	ಯೆಂದಿನ
17	9	ಕಾತಾಳಿಗೂ	ಕಾಲಾಳಿಗೂ
19	6	ಕುರುಬನ	ಕುತುಬನ
21, 27	18, 5	ಸಾವಮಾದಿಕ	ಸಾವಮಾಜಿಕ
22	9	ಯಿದು	ಯಿದ್ದು
22	14	ನಾವುಚಾದಃ	ನಾವುಜಾದು
26	4	ಗೋಲಕಂಡೆ	ಗೋಲಕೊಂಡ
26	28	ಮಹಾಷ್ಟ್ರ	ಮಹಾರಾಷ್ಟ್ರ
28	18	ತಿಪ್ಪರಸ	ತಿ[ಮ್ಮ?]ಪ್ಪರಸ
29	10	ಬರಿದು(ಬಂದು?)	ಬರಿದು (ಬರೀದ)
30	15	ಕರ್ನಾಟಕದವರೆ	ಕರ್ನಾಟಕದವರ
31	30	ಅಡಿಟಿಪ್ಪಣಿ :	
		ಮೆನೊನೆತ್ತಿ	ಯೆನೊನೆತ್ತಿ

32	8	ಕೆರೆಸಿ	ಕರೆಸಿ
34	1	[1]ಡಮಾ[ಯಿ][1]	ಡಮಾಯಿ
		(ಇದರ ಅಡಿಟಿಪ್ಪಣಿ ಬಿಡತಕ್ಕದ್ದು)	
35	30	ಅಡಿಟಿಪ್ಪಣಿ : ಮಾತ್ರ್ತಕೆ	ಮಾತ್ರ್ತತ
39	3	ಮುಡಿಗಲ್ಲು	ಮುದಿ[ದು]ಗಲ್ಲು
39	11	ಗಾವುದ[2]ವಸಕಾರ[2]ವ	ಗಾವುದವ ಕಪಾ[ಪೂ]ರವ
		[ಅಡಿಟಿಪ್ಪಣಿ 2 : ಬಿಡತಕ್ಕದ್ದು]	
41	9, 27	ಕೊಂಡೆ	ಕೊಂಡ
42	12	ಶೌತ್ರವರು	ಶಾತ್ರವರು
43	15, 21	ಚೆತ್ತ್ರಾಬುಖಾನ	ಚಿತ್ತ್ರಾಬುಖಾನ
45	25	ಹೇಳಲಾದಿರಿ	ಹೇಳಲಾಪಿರಿ
47	13	ಚಿತ್ರದಲ್ಲಿ	ಚಿತ್ತ್ರದಲ್ಲಿ
49	15	ಕಿರುಮಂಜಿ	ಹುರುಮಂಜಿ
52	18-19	[2]ಚೂಡಿಸೂಡುತ್ತ	[2]ಶೂಡಿಕುಡುತ್ತ

——

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ (ರಿ.)

೫೪, ೩ನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ, ಬೆಂಗಳೂರು-೧೯

ಪ್ರತಿಷ್ಠಾನದ ಪ್ರಕಟನೆಗಳು

೧. ಕೀರ್ತನ ಕುಸುಮಾಂಜಲಿ ರೂ. ೧೦-೦೦
(ನಾರಾಯಣ ದಾಸರ ಕೀರ್ತನೆಗಳು)

೨. ಮಣಿಹ ೫೦-೦೦
(ದಿ|| ಫ. ಗು. ಹಳಕಟ್ಟಿಯವರ ಸಂಸ್ಮರಣ ಸಂಪುಟ)

೩. ಬೇಂದ್ರೆ ಸ್ಮೃತಿ ೫-೦೦

೪. ಸರ್ವಜ್ಞ ವಚನಗಳು ರೂ. ೧೫-೦೦

೫. [illegible]ೂತ ಭಾರತ ೧೫-೦೦

೬. ಧ್ರುವ ಚರಿತ್ರೆ ೧೫-೦೦
(ತಿಮ್ಮಪ್ಪ ದಾಸರ ಸಾಂಗತ್ಯ ಕೃತಿ)

೭. ಶ್ರೀ ಕೃಷ್ಣದೇವರಾಯನ ದಿನಚರಿ ೧೦-೦೦

೧. ತಿಮ್ಮಪ್ಪ ದಾಸರ "ಶ್ರೀ ಕೃಷ್ಣ ಬಾಲಲೀಲೆ" (ಸಿದ್ಧತೆಯಲ್ಲಿ)

೨. ,, ಪರಬ್ರಹ್ಮ ಪ್ರಕಾಶಿಕೆ ,,

೩. ಜಾಯೇಂದ್ರನ "ರಸಮಂಜರಿ" ,,

ಮಾರಾಟಕ್ಕಿರುವ ಇತರ ಕೃತಿಗಳು

೧. ಪ್ರೊ|| ಎಂ. ವಿ. ಸೀ. ಅವರ ಪುಸ್ತಕಗಳು: ಸೆಟ್ಟಿಗೆ ರೂ. ೨೦-೦೦
(ರಾಘವ ಪ್ರಕಾಶನದ ಕೊಡುಗೆ)

೨. ಕವಿ ಜಿಹ್ವಾಬಂಧನ ೨-೦೦
(ಶ್ರೀಮತಿ ಕೆ. ಶಾಂತಾ ಅವರ ಕೊಡುಗೆ)

೩. ಕೈಲಾಸಂ ಅವರ ಕೆಲವು ನಾಟಕಗಳು
(ಶ್ರೀ ಬಿ. ಎಸ್. ರಾಮರಾಯರ ಕೊಡುಗೆ)

೪. ಷೇಕ್ಸ್‌ಪಿಯರನ 'ಹನ್ನೆರಡನೆಯ ರಾತ್ರಿ' ೬-೦೦
(ಡಾ|| ಪಿ. ವಿ. ನಾರಾಯಣ ಅವರ ಕೊಡುಗೆ)

೫. ಅಧ್ಯಯನ (ಡಾ|| ಶಂ. ಬಾ. ಜೋಶಿ ಅಭಿನಂದನ ಗ್ರಂಥ: ೫೦-೦೦
ಅಭಿನಂದನ ಸಮಿತಿಯ ಕೊಡುಗೆ)

* ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್

† ಪ್ರತಿಗಳಿಗಾಗಿ ಪ್ರತಿಷ್ಠಾನದ ವಿಳಾಸಕ್ಕೆ ಬರೆಯಿರಿ
ಸದಸ್ಯರಿಗೆ ನಿಯಮಾನುಸಾರ ರಿಯಾಯಿತಿ

ಆಳಾಗಲಿ ಅರಸಾಗಲಿ, ಆತನ ವ್ಯಕ್ತಿತ್ವ ಹೊಮ್ಮಿ ಬೆಳಕಿಗೆ ಬರುವುದು ಆತನ ನಡೆನುಡಿಗಳ ಮೂಲಕ; ಈ ಬಖೈರಿನ ಕರ್ತರು ಇದನ್ನು "ಕೃಷ್ಣದೇವರಾಯರ ದಿನಚರಿಯು ಕೃತ್ಯಗಳ ವಿಸ್ತಾರ" ಎಂದು ಕರೆದಿರುವುದರಿಂದ, ಕೃಷ್ಣದೇವರಾಯನ ಗೈಮೆ ಗರಿಮೆ ಹಿರಿಮೆಗಳನ್ನು ಚಿತ್ರಿಸುವುದೇ ಇದರ ಮುಖ್ಯ ಉದ್ದೇಶವಾಗಿ ಕಾಣುತ್ತದೆ.

ಪ್ರಮಾಣದ ದೃಷ್ಟಿಯಿಂದ ಕೃತಿ ಸಣ್ಣದು. ಆದರೆ ಅದರಲ್ಲಿ ಅಡಗಿರುವ ವಿಷಯದ ವ್ಯಾಪ್ತಿಯನ್ನು ಗಮನಿಸಿದರೆ ದಿನ ದಿನದ 'ಕೃತ್ಯಗಳ ವಿಸ್ತಾರ' ಎಂಬ ಮಾತು ಈ ಕೃತಿಗೆ ಸಲ್ಲುತ್ತದೆ.

ಈ ದಿನಚರಿಯು ಒಕ್ಕಣೆ ಬಲುಮಟ್ಟಿಗೆ ವಸ್ತುನಿಷ್ಠವಾದ ದಾಖಲೆಯಾಗಿ ಪರಿಣಮಿಸಿದೆ; ಕೃಷ್ಣದೇವರಾಯನ ಮೊದಲ ಹತ್ತು ವರ್ಷಗಳ ಆಳ್ವಿಕೆಯ ಮುಖ್ಯ ಘಟನೆಗಳನ್ನು ಪ್ರತ್ಯಕ್ಷದರ್ಶಿಯ ವರದಿಯ ರೀತಿಯಲ್ಲಿ ನಿರೂಪಿಸುತ್ತದೆ. ಈ ದಿನಚರಿ ಕೃಷ್ಣದೇವರಾಯನ ಆಳ್ವಿಕೆಗೆ ಸಂಬಂಧಪಟ್ಟಂತೆ ಚರಿತ್ರ ಗ್ರಂಥಗಳಲ್ಲಿ ಕಾಣಸಿಕ್ಕದ ಕೆಲವು ವಿಚಾರಗಳನ್ನು ಹೇಳುವುದರಿಂದ ಐತಿಹಾಸಿಕ ಮೌಲ್ಯವುಳ್ಳದ್ದಾಗಿದೆ; ಚರಿತ್ರೆಯ ವಿದ್ಯಾರ್ಥಿಗಳು ಅಧ್ಯಯನ ಮಾಡಲು ಯೋಗ್ಯವಾಗಿದೆ. ಹೀಗಿದ್ದರೂ, ವಿಶಿಷ್ಟವಾದ ಗದ್ಯಶೈಲಿಯ ಈ ಕೃತಿಯಲ್ಲಿ ಸಾಹಿತ್ಯಗುಣಲೇಪವೂ ಸಹೃದಯರಿಗೆ ಗೋಚರಿಸದೆ ಇರದು. ಇಲ್ಲಿಯ ಶಬ್ದಪ್ರಯೋಗಗಳೂ ಗಮನಾರ್ಹ.